ಪುಸ್ತಕ ಪ್ರಪಂಚ

ಜನವರಿ ೧೯೯೫



ಓದಲೇ ಬೇಕಾದ ಕೃತಿ—

ಶ್ರೀ ಸಿದ್ಧಯ್ಯ ಪುರಾಣಿಕರ—ಶರಣ ಚರಿತಾಮೃತ

—3ನೆಯ ಮುದ್ರಣದಲ್ಲಿ ಸಮಿತಿಯಿಂದ ಪ್ರಕಟಗೊಂಡಿರುವ ಜನಪ್ರಿಯ ಕೃತಿ.

—800 ಪುಟಗಳಷ್ಟು ವ್ಯಾಪ್ತಿಯಲ್ಲಿ ಶರಣರ ಜೀವನ ಚರಿತ್ರೆಯನ್ನು ಒಳಗೊಂಡಿರುವ ಈ ಹೆಬ್ಬೊತ್ತಿಗೆಯ ಬೆಲೆ ಕೇವಲ 75-00 ರೂಪಾಯಿಗಳು ಮಾತ್ರ.

"....ಶ್ರೀ ಸಿದ್ಧಯ್ಯ ಪುರಾಣಿಕರು ಅರ್ವಾಚೀನ ಶ್ರೀಸಾಮಾನ್ಯರಿಗೆ ಪ್ರಾಚೀನ ಸಾಮಾನ್ಯತಾ ಶ್ರೀಯನ್ನು ಸುಲಭ ಮಧುರ ರೂಪದಲ್ಲಿ ಉಣ ಬಡಿಸಿದ್ದಾರೆ. ಅವರ ಈ 'ಶರಣ ಚರಿತಾಮೃತ'ದಲ್ಲಿ....ಶರಣರ ಜೀವನ ಚರಿತ್ರೆಯ ತಾತ್ಪರ್ಯವನ್ನೂ ಹೃದಯವನ್ನೂ ದರ್ಶನಧ್ವನಿಯನ್ನೂ ಗ್ರಹಿಸಿ, ಆಧುನಿಕವಾದ ವೈಜ್ಞಾನಿಕ ದೃಷ್ಟಿಯಿಂದಲೂ ವಿಚಾರ ಬುದ್ಧಿಯಿಂದಲೂ .... ಮುಂದುವರಿದರೆ ಸರ್ವಧರ್ಮ ಸಮಾನತೆಯ ಮೇಲೆ ನಿಂತಿರುವ ಭಾರತರಾಷ್ಟ್ರಕ್ಕೆ ಶಾಶ್ವತವೂ ಸ್ಥಿರವೂ ಆಗಿರುವ ಅಡಿಪಾಯ ಸಿದ್ಧವಾಗುತ್ತದೆ; ಲೋಕಕ್ಕೂ ಮಾರ್ಗದರ್ಶನವಾಗಬಹುದು...."

—'ಶರಣ ಚರಿತಾಮೃತ'ಕ್ಕೆ—'ಶ್ರೀ ಕುವೆಂಪು ಅವರ ಮುನ್ನುಡಿ'

"ಮಾದಾರ ಚೆನ್ನಯ್ಯನಿಂದ ಮೊದಲಾಗುವ ಈ ಗ್ರಂಥದಲ್ಲಿ ಮಂತ್ರಿಗಳಿದ್ದಾರೆ, ಮಹಾ ಕವಿಗಳಿದ್ದಾರೆ, ಸಂಸಾರಿಗಳಿದ್ದಾರೆ, ಸಂನ್ಯಾಸಿಗಳಿದ್ದಾರೆ, ಬಡವರಿದ್ದಾರೆ, ಬಲ್ಲಿದರಿದ್ದಾರೆ, ಕೊಡಗೂಸಿನಿಂದ ಮುಪ್ಪಿನ ಷಡಕ್ಷರಿಯವರೆಗೆ ಎಲ್ಲ ವಯಸ್ಸಿನವರೂ ಇದ್ದಾರೆ, ಶರಣೆಯರಿದ್ದಾರೆ, ಎಲ್ಲ ಬಗೆಯ ಅನುಭಾವಿಗಳಿದ್ದಾರೆ. ಆದುದರಿಂದ ಇದು ಎಲ್ಲ ಅಭಿರುಚಿಗಳಿಗೂ ಆಪ್ಯಾಯನವಾಗಬಹುದೆಂದು ಆಶಿಸಿದ್ದೇನೆ.

—'ಚರಣ ಚರಿತಾಮೃತ'ದಲ್ಲಿ ಲೇಖಕರ ಬಿನ್ನಹ

ಪುಸ್ತಕ ಪ್ರಪಂಚ
ಮಾಸಿಕ

ಸಂಪುಟ ೪೫ ಸಂಚಿಕೆ ೫

ರಕ್ಷಾಪುಟದ ಚಿತ್ರಗಳು

ಡಾ|| ಸಿದ್ಧಯ್ಯಪುರಾಣಿಕ

ಡಾ|| ಎಚ್. ತಿಪ್ಪೇರುದ್ರಸ್ವಾಮಿ

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Eductaion Council, Mysore-6. Price : Rupees Six

ಬಿಡಿಪ್ರತಿ: ರೂ. 6

ವಾರ್ಷಿಕ ಚಂದಾ: ರೂ. 60

ಆಜೀವ ಸದಸ್ಯತ್ವ ಚಂದಾ:

ವ್ಯಕ್ತಿಗೆ: ರೂ. 400

ಸಂಸ್ಥೆಗೆ: ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 006

ಜ್ಞಾನಪೀಠ ಪ್ರಶಸ್ತಿ—೧೯೯೪

ಪ್ರೊ॥ ದೇಜಗೌ

ಪ್ರತಿಭಾವಂತ, ವಿಚಾರವಂತ ಡಾ॥ ಯು. ಆರ್. ಅನಂತಮೂರ್ತಿಯವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದಾಗ, ಕನ್ನಡಕ್ಕೆ ಪ್ರತಿಷ್ಠೆಯ ಹಾಗೂ ಪ್ರತಿಭೆಗೆ ಸಂದ ಗೌರವವೆಂದು ತಿಳಿದು ನಾನು ಸಂತಸಗೊಂಡಿದ್ದೆ. ಕನ್ನಡಕ್ಕೆ ಆರನೆಯ ಸಲ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಸೃಜನಶೀಲ ಶ್ರೇಷ್ಠ ಸಾಹಿತಿಯೆಂದು ನನಗೀಗ ಇಮ್ಮಡಿ ಸಂತೋಷವಾಗಿದೆ. ಈ ತನಕ ಯಾವ ಭಾರತೀಯ ಭಾಷೆಗೂ ಆರು ಸಲ ಈ ಪ್ರಶಸ್ತಿ ಲಭಿಸಿಲ್ಲವೆಂದರೆ ಕನ್ನಡ ಸಾಹಿತ್ಯದ ಹಿರಿಮೆಯ ಬಗ್ಗೆ, ಅದರ ಪ್ರಗತಿಶೀಲ ಅಭ್ಯುದಯದ ಬಗ್ಗೆ ಪ್ರತಿಯೊಬ್ಬ ಕನ್ನಡಿಗನೂ ಭುಜ ತಟ್ಟಿಕೊಳ್ಳಬಹುದಾಗಿದೆ. ಹಾಗೆ ಭುಜ ತಟ್ಟಿಕೊಳ್ಳಲು ಅವಕಾಶಮಾಡಿಕೊಟ್ಟ ಮೂರ್ತಿ ಮಿತ್ರರನ್ನು ನಾನು ಸಂಪಾದಕ ಮಂಡಲಿಯ ಮತ್ತು ವಯಸ್ಕರ ಶಿಕ್ಷಣ ಸಮಿತಿಯ ಪರವಾಗಿ ಮನಸಾರೆ ವಂದಿಸುತ್ತೇನೆ.

'ಈ ಪ್ರಶಸ್ತಿಗೆ ನನಗಿಂತ ಹೆಚ್ಚು ಅರ್ಹರಾದ ಹಿರಿಯರಿದ್ದಾರೆ, ಕಿರಿಯರಿದ್ದಾರೆ' ಎಂಬ ಮೂರ್ತಿಯವರ ಮಾತಿನಲ್ಲಿ ವಿನಯ ಸೌಜನ್ಯಗಳಿವೆ, ಪ್ರಾಮಾಣಿಕ ಪ್ರಜ್ಞೆ ಇದೆಯೆನ್ನುವುದನ್ನು ಮೆಚ್ಚಬೇಕು. ಪ್ರಶಸ್ತಿ ಪ್ರದಾನ ಸಮಯದಲ್ಲಿ ಪರೀಕ್ಷೆ ನಡೆಯುವಾಗ ಕಾರಣಾಂತರಗಳಿಂದ ತಪ್ಪುಗಳಾಗಬಹುದು. ಟಾಲ್ಸ್ಟಾಯ್ ಅವರಿಗೇ ನೊಬೆಲ್ ಪಾರಿತೋಷಕ ದೊರೆಯಲಿಲ್ಲ. ಆದರೆ ಯಾರಿಗೆ ಅಥವಾ ಯಾವ ಕೃತಿಗೆ ಪ್ರಶಸ್ತಿ ದೊರಕಿದೆಯೋ ಅದು ಕಳಪೆಯಾಗಿರಲಾರದೆಂದು ಭಾವಿಸಬಹುದಾಗಿದೆ. ಇಂಡಿಯಾ ದೇಶದ ಎಲ್ಲ ಪ್ರಬುದ್ಧ ಭಾಷೆಗಳಿಗೆ ಸೇರಿದಂತೆ ವರ್ಷಕ್ಕೊಂದು ಪ್ರಶಸ್ತಿ ಮಾತ್ರ ಇದೆಯೆಂಬುದನ್ನು ಮರೆಯಬಾರದು. ಎರಡೇನಾದರೂ ಇದ್ದಿದ್ದರೆ ಈ ಹೊತ್ತಿಗೆ ಕನಿಷ್ಠ ಹನ್ನೆರಡಾದರೂ ಪ್ರಶಸ್ತಿಗಳು ಕನ್ನಡಕ್ಕೆ ದೊರಕುತ್ತಿದ್ದುವೆಂದು ಹೆಮ್ಮೆಯಿಂದ ಹೇಳಬಹುದಾಗಿದೆ, ಕನ್ನಡ ಭಾಷಾ ಸಾಹಿತ್ಯಗಳ ಹಿರಿಮೆಯ ಬಗ್ಗೆ ಏನೇನೂ ತಿಳಿವಳಿಕೆಯಿಲ್ಲದ ನಾಡಿನ ನಾಯಕರು ಈ ಸತ್ಯವನ್ನರಿಯಬೇಕಾಗಿದೆ. ಇದರಿಂದ ಕನ್ನಡದಲ್ಲಿ ಬರೆಯುವವರಿಗೆ ಆತ್ಮಪ್ರತ್ಯಯ ಬಹುಪ್ರಮಾಣದಲ್ಲಿ ವೃದ್ಧಿಯಾಗುತ್ತದೆಂದು ನಂಬಬಹುದಾಗಿದೆ.

ಈತನಕ ಈ ಗೌರವ ಪಡೆದ ಸಾಹಿತಿಗಳಲ್ಲಿ ಐವರು ಆಧುನಿಕ ಸಾಹಿತ್ಯದ ಹಳೆಯ ತಲೆಮಾರಿಗೆ ಸೇರಿದವರಾದರೆ, ಅನಂತಮೂರ್ತಿಯವರು ಎರಡನೆಯ (ಮೂರನೆಯ ತಲೆ

ಮೂರೆಂದರೂ ಸಲ್ಲುತ್ತದೆ) ತಲೆಮಾರಿಗೆ ಸೇರಿದವರೆಂಬುದು ಸರ್ವವೇದ್ಯ. ಗೋಪಾಲ ಕೃಷ್ಣ ಅಡಿಗರು ಈಗ ಬದುಕಿದ್ದರೆ ಅವರಿಗಿದು ಲಭ್ಯವಾಗುತ್ತಿತ್ತೊ ಏನೋ! ಈ ಪ್ರಶಸ್ತಿ ವಿಜೇತರಲ್ಲಿ ಮೊದಲನೆಯವರು ಕುವೆಂಪು. ಅವರು ಮಾತ್ರ ಸರ್ವಪ್ರಕಾರಗಳಲ್ಲಿ ಸಾಧನೆ ಮಾಡಿ (ತಕ್ಕಮಟ್ಟಿಗೆ ಮಾಸ್ತಿಯವರು ಸಹ) ಸಿದ್ಧಿ ಪಡೆದವರು. ಉಳಿದವರು ಯಾವುದೋ ಒಂದು ಅಥವಾ ಎರಡು ಪ್ರಕಾರಗಳಲ್ಲಿ ಮೇಲೆನಿಸಿಕೊಂಡವರು. ಈ ಆರುವರಲ್ಲಿ ನಾಲ್ವರು (ಕುವೆಂಪು, ಬೇಂದ್ರೆ, ಗೋಕಾಕ, ಮೂರ್ತಿ) ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು, ಒಬ್ಬರು ಮಾಸ್ತಿಯವರು ಆಡಳಿತಗಾರರು, ಒಬ್ಬರು ಕಾರಂತರು ವೃತ್ತಿ ಸಾಹಿತಿಗಳು. ಈ ಪ್ರಾಧ್ಯಾಪಕರಲ್ಲಿಬ್ಬರು ಕನ್ನಡ ಇಲಾಖೆಗೆ ಸೇರಿದವರು, ಇಬ್ಬರು ಇಂಗ್ಲಿಷ್ ಇಲಾಖೆಗೆ ಸೇರಿದವರು. ಮಾಸ್ತಿಯವರು ವಿಶ್ವವಿದ್ಯಾನಿಲಯದ ಕಡೆಗೆ ವಾಲಿದ್ದರೆ ಅವರೂ ಆಂಗ್ಲ ಪ್ರಾಧ್ಯಾಪಕರಾಗುತ್ತಿದ್ದರು. ಸೃಜನಶೀಲ ಪ್ರತಿಭೆಯ ಅಭಿವ್ಯಕ್ತಿಗೆ ಪ್ರಣಾಳಿಕೆಯಾಗುವಲ್ಲಿ ವಿಶ್ವವಿದ್ಯಾನಿಲಯದ ಪದವಿ ಅನಿವಾರ್ಯವಲ್ಲ ಎಂಬುದಕ್ಕೆ ಕಾರಂತರೆ ಸಾಕ್ಷಿಯಾಗಿದ್ದಾರೆ.

ಅನಂತಮೂರ್ತಿಯವರ ಸಾಹಿತ್ಯಸಾಧನೆ ಗಾತ್ರದ ದೃಷ್ಟಿಯಿಂದ ದೊಡ್ಡದಲ್ಲವಾದರೂ, ಗುಣದ ದೃಷ್ಟಿಯಿಂದ ಮಹತ್ವಪೂರ್ಣವಾದದ್ದು, ವಿಶಿಷ್ಟವಾದದ್ದು. 'ಎಂದೂ ಮುಗಿಯದ ಕಥೆ'ಯಿಂದ ೧೯೫೫ರಲ್ಲಿ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ ಮೂರ್ತಿಯವರು ಬಹುಬೇಗನೆ ತಮ್ಮ ವಾಕ್ಚಾತುರ್ಯದಿಂದ, ನಿಗೂಢವಾದ ಚುಂಬಕ ಶಕ್ತಿಯಿಂದ ಬಹುಜನರಿಗೆ ಆದರಣೀಯರಾದರು, ಸ್ಫೂರ್ತಿದಾಯಿಯಾದರು. ಅನಂತರ ಅವರು ಕವಿತೆಗಳನ್ನು (ಮೂರು ಸಂಕಲನ) ರಚಿಸಿದರು, ತಾವೊ ಪದ್ಯಗಳನ್ನು ಅನುವಾದಿಸಿದರು, ಪ್ರಜ್ಞೆ ಮತ್ತು ಪರಿಸರ, ಸನ್ನಿವೇಶ, ಸಮಕ್ಷಮ, ಪೂರ್ವಾಪರದಂಥ ಚಿಂತನಪರ, ವಿಮರ್ಶಾತ್ಮಕ ಗ್ರಂಥಗಳನ್ನು ಪ್ರಕಟಿಸಿದರು. ಆದರೆ ಅವರು ಪ್ರಸಿದ್ಧಿಗೆ ಬಂದದ್ದು ತಮ್ಮ ಕಾದಂಬರಿಗಳ ಮೂಲಕ —ಅದರಲ್ಲಿಯೂ ಸಂಸ್ಕಾರದ ಮೂಲಕ. ನಾನು ಓದಿದ್ದು, ನನ್ನ ಮನಸೆಳೆದದ್ದು ಅವರ ಕಥೆಗಳು ಮತ್ತು 'ಸಂಸ್ಕಾರ'. 'ಭಾರತೀಪುರ'ವನ್ನು ಓದಲು ಪ್ರಯತ್ನಿಸಿ, ಮುಂದುವರಿಯಲಿಲ್ಲ. 'ಅವಸ್ಥೆ' ವಿವಾದದ ಗೊಂದಲವನ್ನೆಬ್ಬಿಸಿದ್ದೂ ಉಂಟು.

'ಓದು ಬರಹಕ್ಕೆ ಶತ್ರು' ಎಂಬಗಾದೆ ನನ್ನ ಗುರುಗಳಾದ ತೀನಂಶ್ರೀ ಕಟ್ಟಿದ್ದು. ಅದು ಅವರ ಜೀವನಾನುಭವದ ಸಾರವೂ ಹೌದು. ಆ ಗಾದೆ ನನ್ನ ಬದುಕನ್ನೆಲ್ಲ ಆಕ್ರಮಿಸಿಕೊಂಡಿದೆ. ನಾನು ಓದಬೇಕಾದ ಸಮಯದಲ್ಲಿ ಹೆಚ್ಚು ಓದಲಿಲ್ಲ. ನಾನು ಹುಟ್ಟಿ ಬೆಳೆದ ಸನ್ನಿವೇಶದಿಂದಾಗಿ ಓದುವ ಚಟ ನನ್ನಲ್ಲಿ ಬೆಳೆಯಲಿಲ್ಲ. ಓದುವ ಅವಕಾಶ ಮತ್ತು ಅನಿವಾರ್ಯತೆಗಳು ದೊರೆಕೊಂಡಾಗ ನನಗೆ ಆಡಳಿತದ ಜವಾಬ್ದಾರಿ, ಕನ್ನಡಪರ ಹೋರಾಟ, ಸಂಘ ಸಂಸ್ಥೆಗಳ ಸಂಸ್ಥಾಪನೆ ನಿರ್ವಹಣೆಯಲ್ಲಿ ತೊಡಗಿಕೊಳ್ಳಬೇಕಾಗಿ ಬಂದದ್ದರಿಂದ, ಬಿಡುವಿನಲ್ಲಿ ಬರೆಹದ ಕಡೆ ಗಮನ ಹರಿಸಬೇಕಾಗಿದ್ದುದರಿಂದ ಓದು ಸಾಧ್ಯವಾಗಲಿಲ್ಲ. ನಾನೇ ಬರೆದದ್ದನ್ನೊಮ್ಮೆ ತಿರುವಿಹಾಕಲು ಸಹ ಪುರಸೊತ್ತಿರಲಿಲ್ಲ. ಲೇಖನ ಕಾಲದಲ್ಲಿ ಅವಶ್ಯ

ವೆಷ್ಟೋ ಅಷ್ಟೇ ನಾನು ಓದಿಕೊಂಡದ್ದು, ಅದೂ ವಿರಳವಾಗಿ, ಮೇಲೆ ಮೇಲೆ ಮಾತ್ರ.

'ಕಾವ್ಯ ವಿದ್ಯಾ ಪ್ರಾಚಯು ಪರಿಚಯಂ.... ಕವಿತೆಗೆ ನಿಯತಂ ಕಾರಣಂ' ಎಂದು ಪೂರ್ವ ಸೂರಿಗಳು ಹೇಳಿದ್ದಾರೆ, ನಿಜ. ಬದುಕಿನುದ್ದಕ್ಕೂ ಓದುವುದಾದರೆ ಬರೆಯುವುದು ಯಾವಾಗ? ಬಹು ಓದಿನ ಲಾಭವೊಂದುಂಟು, ನಿಜ. ಓದಿದ ಗ್ರಂಥಗಳ ಸಾರವನ್ನೊ ಭಾಗಗಳನ್ನೊ ನಮ್ಮ ಗ್ರಂಥಗಳಲ್ಲಿ ಛಟ್ಟೆಯಿಳಿಸಬಹುದು ; ಅಥವಾ ಅವುಗಳನ್ನು ಅನುಕರಿಸಬಹುದು. ಹೆಚ್ಚು ಗ್ರಂಥಗಳನ್ನು ಓದಲಾಗದಿದ್ದಾಗ, ನಾನು ಬರೆದದ್ದೆಲ್ಲ ನನ್ನದೇ. ನನ್ನ ಸಾಹಿತ್ಯದಲ್ಲಿ ಎರವಲು ಸೂಚನೆ ಕಂಡು ಬಂದರೆ, ಅದನ್ನು ಎರವಲೆನ್ನುವುದಕ್ಕಿಂತ ಅನುಭವ ಸಾದೃಶ್ಯ ಎಂದು ಹೇಳಬಹುದು. ಅಂದ ಮೇಲೆ, ನನ್ನ ಬರಹಗಳಲ್ಲಿ ಎರವಲು ಸಾಮಗ್ರಿ ಇಲ್ಲವೇ ಇಲ್ಲವೆಂದಲ್ಲ—ಇದ್ದೇ ಇದೆ ಮಿತ ಪ್ರಮಾಣದಲ್ಲಿ. ಕದಿಯುದವನು ಶ್ರೀಮಂತನಾಗಲಾರ, ದೊಡ್ಡ ಸಾಹಿತಿಯೂ ಆಗಲಾರ.

ನಾನು ವಿದ್ಯಾರ್ಥಿಯಾಗಿದ್ದಾಗ ಸಾಹಿತಿಗಳ ಸಂಖ್ಯೆ ಕಡಮೆಯಿತ್ತು. ಎಲ್ಲರ ಕೃತಿಗಳನ್ನು ಅಷ್ಟೋ ಇಷ್ಟೋ ಓದುತ್ತಿದ್ದೆವು. ಈಗ ಒಂದು ಸಾಹಿತ್ಯ ಪ್ರಕಾರವನ್ನೊ ಒಬ್ಬ ಕವಿಯನ್ನೊ ಓದಿ ಪ್ರಭುತ್ವಗಳಿಸಿಕೊಂಡರೆ ಸಾಕಾಗಿದೆ. ಆದ್ದರಿಂದ ಅನಂತಮೂರ್ತಿಯವರ ಸಾಹಿತ್ಯವನ್ನೋದಿ ಬೆಲೆ ಕಟ್ಟುವ ವ್ಯವಧಾನವಾಗಲಿ, ಸಹನೆಯಾಗಲಿ ನನ್ನಲ್ಲಿಲ್ಲ. ಅವರು ಶ್ರೇಷ್ಠ ಸಾಹಿತಿಗಳಲ್ಲೊಬ್ಬರು, ಕನ್ನಡವನ್ನು ಬೆಳೆಸುತ್ತಿರುವ ಶ್ರೀಮಂತರಲ್ಲೊಬ್ಬರು, ಆಂಗ್ಲ ಪ್ರಾಧ್ಯಾಪಕರಾಗಿಯೂ ಕನ್ನಡಕ್ಕೆ ತಮ್ಮನ್ನು ಸಮರ್ಪಿಸಿಕೊಂಡ ದೇಶಾಭಿಮಾನಿಗಳು ಎಂಬ ವಿಷಯದಲ್ಲಿ ಯಾರಿಗೂ ಸಂದೇಹ ವಿರಲಾರದು. ಈ ಸಂದರ್ಭದಲ್ಲಿ ನನಗೆ ಸಂಭ್ರಮವುಂಟು ಮಾಡುವಂಥ ಸಂಗತಿಯೊಂದು ನೆನಪಿಗೆ ಬರುತ್ತದೆ. ಅವರು ಆಂಗ್ಲ ಭಾಷೆಯಲ್ಲಿ ಬರೆಯದೆ ಕನ್ನಡದಲ್ಲಿ ಮಾತ್ರ ಬರೆಯುತ್ತಿದ್ದಾರೆ ಎಂಬ ಆಪಾದನೆಯನ್ನು ಕನ್ನಡವನ್ನು ಅಸ್ಪೃಶ್ಯವೆಂಬಂತೆ ಕಾಣುತ್ತಿದ್ದ ಸಂಕುಚಿತ ಮನೋಭಾವದ ಜನ ಅವರ ಮೇಲೆ ಹೊರಿಸಿ, ಅವರನ್ನು ವಿಶ್ವವಿದ್ಯಾನಿಲಯದೊಳಗೆ ಬಹುದಿನ ಸೇರಿಸಿರಲಿಲ್ಲ. ನಾನು ಕುಲಪತಿಯಾದನಂತರ ಅವರನ್ನು ವಿಶ್ವವಿದ್ಯಾನಿಲಯದೊಳಗೆ ಕರೆದುಕೊಳ್ಳುವ ಮೂಲಕ ಒಳ್ಳೆಯ ಕೆಲಸ ಮಾಡಿದೆನೆಂಬ ತೃಪ್ತಿ ನನಗಿದೆ. ಅದರಿಂದಾಗಿ ಅವರಿಗೆ ಈ ಪ್ರಶಸ್ತಿ ದೊರೆತಾಗ ನನಗೆ ಅಪಾರ ಸಂತೋಷವಾಯಿತು. ವಿಶ್ವವಿದ್ಯಾನಿಲಯಕ್ಕೆ ಬಂದದ್ದರಿಂದ ಅವರ ಸಾಹಿತ್ಯಶಕ್ತಿ ವರ್ಧಿಸಿತು, ಅವರಿಗೆ ಈ ಪ್ರಶಸ್ತಿ ದೊರಕಿತೆಂದು ಹೇಳುವುದು ನನ್ನ ಉದ್ದೇಶವಲ್ಲ. ಅವರೆಲ್ಲಿದ್ದರೂ ಸರಸ್ವತೀ ಶಕ್ತಿ ಅವರಿಂದ ಈ ಕೆಲಸ ಮಾಡಿಸುತ್ತಿತ್ತು. ಆದರೆ ಆ ಕಾಲಕ್ಕೆ ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿದೆನೆಂಬ ತೃಪ್ತಿ ಅವರಿಗಾಗಿರಬೇಕೆಂದೇ ನನ್ನ ನಂಬಿಕೆ.

ಅನಂತಮೂರ್ತಿಯವರು ಇಂತೆಯೇ ಮೇಲು ಮೇಲಕ್ಕೇರಲಿ, ಈಗಿನದಕ್ಕಿಂತಲೂ ಉತ್ತಮವಾದ ಪ್ರಶಸ್ತಿಗಳು ದೊರಕಲಿ, ವಿಶ್ವವಿಖ್ಯಾತರಾಗಲಿ, ಎಷ್ಟೇ ವಿಖ್ಯಾತರಾದರೂ ಕನ್ನಡವನ್ನು ಮರೆಯದಿರಲಿ, ಅವರ ಮೂಲಕ ಕನ್ನಡ ವಿಶ್ವ ಭಾಷೆಗಳಿಗೆ ಸಮಗೈಯಾಗಿ, ಮೇಲ್ಗೈಯ್ಯಾಗಿ ವಿಜೃಂಭಿಸಲಿ ಎಂದು ಹಾರೈಸುತ್ತೇನೆ.

ಶುದ್ಧ ಸತ್ಯ ಜೀವನ ಪ್ರಶಸ್ತಿ
(ರೈಟ್ ಲೈವ್ಲಿಹುಡ್ ಅವಾರ್ಡ್)

ಈ ವರ್ಷ ಕರ್ನಾಟಕಕ್ಕೆ ಸಂದ ಗೌರವಗಳಲ್ಲಿ ನೊಬೆಲ್ ಪಾರಿತೋಷಕಕ್ಕೆ ಪರ್ಯಾಯವಾಗಿ ಶುದ್ಧ ಸತ್ಯಜೀವನ ಪ್ರಶಸ್ತಿಯೂ ಒಂದು. ಅದನ್ನು ಪಡೆದವರು ಬಿಳಿಗಿರಿರಂಗನ ಬೆಟ್ಟದ ಬುಡಕಟ್ಟು ಜನರ (ಸೋಲಿಗರ) ಧರ್ಮಪಿತರಂತಿರುವ ನಲವತ್ತನಾಲ್ಕು ವರ್ಷದ ಡಾ. ಎಚ್. ಸುದರ್ಶನ್ ಅವರು. ಸುಮಾರು ಹದಿನೈದು ವರ್ಷದ ಸಮರ್ಪಣ ಮನೋಭಾವದ, ಲೌಕಿಕಾಮಿಷಗಳ ತ್ಯಾಗದ ಶ್ರದ್ಧಾ ನಿಷ್ಠೆಯ ಸತತ ಪರಿಶ್ರಮ ಪ್ರಯತ್ನಗಳ ಫಲವಾಗಿ ಅದು ಅವರಿಗೆ ಲಭಿಸಿದೆ. ಅವರನ್ನು ಕರ್ನಾಟಕದ, ಏಕೆ ಭರತಖಂಡದ ಆಲ್ಬರ್ಟ್ ಶ್ವೆಟ್ಜರ್ ಎಂದು ಕರೆದರೂ ಅತಿಶಯೋಕ್ತಿಯಾಗಲಾರದು.

ನಲವತ್ತೈದನೆಯ ವಯಸ್ಸಿನಲ್ಲಿಯೆ ತಮ್ಮ ತಂದೆ ಹನುಮಂತರೆಡ್ಡಿಯವರು ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗಿ ತಮ್ಮ ತೊಡೆಯ ಮೇಲೆಯೆ ಕೊನೆಯುಸಿರೆಳೆದಾಗ, ಆಗಿನ್ನೂ ಹನ್ನೆರಡು ವರ್ಷದವರಾಗಿದ್ದ ಸುದರ್ಶನ್ ಅವರ ಅಂತರಂಗದಲ್ಲಿ ಯಾವುದೋ ಅನಿರ್ವಚನೀಯ ಶಕ್ತಿ ಚಿಮ್ಮಿದಂತಾಗಿ ಅವರ ಭವಿಷ್ಯ ಜೀವನಕ್ಕೆ ಜ್ಯೋತ್ಸ್ನೆಯಾಗುತ್ತದೆ. ನೊಂದವರ, ಬೆಂದವರ, ಬಿದ್ದವರ, ಅನಾಥರ, ನತದೃಷ್ಟರ ಸೇವೆಯೆ ಅವರ ಸರ್ವಸಾಧನೆಯ ಗುರಿಯಾಗುತ್ತದೆ. ಅವರ ಗುರಿಯೆ ಸಂಕಲ್ಪವಾಗಿ, ಸಂಕಲ್ಪವೆ ಮಾರ್ಗದರ್ಶಿಯಾಗಿ, ವೈದ್ಯ ವ್ಯಾಸಂಗಕ್ಕೆ ಪ್ರೇರಿಸುತ್ತದೆ. ವ್ಯಾಸಂಗಾವಧಿಯಲ್ಲಿಯೆ ಶ್ರೀರಾಮಕೃಷ್ಣಾಶ್ರಮದ ಸಮಾಜಸೇವಾ ಕಾರ್ಯಗಳು ಅವರನ್ನಾಕರ್ಷಿಸುತ್ತವೆ. ವ್ಯಾಸಂಗ ಮುಕ್ತಾಯವಾಗುತ್ತಿದ್ದಂತೆ ಆಶ್ರಮದ ಕಕ್ಷೆಯಲ್ಲಿಯೆ ಹಿಮಾಲಯದ ತಪ್ಪಲಲ್ಲಿ ಬೇಲೂರು, ಹೌರಾ, ಪೊನ್ನಂಪೇಟೆಗಳಲ್ಲಿ ಸೇವೆ ಸಲ್ಲಿಸುತ್ತಿರುವಾಗಲೆ ಅವರ ಗುರಿಯರಿವು ಅವರಿಗೆ ಮಾರ್ಗದರ್ಶಿಯಾಗುತ್ತದೆ.

ಆಶ್ರಮದ ವಾತಾವರಣದಲ್ಲಿ ಬೆಳೆಯುವಾಗ ದೇವಕೇತುವಿನ ಹಿಡಿತದಿಂದ, ವೈರಾಗ್ಯದ ಪ್ರಭಾವದಿಂದ ತಪ್ಪಿಸಿಕೊಳ್ಳುವುದು ಸುದರ್ಶನರಂಥ ಶಿಸ್ತಿನ ಶುದ್ಧ ಚೇತನಕ್ಕೆ ಕಷ್ಟ. ಮಗನಲ್ಲಿಯೇ ಬದುಕಿನ ರಕ್ತಿಮುಕ್ತಿಗಳನ್ನು ಕಂಡ ಕೃಶ ದೇಹದ ತಾಯಿಯ ಪುತ್ರ ವಿವಾಹಾಕಾಂಕ್ಷೆಯನ್ನು ಪೂರೈಸುವುದಾದರೆ ತಮ್ಮ ಸಂಕಲ್ಪಕ್ಕೆ ಭಂಗವೊದಗೀತೆಂಬ ಸಂಶಯ ಕೆಲಕಾಲ ಅವರನ್ನು ಕಾಡುತ್ತದೆ. ಸತ್ಸಂಕಲ್ಪದ ಸಾಧನೆಯ ಮಾರ್ಗದಲ್ಲೊದಗಿದ ವಿಘ್ನಗಳೇ ಅದಕ್ಕೆ ಇಂಧನಗಳಾಗುತ್ತವೆ, ಕೀಲೆಣ್ಣೆಯಾಗುತ್ತವೆ. ಕಾವಿಬಟ್ಟೆ ಹೊದೆಯದೆಯೆ ಸಂನ್ಯಾಸ ಜೀವನವನ್ನು ನಡೆಸಬಹುದೆಂಬುದು ಅವರ ನಿಲುವು. ಇಡೀ ಬದುಕನ್ನು ಸೇವೆಗೆ ಸಮರ್ಪಿಸಿಕೊಳ್ಳುವುದಾದರೆ ವಿವಾಹಕ್ಕವಕಾಶವಿಲ್ಲವೆಂದವರು ಬ್ರಹ್ಮಚರ್ಯೆಯ ಆದರ್ಶವನ್ನಪ್ಪಿಕೊಳ್ಳುತ್ತಾರೆ. ಆಶ್ರಮದ ಆಶ್ರಯದಲ್ಲಿ ತರಬೇತಿ ಪಡೆದ ನಂತರ ಸ್ವತಂತ್ರ ಮುಕ್ತವಾತಾವರಣದಲ್ಲಿ ಸೇವೆ ಸಲ್ಲಿಸುವ ಸಲುವಾಗಿ ಅವರು ಬಿಳಿಗಿರಿರಂಗನ ಬೆಟ್ಟವನ್ನು ತಮ್ಮ ಕಾರ್ಯಕೇಂದ್ರವನ್ನಾಗಿ ಆರಿಸಿಕೊಳ್ಳುತ್ತಾರೆ: ಸೋಲಿಗರನ್ನು ತಮ್ಮ ಪ್ರಯೋಗ ಸಾಧನಗಳನ್ನಾಗಿ ರೂಪಿಸಿಕೊಳ್ಳುತ್ತಾರೆ.

ಆಧುನಿಕ ವೈದ್ಯ ವಿದ್ಯೆಯಲ್ಲಿ ಪರಿಣತನೂ ಸುಸಂಸ್ಕೃತನೂ ಆದ ತರುಣನೊಬ್ಬ ಕನಿಷ್ಠ ಪ್ರಾಥಮಿಕ ಸೌಲಭ್ಯಗಳಿಲ್ಲದ, ನಾಗರಿಕತೆಯಿಂದ ದೂರವಾದ ಅಪರಿಚಿತ ವಾತಾವರಣದಲ್ಲಿ, ನಾಗರಿಕ ಶೋಷಣೆಗೆ ಬೆದರುವ ಮುಗ್ಧ ಜನರ ನಡುವೆ ಸೇವೆ ಸಲ್ಲಿಸುತ್ತೇನೆಂಬ ಧೈರ್ಯ ಅಸಾಮಾನ್ಯವಾದದ್ದೇ ಸರಿ. ವೈದ್ಯತಜ್ಞರಾದ ಸುದರ್ಶನ್ ಮನೋವಿಜ್ಞಾನಿಯೂ ಹೌದು. ಸಮಾಜ ವಿಜ್ಞಾನಿಯೂ ಹೌದೆಂದು ತೋರುತ್ತದೆ. ಆದ್ದರಿಂದಲೇ ಅವರು ಬಹುಬೇಗನೆ ಸೋಲಿಗರ ಜೀವನದಲ್ಲಿ ಒಂದಾಗಿ ಅವರ ಆಶೆ ಆಕಾಂಕ್ಷೆಗಳ ಸಂಕೇತವಾಗಿ, ಅವರ ಉದ್ಧಾರಕ್ಕೆಂದು ಭಗವಂತನೇ ಕಳಿಸಿದ ದೂತನೆಂಬಂತೆ ಅವರು ಪರಿಣಾಮಿಯಾಗುತ್ತಾರೆ. ಕನಿಕರ, ಅನುಕಂಪೆ, ಸ್ನೇಹ, ಪ್ರೀತಿ, ನೀತಿಗಳ ಮೂಲಕ ಆ ಜನರ ಮನಸ್ಸನ್ನು ಗೆದ್ದುಕೊಳ್ಳುತ್ತಾರೆ ; ಭಗವಂತನಿಗೊಲಿಯುವ ಭಕ್ತರಂತೆ, ಸದ್ಗುರುವಿಗೆ ಮಣಿಯುವ ಸಚ್ಛಿಷ್ಯರಂತೆ, ಆ ನಿಸರ್ಗದ ಮಕ್ಕಳು ಸುದರ್ಶನರಿಗೆ ಶರಣಾಗುತ್ತಾರೆ. ತದನಂತರ ಅವರ ಕಾರ್ಯ ಸುಗಮವಾಗುತ್ತದೆ. ಅವರ ಸಾಧನೆಯು ಮೊದಲ ಹಂತದಲ್ಲಿ ವಿಜಯಿಯಾಗುತ್ತಾರೆ.

ಸತ್ಕಾರ್ಯಕ್ಕೆ ವಿಶ್ವಶಕ್ತಿಯೇ ನಾನಾ ರೂಪದಲ್ಲಿ ನೆರವಾಗುತ್ತದೆ. ಕಾಲಕ್ರಮೇಣ ಅವರ ಸ್ನೇಹಿತರು ಮತ್ತು ಸಂಘಸಂಸ್ಥೆಗಳಿಂದ ಅವರು ನೆರವು ಪಡೆಯುತ್ತಾರೆ. ಸರ್ಕಾರದ ಸಹಾಯವೂ ಅವರಿಗೆ ದೊರೆಯುತ್ತದೆ. ಎಂಟು ಹಾಸುಗೆಗಳ ಆಸ್ಪತ್ರೆಯನ್ನವರು ತೆರೆಯುತ್ತಾರೆ. ಸೀಸರ್ ಶಸ್ತ್ರಚಿಕಿತ್ಸೆಯಿಲ್ಲದೆಯೆ, ಹಳೆಯ ಹಳ್ಳಿ ವಿಧಾನದಲ್ಲಿಯೇ ಹೆರಿಗೆಯನ್ನು ನಡೆಸುತ್ತಾರೆ. ಸೋಲಿಗರಲ್ಲಿಯೇ ಚಾಲ್ತಿಯಲ್ಲಿದ್ದ ವೈದ್ಯ ವಿಧಾನಗಳನ್ನೂ ಅರಣ್ಯದಲ್ಲಿ ಲಭಿಸುವ ಗಿಡಮೂಲಿಕೆಗಳನ್ನೂ ಅವರು ಬಳಸಿಕೊಳ್ಳುತ್ತಾರೆ. ಈ ಎಲ್ಲ ಕ್ರಮೋಪಕ್ರಮಗಳು ಸೋಲಿಗರ ವಿಶ್ವಾಸವನ್ನು ಗಳಿಸಲು ಅನುಕೂಲವಾಗುತ್ತವೆ.

ವಿದ್ಯೆಯಿಂದಲ್ಲದೆ ಸೋಲಿಗರ ಜೀವನ ಸುಧಾರಿಸಲಾರದೆಂಬ ದೃಷ್ಟಿಯಿಂದವರು ಶಾಲಾ ಸಂಕೀರ್ಣವನ್ನಾರಂಭಿಸುತ್ತಾರೆ. ಪ್ರಾಥಮಿಕ ದರ್ಜೆಯ ಮೊದಲೆರಡು ವರ್ಷಗಳಲ್ಲಿ ಸೋಲಿಗ ನುಡಿಯನ್ನು ಕಲಿಸುವ ಅವರ ಏರ್ಪಾಡು ಶ್ಲಾಘನೀಯವಾದದ್ದು. ಹೊರಗಡೆಯವರಿಂದ ಸುಲಿಗೆಯಾಗದಂತೆ ಅವರು ಎಚ್ಚರವಹಿಸುತ್ತಾರೆ. ಜೇನು ಸಾಕಾಣಿಕೆ, ಹೊಲಿಗೆ ಮೊದಲಾದ ಕಸಬುಗಳನ್ನು ಬೋಧಿಸುವ ಮೂಲಕ ಅವರ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುತ್ತಾರೆ. ಬುಡಕಟ್ಟು ಜನಾಂಗಗಳ ವೈವಿಧ್ಯ ಮಯ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ, ಎಲ್ಲವನ್ನು ಪ್ರೀತಿಯಿಂದ, ಶ್ರದ್ಧೆಯಿಂದ, ಧೈರ್ಯದಿಂದ ಬಗೆಹರಿಸಿದ ಸಾಹಸ ವೀರರವರು.

ಸತ್ಯಶುದ್ಧ ಜೀವನ ಪ್ರಶಸ್ತಿಯಿಂದ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿರುವ ಡಾ. ಎಚ್. ಸುದರ್ಶನರು ಇಡೀ ದೇಶಕ್ಕೆ ವಿಶಿಷ್ಟ ಗೌರವವನ್ನೊದಗಿಸಿ, ಭಾರತೀಯರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಅಂಥವರು ನೂರು ಜನರಿದ್ದರೆ ಸಾಕು, ದೇಶ ಕ್ಷೇಮಾಭ್ಯುದಯದ ಹಾದಿಯಲ್ಲಿ ಸಾಗುತ್ತದೆ. ಪ್ರಾಧ್ಯಾಪಕರು, ಅಧಿಕಾರಿಗಳು, ಸಾಧುಸಂತರು, ರಾಜಕಾರಣಿ

ಗಳು, ವೈದ್ಯರು, ಇಂಜಿನಿಯರು, ಶ್ರೀಮಂತರು, ವಣಿಗ್ವರರು, ದೇಶದ ಸಮಸ್ತರು ಅವರ ಆದರ್ಶವನ್ನನುಸರಿಸಿದ್ದಾದರೆ, ದೇಶದಲ್ಲಿ ಸುಖ ಶಾಂತಿ ನೆಲಸಲು ಸಾಧ್ಯವಾಗುತ್ತದೆ. ಸುದರ್ಶನರ ಧರ್ಮಸುದರ್ಶನದ ಯಾನ ಯಾತ್ರೆಯ ಮೂಲಕ ನಾಡು ಪೂರ್ಣ ಪರಿವರ್ತನೆಯ ದಾರಿಯಲ್ಲಿ ಸಾಗಲೆಂದು ಹಾರೈಸುತ್ತೇನೆ.

ವಿಧಾನಸಭಾ ಚುನಾವಣೆಗಳು-೧೯೯೪

ಕನ್ನಡಿಗರು, ಅದರಲ್ಲಿಯೂ ಶ್ರೀಸಾಮಾನ್ಯರು ರಾಜಕೀಯವಾಗಿ ಎಚ್ಚೆತ್ತಿದ್ದಾರೆ, ಮತಚಲಾವಣೆಯೂ ತಮ್ಮ ಪವಿತ್ರ ಕರ್ತವ್ಯವೆಂದು ತಿಳಿದುಕೊಂಡಿದ್ದಾರೆ. ಅವರು ಯಾರ ಶೋಷಣೆಗೂ ಆಮಿಷಗಳಿಗೂ ಒತ್ತಡಗಳಿಗೂ ದಾಸರಾಗದೆ ಸ್ವತಂತ್ರರಾಗಿ, ನಿರ್ಭಯವಾಗಿ, ಆದರೆ ಗೂಢವಾಗಿ ಆಲೋಚಿಸಿ ಮತ ನೀಡುತ್ತಾರೆನ್ನುವುದಕ್ಕೆ ಕಳೆದ ಹತ್ತು ವರ್ಷಗಳಿಂದ ಕರ್ನಾಟಕದಲ್ಲಿ ನಡೆದ ಚುನಾವಣೆಗಳು ಸಾಕ್ಷಿಯಾಗಿವೆ.

ಭರತಖಂಡದಲ್ಲಿ ಪ್ರಧಾನಿ ಹೊರತಾಗಿ ಯಾರೂ ಸ್ವತಂತ್ರರಲ್ಲ; ಅವನು ಮಾಡಿದ್ದನ್ನು ಯಾರೂ ಪ್ರಶ್ನಿಸಲಾಗದೆಂಬ ತಿಳಿವಳಿಕೆ ಈವರೆಗೆ ರೂಢಮೂಲವಾಗಿ ಜನಮನಸ್ಸಿನಲ್ಲಿ ನೆಲೆಸಿತ್ತು. ಚುನಾವಣಾ ಆಯೋಗದ ನೇತಾರ ಶೇಷನ್ ಪ್ರಧಾನಿಗಿಂತಲೂ ಸ್ವತಂತ್ರ, ಅವರೊಂದು ರೀತಿಯಲ್ಲಿ ಅನಿವಾರ್ಯ ಸರ್ವಾಧಿಕಾರಿ ಎಂಬ ಸಂಗತಿ ಪ್ರಚುರವಾದದ್ದು ಇದೇ ಮೊದಲು. ಈ ದಿನ ನಿರಕ್ಷರಿಗಳನ್ನೊಳಗೊಂಡು ಎಲ್ಲ ಭಾರತೀಯರ ನೆನಪಿನಲ್ಲಿರುವ ಹೆಸರೆಂದರೆ 'ಶೇಷನ್'. ಅವರು ಭೂತದಂತೆ ಕೆಲವರು ಅನಿಷ್ಟರನ್ನು ಕಾಡಿದ್ದುಂಟು. ವಿಷ್ಣುಶಯ್ಯೆಯಾಗಿ ಹಲವರನ್ನು ಅನುಗ್ರಹಿಸಿದ್ದೂ ಉಂಟು. ಬೀದಿಗಳಲ್ಲಿ ಪ್ರಚಾರದ ಅಬ್ಬರ ಬೊಬ್ಬೆಗಳಿಲ್ಲ, ವಾಹನಗಳ ನೂಕುನುಗ್ಗಲುಗಳಿಲ್ಲ, ಹೆಂಡ ಸಾರಾಯಿಗಳ ನಗ್ನನೃತ್ಯಗಳಿಲ್ಲ, ಗೋಡೆನಾಮಫಲಕಗಳ ಮೇಲೆ ಅಸಹ್ಯ ಬರಹಗಳ ಹೊಲಸು ಪ್ರದರ್ಶನವಿಲ್ಲ. ಬೊಬ್ಬೆ ಬೆದರಿಕೆಗಳಿಲ್ಲದೆ ಹಿಂಸೆ ಅನಾಚಾರಗಳಿಲ್ಲದೆ ಶಾಂತವಾಗಿ ಚುನಾವಣೆಗಳು ನಡೆದದ್ದಕ್ಕೆ ದೇಶ ಶೇಷನ್ ಅವರಿಗೆ ಕೃತಜ್ಞವಾಗಿರಬೇಕು.

ಈ ಸಲದ್ದು ಸೇರಿ ಕಳೆದ ಮೂರು ಚುನಾವಣೆಗಳಲ್ಲಿ ಕರ್ನಾಟಕದ ಜನ ಬಹು ಎಚ್ಚರಿಕೆಯಿಂದ, ನೀತಿಗೆಟ್ಟ ರಾಜಕಾರಣಿಗಳಿಗೆ ಬುದ್ಧಿ ಕಲಿಸಲೆಂಬಂತೆ, ಮತ ಚಲಾಯಿಸಿದ್ದಾರೆಂಬುದು ಸ್ಪಷ್ಟ.

ಹತ್ತು ವರ್ಷದ ಹಿಂದೆ ಮತ್ತು ಈಗ (ಗಾಂಧಿ ಕಾಂಗ್ರೆಸ್ಸಲ್ಲ)-ಇಂದಿರಾ ಕಾಂಗ್ರೆಸ್ಸು ಅವಮಾನಕರವಾದ ಸೋಲನುಭವಿಸಿದ್ದು ಸಹಜವೇ. ದೆಹಲಿಯ ಅಶ್ಲೀಲ ಅಸಹ್ಯ ದರ್ಬಾರು, ಪ್ರಧಾನಿಯ ಕುಟಿಲನೀತಿಯೊಡಗೂಡಿದ ಅದಕ್ಷತೆ ಅನಿಶ್ಚಯತೆ ತಾರತಮ್ಯ ನೀತಿ ಈ ಸಲದ ಸೋಲಿಗೆ ಬಹುಮಟ್ಟಿಗೆ ಕಾರಣವೆನ್ನುವುದಕ್ಕೆ, ಹಿಂದಿನ ಪ್ರಧಾನಿಗಳ ವ್ಯಕ್ತಿತ್ವ ಇವರಿಗಿಲ್ಲವೆನ್ನುವುದಕ್ಕೆ ಚುನಾವಣಾ ಫಲಿತಾಂಶಗಳೇ ಸಾಕ್ಷಿಯಾಗಿವೆ. ಜನತೆಯೊಡನೆ ಸ್ಪಂದಿಸುವ ಮನೋಧರ್ಮವಾಗಲಿ, ದೂರದೃಷ್ಟಿಯಾಗಲಿ ಅವರಲ್ಲಿಲ್ಲ, ಅವರ ಮಾತಿಗೆ ಕವಡೆ ಬೆಲೆಯಿಲ್ಲವೆನ್ನಲು ಅವರ ಸಭೆಗಳಿಗೆ ಜನ ಸೇರುತ್ತಿರಲಿಲ್ಲವೆನ್ನುವುದೇ ನಿದರ್ಶನ

ವಾಗಿದೆ. ದೇಶದ ಕಲ್ಯಾಣ ಮತ್ತು ಪಕ್ಷದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು ಯೋಗ್ಯರಾದ ವ್ಯಕ್ತಿತ್ವ ಸಂಪನ್ನರಾದ ವ್ಯಕ್ತಿಗಳನ್ನು ಪ್ರಜಾಸತ್ತೆಯ ಸಂಪ್ರದಾಯಕ್ಕನುಗುಣವಾಗಿ ಜವಾಬ್ದಾರಿ ಸ್ಥಾನಗಳಿಗೆ ನೇಮಿಸಲಿಲ್ಲ. ಜನ ತಮಗೆ ವಿಶ್ವಾಸದಿಂದ ನೀಡಿದ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡರು. ಸ್ಕ್ಯಾಮ್ ದುರಂತವನ್ನು ಸಕ್ಕರೆಯ ಕಹಿಪ್ರಸಂಗವನ್ನಾಗಲಿ ನಿಷ್ಪಕ್ಷಪಾತದಿಂದ, ದೃಢಸಂಕಲ್ಪದಿಂದ ಎದುರಿಸಲಿಲ್ಲ. ತೆಲುಗರೆನ್ನುವ ದೃಷ್ಟಿಯಿಂದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನು ನೇಮಿಸಲಾಯಿತೇ ಹೊರತು, ಪ್ರಭಾವಶಾಲಿ ದಕ್ಷ ವ್ಯಕ್ತಿಯೆನ್ನುವ ದೃಷ್ಟಿಯಿಂದಲ್ಲವೆನ್ನುವುದೂ ಸ್ಪಷ್ಟ. ಮುಖ್ಯಮಂತ್ರಿಗಳ ಅದಕ್ಷತೆ, ಮೀಸಲಾತಿಯ ಬಗೆಗಿನ ಅವರ ನೀತಿ, ಅವರೇ ಸೃಷ್ಟಿಸಿಕೊಂಡ ಉರ್ದು ಪ್ರಸಾರ ಪ್ರಸಂಗದ ಮೋಸಗಾರಿಕೆ, ಬಹುಸಂಖ್ಯಾತರ ಬಗೆಗಿನ ಅವರ ವೈರ ಬುದ್ಧಿ, ಜತೆಗೆ ಅವರ ಸುಳ್ಳು ಹೇಳಿಕೆಗಳು ಕಾಂಗ್ರೆಸ್ ಪತನಕ್ಕೆ ಕಾರಣವಾದುವು. ಬಾಬರಿ ಮಸೀದಿ ಪ್ರಕರಣ ಹಾಗೂ ಕ್ಯಾಪಿಟೇಷನ್ ಶುಲ್ಕದ ವಿವೇಚನಾರಹಿತವಾದ ಹಗರಣವೂ ಜನತೆಯ ಕೋಪಕ್ಕೆ ಕಾರಣವೆಂಬುದನ್ನು ರಾಜಕಾರಣಿಗಳು ಮರೆಯಬಾರದು, ಭ್ರಷ್ಟಾಚಾರವಂತು ದಿನೇ ದಿನೇ ಹೆಚ್ಚುತ್ತಿದೆ. ಅದಕ್ಕೆ ಲಗಾಮು ಹಾಕುವವರಿಲ್ಲ. ಹೆಸರಿಗೆ ಮಾತ್ರ ಲೋಕಾಯುಕ್ತವಿದೆ. ಅದೊಂದು ನಷ್ಟದ ಬಾಬತ್ತಾಗಿದೆ. ಲಂಚರುಷುವತ್ತುಗಳ ಉಲ್ಬಣದಿಂದಾಗಿ ಜನ ರೋಷಗೊಂಡಿದ್ದಾರೆ. ಯಾವ ಆಸನಕ್ಕೆ ಯಾರು ಯೋಗ್ಯರೋ ಅವರನ್ನು ಕೂರಿಸಿದಾಗ ಮಾತ್ರ ವ್ಯವಹಾರಯಂತ್ರ ಸಲೀಸಾಗಿ ಸಾಗುತ್ತದೆ. ವಿಕೇಂದ್ರೀಕರಣ ಹಾಗೂ ಸ್ವಾಯತ್ತತೆಯಿಂದ ಮಾತ್ರ ದೇಶಕ್ಷೇಮ ಸಾಧನೆ ಸುಗಮವಾಗುತ್ತದೆನ್ನುವುದನ್ನು ಅಧಿಕಾರಸ್ಥರು ಹಾಗೂ ಜವಾಬ್ದಾರಿ ಜಾಗಗಳಲ್ಲಿರುವವರು ಅರಿಯಬೇಕಾಗಿದೆ.

ಹಿಂದೆ ಜನತಾಪಕ್ಷ ಅಧಿಕಾರಕ್ಕೆ ಬಂದಾಗಲೂ ರಾಜ್ಯದ ರಾಜಕೀಯ ಪರಿಸ್ಥಿತಿ ಇಂದಿನದಕ್ಕಿಂತ ಭಿನ್ನವಾಗಿರಲಿಲ್ಲ. ಜನತಾಪಕ್ಷವೂ ಕಾಂಗ್ರೆಸ್ ಸಂಸ್ಕೃತಿಯನ್ನೇ ಮುಂದುವರಿಸಿತು. ಅದರೊಳಗೇನೆ ಅಧಿಕಾರಕ್ಕಾಗಿ ಕಚ್ಚಾಟ ನಿರಂತರವಾಗಿ ನಡೆಯುತ್ತಿತ್ತು. ಅದೇ ಕಾರಣಕ್ಕಾಗಿ ಜನ ಜನತಾ ಆಡಳಿತವನ್ನು ತಿರಸ್ಕರಿಸಿ, ಮತ್ತೆ ಕಾಂಗ್ರೆಸ್ಸನ್ನು ಗಾದಿಗೇರಿಸಿತು. ಅಧಿಕಾರ ಕೈಸೇರಿದಾಗ ನಾಯಕರಿಗೆ ಮತ್ತೇರಿ, ಹಳೆಯ ಸೋಲನ್ನು ಮರೆಯುವುದು ಸಹಜವೇನೋ ಎನಿಸುತ್ತದೆ. ಸರಿಯಾದ ವ್ಯವಸ್ಥಿತವಾದ ನಿರ್ಜಾತೀಯವಾದ ಮತ್ತೊಂದು ಪರ್ಯಾಯ ಪಕ್ಷವಿದ್ದರೆ, ಜನತಾದಳ ಅಧಿಕಾರಕ್ಕೆ ಬರುತ್ತಿತ್ತೆಂಬುದು ಅನುಮಾನದ ವಿಷಯ. ಆದ್ದರಿಂದ ನಕಾರಾತ್ಮಕ ಮತಗಳಿಂದಾಗಿ ಜನತಾದಳ ಇವೀಗ ಅಧಿಕಾರಕ್ಕೆ ಬಂದಿದೆ. ಜನರ ವಿವೇಚನಾ ಸಾಮರ್ಥ್ಯವನ್ನು ಮೆಚ್ಚಬೇಕು. ಅದರಿಂದಾಗಿ ಅವರು ಅಭಿನಂದನೀಯರು. ಆಡಳಿತಪಕ್ಷ ತನ್ನ ಹಿಂದಿನ ತಪ್ಪುಗಳನ್ನೆಲ್ಲ ತಿದ್ದಿಕೊಂಡು, ಜನಹಿತ ದೇಶ ಕಲ್ಯಾಣಗಳನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು, ಸೇವಾ ಮನೋಭಾವದಿಂದ ಪ್ರಾಮಾಣಿಕವಾಗಿ ದುಡಿದದ್ದಾದರೆ ಜನ ಮೆಚ್ಚುತ್ತಾರೆ; ಇಲ್ಲ, ತಿರಸ್ಕರಿಸುತ್ತಾರೆ. ನಾಯಕ ಚುನಾವಣೆಯ ಸಂದರ್ಭದಲ್ಲಿ ನಡೆದ ಅಶ್ಲೀಲ ಅಸಹ್ಯ ಬರ್ಬರೀಯ

ಘಟನೆ ಖಂಡನೀಯವಾದದ್ದು. ಮುಖ್ಯ ಮಂತ್ರಿ ಶ್ರೀ ದೇವೇಗೌಡರ ಕ್ಷಮಾಯಾಚನೆಯಿಂದ ಅದರ ಕಾವು ಸದ್ಯದಲ್ಲಿ ಮರೆಯಾಗಿದೆ. ಯಾರಾದರೂ ಎಚ್ಚರತಪ್ಪಿದ್ದಾದರೆ ಅದು ಮತ್ತೆ ಪ್ರಕೋಪಕ್ಕೆ ಹೋಗುತ್ತದೆಂಬುದನ್ನು ತಿರುಗುಬಾಣವಾಗುತ್ತದೆಂಬುದನ್ನು ಯಾರೂ ಮರೆಯಬಾರದು.

ಮೇಲಿಂದ ಮೇಲೆ ಬಂದ ಮುಖ್ಯಮಂತ್ರಿಗಳು ಬಾಯಿತುಂಬ ಕನ್ನಡವನ್ನು ಹೊಗಳಿದರೇ ಹೊರತು, ಅದರ ಏಳ್ಗೆಯನ್ನು ಸಾಧಿಸುವುದರಲ್ಲಿ ವಿಫಲರಾಗಿದ್ದಾರೆ; ನೆಲ ಜಲಗಳ ಸಮಸ್ಯೆಗಳನ್ನು ಬಿಡಿಸಿಲ್ಲ; ಗ್ರಾಮೀಣ ಜನರ ಸಂಕಷ್ಟವನ್ನು ಪರಿಹರಿಸಿಲ್ಲ. ವಿಧಾನ ಸೌಧ ಕನ್ನಡಮಯವಾದಾಗ ಮಾತ್ರ ಕನ್ನಡಕ್ಕೆ ಶುಕ್ರದೆಸೆ ಪ್ರಾಪ್ತವಾದೀತು. ಒಂದೊಂದು ಮಂಡಲದಲ್ಲಿಯೂ ಗೃಹ ಕೈಗಾರಿಕೆಗಳ ಸಮುಚ್ಚಯವನ್ನು ನಿರ್ಮಿಸಿದಾಗ ಮಾತ್ರ ಗ್ರಾಮೀಣ ಯುವಕರ ನಿರುದ್ಯೋಗವನ್ನು ತುಸುಮಟ್ಟಿಗೆ ನಿವಾರಿಸಬಹುದಾಗಿದೆ. ಸುಮಾರು ನಾಲ್ಕು ದಶಕಗಳ ಕಾಲ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ, ಇದೀಗ ಸಿದ್ಧಿಯ ಶಿಖರವನ್ನು ಮುಟ್ಟಿರುವ ಶ್ರೀ ದೇವೇಗೌಡರು ಮಾದರಿ ಮುಖ್ಯಮಂತ್ರಿಗಳೆನಿಸಿಕೊಂಡು, ಎಲ್ಲ ಕನ್ನಡಿಗರಿಗೆ ಅಭಿನಂದನೀಯರಾಗಲೆಂದು ಹಾರೈಸುತ್ತೇನೆ.

ಕಂಬನಿ

೧

ಸಂತೋಷ ಸಂತಾಪಗಳು ಒಂದರ ಹಿಂದೊಂದಾಗಿಯೋ ಜತೆಜತೆಯಾಗಿಯೋ ಅನಿವಾರ್ಯವೆನ್ನುವಂತೆ ಋತುಚಕ್ರನಿಯಮವೆಂಬಂತೆ ಬರುತ್ತವೆ. ಪ್ರಶಸ್ತಿ ಪಾರಿತೋಷಕಗಳ ಮೂಲಕ ಕನ್ನಡಕ್ಕೊದಗಿದ ಲಾಭದ ಹಿಂದೆಯೇ ಮಹಾ ಗಣ್ಯ ಸಾಹಿತಿಗಳ ಸಾವಿನ ಮೂಲಕ ಅದಕ್ಕೊದಗಿದ ಅಗಾಧ ನಷ್ಟ ಕನ್ನಡಿಗರ ಅಸಂತೃಪ್ತಿಯನ್ನು ಅಧಿಕಗೊಳಿಸಿವೆ. ಕೇವಲ ಎರಡುಕಾಲು ತಿಂಗಳ ಅಂತರದಲ್ಲಿಯೇ ಕನ್ನಡನಾಡು ಮಹಾಕವಿಯನ್ನು, ಇಬ್ಬರು ಗಣ್ಯಕವಿಗಳನ್ನು ಕಳೆದುಕೊಂಡು ಅನಾಥವಾಗಿದೆ. ಮಹಾಕವಿಯನ್ನು ಕುರಿತ ವಿಶೇಷ ಸಂಚಿಕೆಯೊಂದು ಈಗಾಗಲೇ ಪ್ರಕಟವಾಗಿದೆ. ಗಣ್ಯರ ಪೈಕಿ ಕಾವ್ಯಾನಂದರೆಂದೇ ನಾಡಿನಲ್ಲೆಲ್ಲ ಸಾಹಿತ್ಯದ ಪರಿಮಳವನ್ನು ಹರಡಿದ ಡಾ|| ಸಿದ್ಧಯ್ಯ ಪುರಾಣಿಕರೊಬ್ಬರಾದರೆ, ಮತ್ತೊಬ್ಬರು ಡಾ|| ಎಚ್. ತಿಪ್ಪೇರುದ್ರಸ್ವಾಮಿಗಳು.

೨

ಸುಸಂಸ್ಕೃತ ವಾತಾವರಣದಲ್ಲಿ, ಉರ್ದುವಿನ ಪನ್ನೀರೆರೆತದಿಂದ, ಇಂಗ್ಲಿಷಿನ ರಸಗೊಬ್ಬರದುಣಿಸಿನಿಂದ ಸ್ವಾನುಭವ ಜೀವದ್ರವ್ಯದ ಪೋಷಣೆಯಿಂದ ವಿವಿಧ ವರ್ಣಾಕೀರ್ಣಪುಷ್ಪಮಯ ಸುಂದರ ಕಾವ್ಯೋದ್ಯಾನವನ್ನು ಕನ್ನಡಿಗರಿಗೊದಗಿಸಿದ ಸೃಜನಶೀಲ ಕೃಷಿಕ ಕವಿ ಸಿದ್ಧಯ್ಯ ಪುರಾಣಿಕರು. ಅವರು ಓದಿದ್ದು ಉರ್ದುವಿನಲ್ಲಿ, ಕಲಿತದ್ದು ಇಂಗ್ಲಿಷಿನಲ್ಲಿ, ಬರೆದದ್ದು ಕನ್ನಡದಲ್ಲಿ. ಅವರು ಜೀವನ ಯಾಪನೆಗಾಗಿ ಆಡಳಿತ ವ್ಯವಹಾರವನ್ನವಲಂಬಿಸಿದರೂ, ಆತ್ಮಸಿದ್ಧಿಗಾಗಿ ಆತ್ಮಪೂಜೆಗಾಗಿ ಸಾಹಿತ್ಯೋಪಾಸನೆಯನ್ನವಲಂಬಿಸುತ್ತಾರೆ.

ದಕ್ಷತೆಯಿಂದ ನಿಸ್ಪೃಹತೆಯಿಂದ ಶೌಚ ಗುಣದಿಂದವರೆಂತು ಶ್ರೇಷ್ಠ ಅಡಳಿತಗಾರ ರೆನಿಸಿಕೊಂಡರೋ ಅಂತೆಯೆ ಲಲಿತಸುಂದರ ಭಾವಾನುಭವ ಸಮೃದ್ಧ ಕವನಗಾರಿಕೆ ಯಿಂದ ಸವ್ಯಸಾಚಿಯೆನಿಸಿಕೊಳ್ಳುತ್ತಾರೆ. ಅವರು ಸಾಹಿತ್ಯ ಕ್ಷೇತ್ರಕ್ಕೆ ಕವಿಯಾಗಿ ಹೆಜ್ಜೆಯಿಟ್ಟು ಕಾಲಕ್ರಮೇಣ ಮೇಲೆ ಮೇಲೇರಿ ವಚನಗಾರಿಕೆಯಲ್ಲಿ ಶಿಖರವನ್ನು ಮುಟ್ಟುತ್ತಾರೆ. ಈ ನಡುವೆ ನಾಟಕ ಕಾದಂಬರಿಗಳನ್ನು ರಚಿಸಿದ್ದರೂ ಅವರು ಕವಿಯೆಂದೇ ವಚನಕಾರರೆಂದೇ ಪ್ರಸಿದ್ಧ ರಾಗಿದ್ದಾರೆ, ತಮ್ಮ ಹೆಸರನ್ನು ಅನ್ವರ್ಥ ಗೊಳಿಸಿಕೊಂಡಿದ್ದಾರೆ. ಎಂಟು ಕವನ ಸಂಗ್ರಹಗಳು, ನಾಲ್ಕು ನಾಟಕಗಳು, ಏಳು ಜೀವನ ಚರಿತ್ರೆಗಳು, ಏಳು ಶಿಶುಸಾಹಿತ್ಯ ಕೃತಿಗಳು, ಎರಡು ಕಥಾ ಸಂಗ್ರಹಗಳು, ಒಂದು ಕಾದಂಬರಿ, ಮೂರು ವಚನ (೧೫೦೦)ಸಂಕಲನಗಳು,ಒಂದು ಅನುವಾದ, ಎರಡು ಸಾಹಿತ್ಯೇತರ ಕೃತಿಗಳು ಇವಿಷ್ಟು ಅವರು ಕನ್ನಡ ತಾಯಿಗರ್ಪಿಸಿದ ಬಣ್ಣ ಬಣ್ಣದ ಮಗಮಗಿಸುವ ಕುಸುಮಗಳು. ಇವುಗಳಲ್ಲದೆ ಸಂಪಾದಿತ ಕೃತಿಗಳೂ ಇವೆ, ಅಪ್ರಕಟಿತ ಕವನ ವಚನಗಳೂ ಇವೆ. ಸಿರಿವಂತರ ಮನೆಯಲ್ಲಿ ದುಡಿಯುತ್ತಿದ್ದರೂ, ಗುಡಿಸಲಲ್ಲಿರುವ ತನ್ನ ಕಂದನಲ್ಲಿಯೇ ದಾಸಿಯ ಮನಸ್ಸು ನಾಟಿರುವಂತೆ, ಅವರ ಅಂಗಾಂಗಗಳು ಆಡಳಿತದ ಯಂತ್ರದಲ್ಲಿ ಸಿಕ್ಕಿಕೊಂಡಿದ್ದರೂ ಅವರ ಮನಸ್ಸು ಸದಾ ಕಾವ್ಯಾಂತರಿಕ್ಷದಲ್ಲಿ ಉಡ್ಡಯನ ಗೈಯುತ್ತಿದ್ದುದರಿಂದಲೇ ಅವರು ಅಷ್ಟೊಂದು ಕಾವ್ಯಸಂಪತ್ತನ್ನು ನಾಡಿಗೆ ನೀಡಲು ಸಾಧ್ಯವಾಗುತ್ತದೆ. ಅವರ ಉಳಿದ ಸಾಹಿತ್ಯ ಕೃತಿಗಳನ್ನು ಮರೆತರೂ ಕವನ ವಚನಗಳೆ ಸಾಕು, ಸಾಹಿತ್ಯ ಲೋಕದ ಸಕಲ ಪ್ರಶಸ್ತಿ ಪ್ರತಿಷ್ಠೆಗಳಿಗೆ ಬಿರುದು ಬಾವಲಿಗಳಿಗೆ ಅವರು ಸರ್ವಾರ್ಹ ರೆನ್ನಲು.

ಪುರಾಣಿಕರ 'ಮರುಳುಸಿದ್ಧನ ಕಂತೆ' ಡಿವಿಜಿಯವರ 'ಮಂಕುತಿಮ್ಮನ ಕಗ್ಗ' ವನ್ನು ನೆನಪಿಗೆ ತರುತ್ತದೆಯಾದರೂ, ಇದು ಅದರ ಪಡಿಯಚ್ಚಲ್ಲ. ಪುರಾಣಿಕರ ಜೀವ ನಾನುಭವದ ಸಾರವೇ ಇದರಲ್ಲಿ ಭಟ್ಟಿಯಿಳಿ ದಂತಿದೆ. ಇದನ್ನೂ ಅವರ ವಚನಗಳನ್ನೂ ಇಡಿ ಇಡಿಯಾಗಿ ನೋಡಿದಾಗ, ಇವರಿಗೆ ಜ್ಞಾನಪೀಠ ಪ್ರಶಸ್ತಿ ಬರಲಿಲ್ಲವೇಕೆಂಬ ಪ್ರಶ್ನೆ ನಿಷ್ಪಕ್ಷಪಾತ ವಿಮರ್ಶಕರನ್ನು ಕಾಡು ತ್ತದೆ. ಕೊನೆಗಿವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಸಹ ಬಂದಿಲ್ಲ ವೆಂದರೆ ಸಭ್ಯ ವಿವೇಕಿಗಳಿಗೆ ಆಶ್ಚರ್ಯ ವಾಗದಿರದು. ಅಂತಸ್ಸತ್ವದ ಜತೆಗೆ— ಅದು ಕಡಿಮೆಯಿದ್ದರೂ ಪರವಾಗಿಲ್ಲ–ರಾಜ ಕೀಯ ಕಿತಾಪತಿಯೂ, ಪ್ರದರ್ಶನ ಚಾತು ರ್ಯವೂ, ಪ್ರಚಾರ ಸಾಮರ್ಥ್ಯವೂ, ಸಮಯ ಸಾಧಕ ಪ್ರವೃತ್ತಿಯೂ ಇದ್ದ ರೇನೇ ಅಂಥ ಪ್ರಶಸ್ತಿಗಳ ನಿರೀಕ್ಷೆ ಸಾಧ್ಯ. ವಾತಾವರಣವೇ ಹಾಗಿರುವಾಗ ಆ ಬಗ್ಗೆ ಗಮನ ಹರಿಸದೆ, ಸಾರಸ್ವತ ಸೇವೆಯೇ ಪೂಜೆಯೆಂದು ನಿಷ್ಠಾವಂತರು ಕರ್ತವ್ಯ ಪಾಲನೆಯಲ್ಲಿ ತೊಡಗಬೇಕಾಗುತ್ತದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ತಮಗೆ ಬರಲಿಲ್ಲವೆಂಬ ಕೊರಗಂತು ಅವರಿಗಿದ್ದೇ ಇತ್ತು. ತನ್ನನ್ನು ತಾನು ಇಲ್ಲ ಗೈವುದೆ ಎಲ್ಲ ಸಾಧನೆಗೆ ತಗುವ ಸಿದ್ಧಿ.

ತಾವು ಸುಟ್ಟುಕೊಂಡು
ನಮಗೆ ಬೆಳಕನ್ನೀವ
ಎಣ್ಣೆ ಬತ್ತಿಗಳಿಗೆ ನಮೋ
(ವಚನಾರಾಮ-೪೩೧)

ಎಂದು ಘೋಷಿಸುವ ವ್ಯಕ್ತಿಗೆ ಯಾವ ಮನ್ನಣೆಯೂ ಅನಾವಶ್ಯಕ.

ನನ್ನ ಇಹಲೋಕ ಯಾತ್ರೆ ಮುಗಿದ ಬಳಿಕ
ನನ್ನನ್ನು ಎಲ್ಲಿಯಾದರೂ ಇರಿಸು—
ನನ್ನ ದೇಶ, ನನ್ನ ನಾಡು
ಕಾಣುವಂತಿರಿಸು (ಅದೇ-೫೦೦)

ಎಂಬ ಅವರ ಮೊರೆ ನಾಡವರೆಲ್ಲರ ಮೊರೆಯಾದಾಗ ಅವರಿಗೆ ಕೃತಜ್ಞತೆ ನಿಜಕ್ಕೂ ಸಲ್ಲಿಸಿದಂತಾಗುತ್ತದೆ.

ನಿಜವಾದ ಶರಣರೆಂದರೆ ಸಿದ್ಧಯ್ಯ ಪುರಾಣಿಕರು! ಅವರ ಮಾನವ ಸಂಬಂಧಗಳಲ್ಲಿ ಪ್ರತಿಕ್ಷಣದ ವ್ಯವಹಾರಗಳಲ್ಲಿ ನಡೆನುಡಿಗಳಲ್ಲಿ ಶರಣರ ಲಕ್ಷಣಗಳು ಎದ್ದು ಕಾಣುತ್ತಿದ್ದುವು. ನೀತಿ ನಿಷ್ಠುರಾಗಿಯೂ ಪ್ರೀತಿ ಸಂಪನ್ನರು; ದಾಕ್ಷಿಣ್ಯಪರರಾಗಿಯೂ ಸತ್ಯನಿಷ್ಠುರರು; ಅನ್ಯಾಯ ವಿರೋಧಿಯಾಗಿಯೂ ಔದಾರ್ಯಸಾಗರರು; ದುರ್ಜನ ವೈರಿಯಾದರೂ, ಪ್ರತೀಕಾರ ದೂರರು. ನಾಡನುಡಿಗಳ ಮೇಲಣ ಅಭಿಮಾನ ಗೌರವಗಳು ಅಸದೃಶ. ಅಂಥವರನ್ನು ಪಡೆದ ನಾಡು ನುಡಿ ಧನ್ಯ.

೩

ನನ್ನ ವಿದ್ಯಾರ್ಥಿ ಮಿತ್ರರಾದ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ನನ್ನ ಕಣ್ಮುಂದೆಯೇ ನಿಧನರಾದದ್ದು ನನಗೆ ತೀವ್ರ ಸಂಕಟವನ್ನುಂಟುಮಾಡಿದೆ. ಅವರು ಸಾಯುವುದು ಒಂದು ವಾರವಿದೆಯೆನ್ನುವಾಗ ಅವರನ್ನು ಆಸ್ಪತ್ರೆಯಲ್ಲಿ ನೋಡಿದ್ದೆ. ರೋಗದ ಬೇನೆಯಿಂದಾಗಿ ಅವರ ಅಂಗಾಂಗಗಳಲ್ಲಿ, ಮುಖದಲ್ಲಿ ಮಾತಿನಲ್ಲಿ ವ್ಯಕ್ತವಾಗುತ್ತಿದ್ದ ಸಂಕಟವನ್ನು ನೋಡಿ ಅಲ್ಲಿಯ ಜಡವಸ್ತುಗಳೂ ಮೂಕಶೋಕಗ್ರಸ್ತವಾಗಿದ್ದುವೆಂದೇ ಹೇಳಬೇಕು. 'ಅಯ್ಯೋ ದೇವರೆ, ಎಂಥ ಸಜ್ಜನರಿಗೆ ಎಂಥ ಸಂಕಟ! ಅವರ ಸತ್ವವನ್ನು ಪರೀಕ್ಷಿಸುವ ಕೊಟ್ಟಕೊನೆಯ ಪರೀಕ್ಷೆ ಇರಬಹುದೆ?' ಎಂದು ನನ್ನ ಮನಸ್ಸು ಗದ್ಗದಿಸಿತು. ಅವರ ಸಂಕಟಕ್ಕೆ ಬಹುಬೇಗ ಅಂತ್ಯ ಸಮನಿಸಲಿ ಎಂದು ನಾನು ಮನದಲ್ಲಿಯೇ ಪ್ರಾರ್ಥಿಸಿದೆ.

ತಿಪ್ಪೇರುದ್ರಸ್ವಾಮಿಗಳು ಹಲವು ವರ್ಷ ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಅವರ ಪ್ರಾಮಾಣಿಕತೆಗೆ ವಿದ್ವತ್ತಿಗೆ ಮತ್ತು ಸಾಹಿತ್ಯ ಸಿದ್ಧಿಗೆ ಮಾರುಹೋಗಿದ್ದ ನಾನು ಅದೇ ತಾನೆ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ನೆರವಿನಿಂದಾಗಿ ನವೀಕರಣಗೊಂಡಿದ್ದ ಸ್ನಾತಕೋತ್ತರ ಕನ್ನಡ ಇಲಾಖೆಗೆ ಅವರನ್ನು ಕರೆದುಕೊಂಡೆ. ಅವರ ಆಗಮನದಿಂದ ಕನ್ನಡ ಇಲಾಖೆಗೆ ಕಾಯಕಲ್ಪವಾದಂತಾಯಿತು; ವಿದ್ಯಾರ್ಥಿಮಯೂರಗಳು ಕೇಗಿ ಕುಣಿಯುವಂತಾಯಿತು. ಭದ್ರಾ ಪ್ರಾಜೆಕ್ಟ್ ವಲಯದಲ್ಲಿ ಸ್ಥಾಪನೆಗೊಂಡ ಸ್ನಾತಕೋತ್ತರ ಕೇಂದ್ರಕ್ಕೆ ಪ್ರಾಧ್ಯಾಪಕರಾಗಿ ಹೋಗಬೇಕಾದ ಸಂದರ್ಭವೊದಗಿದಾಗ ಅವರಿಗೆ ಅಸಮಾಧಾನವಾಯಿತು. ಸಂಸಾರದಿಂದ ದೂರವಿರಬೇಕಾದ ಸಂದರ್ಭ ಅಸಹನೀಯವೆಂಬುದನ್ನು ನಾನು ಬಲ್ಲವನಾಗಿದ್ದೆ. ಆದರೆ ನಾನಾಗ ಅಸಹಾಯಕನಾಗಿದ್ದೆ. ನಾನವರನ್ನು ತಾತ್ಕಾಲಿಕ ಸಂಕಟಕ್ಕೊಳಗುಮಾಡಿದ್ದು ಸರಿಯೆ ಎಂದು ನಾನೀಗಲೂ ಒಮ್ಮೊಮ್ಮೆ ಯೋಚಿಸುವುದುಂಟು.

ಇಷ್ಟಾದರೂ ಅವರು ತಮ್ಮ ಕೊರಗು ಹೇಳಿಕೊಳ್ಳುತ್ತಿದ್ದರೇ ಹೊರತು ನನ್ನ ಮೇಲೆ ಕೋಪಿಸಿಕೊಳ್ಳಲಿಲ್ಲ.

ಕನ್ನಡ ಅಧ್ಯಯನ ಸಂಸ್ಥೆಗೆ ಹಿಂದಿರುಗಿದ ನಂತರ, ಅವರು ನಿರ್ದೇಶಕರಾಗಿ ನಡೆಸಿದ ಕಾರುಬಾರು ಸದಾ ಸ್ಮರಣೀಯ. ಸಾಹಿತ್ಯಾತ್ಮಕ ಸಾಂಸ್ಕೃತಿಕ ಹಿನ್ನೆಲೆಯಿಲ್ಲದ ಅಧಿಕಾರಾರೂಢ ಕನ್ನಡ ವಿರೋಧಿಗಳಿಂದ ಅಧ್ಯಯನ ಸಂಸ್ಥೆ ಮುಳುಗಿ ಹೋಗುತ್ತಿದ್ದಾಗ ಅವರು ನಡಸಿದ ಹೋರಾಟ ರೋಮಾಂಚನಕಾರಿಯಾದದ್ದು. ಅದೇ ಜಾಗದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ, ಈ ಹೊತ್ತಿಗೆ ಅದು ಹೇಳ ಹೆಸರಿಲ್ಲದಂತಾಗುತ್ತಿತ್ತು. ಅಂಥ ಅಪಾಯದ ಸಂದರ್ಭದಲ್ಲವರು ಸಮಾಲೋಚನೆಗಾಗಿ ನನ್ನ ಬಳಿ ಬಂದಿದ್ದರು. ಅತನಕ ಅವರು ಶುದ್ಧ ಸಾತ್ವಿಕರೆಂಬುದು ನನ್ನ ಅಭಿಪ್ರಾಯವಾಗಿತ್ತು. ಅವರ ರಾಜಸಿಕ ಶಪಥವನ್ನು ಕೇಳಿದಾಗ, ಅನ್ಯಾಯವೊದಗಿತೆಂದರೆ ಅವರು ಹೆಸರಿಗೆ ತಕ್ಕಂತೆ ರುದ್ರರಾಗುತ್ತಾರೆಂಬ, ಅಧ್ಯಯನ ಸಂಸ್ಥೆಗೆ ಭಯವಿಲ್ಲವೆಂಬ ಭರವಸೆ ನನ್ನಲ್ಲಿ ಮೂಡಿತು. ಆ ಹಗರಣ ಕೈಮೀರುವ ಸಂದರ್ಭವೊದಗಿದ್ದಾದರೆ ಉಪವಾಸ ಸತ್ಯಾಗ್ರಹದ ಮೂಲಕ ಅವರ ನೆರವಿಗೆ ನಿಲ್ಲುವುದಾಗಿ ನಾನವರಿಗೆ ಆಶ್ವಾಸನೆ ನೀಡಿದೆ. ಅವರೇ ಸ್ವಯಂಶಕ್ತರಾದ್ದರಿಂದ ನನ್ನ ಸಹಾಯ ಅವರಿಗೆ ಬೇಕಾಗಲಿಲ್ಲ.

ತಿಪ್ಪೇರುದ್ರಸ್ವಾಮಿಯವರು ಪ್ರಧಾನವಾಗಿ ವಿದ್ವತ್ಸಾಹಿತಿಗಳು; ಉಳಿದದ್ದೆಲ್ಲವೂ ಅವರ ಪಾಲಿಗೆ ಗೌಣ. ಈ ಅರ್ಥದಲ್ಲಿ ಅವರು ನಿಜವಾದ ತಪಸ್ವಿಗಳು ಹಾಗೂ ಸಾಧಕರು. ಅವರ ತಪಸ್ಸಿನ ಮತ್ತು ಸಾಧನೆಯ ಫಲ ಅವರ ಕೃತಿಗಳಲ್ಲಿ ಪಡಿಮೂಡಿದೆ. ಹನ್ನೊಂದು ಕಾದಂಬರಿಗಳಲ್ಲಿ, ಮೂರು ನಾಟಕಗಳಲ್ಲಿ, ಒಂದೆರಡು ಕಥೆ ಕವನಗಳಲ್ಲಿ, ಸುಮಾರು ೨೯ ಪ್ರಬಂಧ ವಿಮರ್ಶೆಗಳಲ್ಲಿ ಅವರ ಸಾಹಿತ್ಯ ಹರಹುಗೊಂಡಿದೆ. ಐದಾರು ಸಂಪಾದಿತ ಗ್ರಂಥಗಳೂ ಇವೆ, ಗುಣಗಾತ್ರಗಳೆರಡರಿಂದಲೂ ಸಾಮಾನ್ಯ ಮತಿಯನ್ನು ತತ್ತರಗೊಳಿಸುವ ಸಾಹಿತ್ಯದ ಮೊತ್ತದಲ್ಲಿ ಸುಮಾರು ಎಪ್ಪತ್ತುಭಾಗ ಶರಣರಿಗೆ ಮತ್ತು ಶರಣ ಸಾಹಿತ್ಯಕ್ಕೆ ಸಂಬಂಧಿಸಿದ್ದು. ಕಳೆದೆಂಟು ಶತಮಾನಗಳ ಶರಣ ಸಾಹಿತ್ಯದ ಇತಿಹಾಸವನ್ನು ಸಿಂಹಾವಲೋಕನ ಮಾಡುವಾಗ ಅವರಷ್ಟು ಮೌಲಿಕವಾದ ಶರಣ ಸಾಹಿತ್ಯ ಸೃಷ್ಟಿ ಮಾಡಿದವರು ಇಲ್ಲವೆಂದೇ ಹೇಳಬಹುದು.

ಕರ್ನಾಟಕ ಸಂಸ್ಕೃತಿಗೆ ಮತ್ತು ಕಾವ್ಯ ಮೀಮಾಂಸೆ (ತೌಲನಿಕ)ಗೆ ಅವರು ನೀಡಿರುವ ಕೊಡುಗೆ ಅಸಾಧಾರಣವಾದದ್ದು. ಈ ಎರಡೂ ಅಮೂಲ್ಯ ಸಂದರ್ಭ ಗ್ರಂಥಗಳಾಗಿ, ಆಯಾಯಕ್ಷೇತ್ರದ ಆಚಾರ್ಯ ಕೃತಿಗಳಾಗಿ ಶತಶತಮಾನಗಳವರೆಗೆ ವಿದ್ಯಾರ್ಥಿ ವಿದ್ವಾಂಸರ ಜ್ಞಾನಕ್ಷುಧೆಯನ್ನು ಹಿಂಗಿಸುವ ಸುಧೆಯಾಗುಳಿಯುತ್ತವೆಂದು ನಂಬಬಹುದಾಗಿದೆ. ಅವರಿಗೆ ನೊಬೆಲ್ ಪಾರಿತೋಷಕ ಬರಲಿಲ್ಲ, ನಿಜ; ಬರದಿದ್ದರೂ, ಅದಕ್ಕರ್ಹವಾದ ಸಾಹಿತಿಯವರು ಎಂಬ ಹೆಮ್ಮೆಯಿಂದ ಇಂದಿನವರೂ ಮುಂದಿನವರೂ ತೃಪ್ತಿಪಟ್ಟುಕೊಳ್ಳಬಹುದಾಗಿದೆ. ತಮ್ಮ ಕೃತಿಗಳ ಮೂಲಕ ಬಿಟ್ಟುಹೋಗಿರುವ ಆತ್ಮತೇಜಸ್ಸು ಕನ್ನಡದ ಚೇತನವನ್ನು ಸದಾ ಉದ್ದೀಪನಗೊಳಿಸುತ್ತಿರಲೆಂದು ಹಾರೈಸೋಣ.

ವಿಶ್ವಮಾನವ ಕಾವ್ಯಾನಂದ

ಚಿರಂತನ

ರಾಜಕಾರಣಿಯಾಗು
ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು,
ಏನಾದರೂ ಆಗು
ನೀ ಬಯಸಿದಂತೆ
ಏನಾದರೂ ಸರಿಯೆ
ಮೊದಲು ಮಾನವನಾಗು.

ಸರ್ಕಾರದ ಉನ್ನತ ಹುದ್ದೆಗಳಲ್ಲಿ ದಕ್ಷತೆ, ಪ್ರಾಮಾಣಿಕತೆ, ಬುದ್ಧಿಮತ್ತತೆಗಳ ಪ್ರತಿರೂಪದಂತಿದ್ದು, ಕವಿ ಶಿಕ್ಷಣವೇತ್ತ, ವಚನಕಾರ, ಚಿಂತಕ, ಸೌಜನ್ಯಶೀಲ ಮಾನವತಾವಾದಿ ಎನಿಸಿದ್ದ ಕಾವ್ಯಾನಂದರ ದಿವ್ಯ ಸಂದೇಶವಿದು. ಕರ್ನಾಟಕದಲ್ಲಿ ಭಾರತವನ್ನು ಕಾಣುವ, ಭಾರತದಲ್ಲಿ ವಿಶ್ವವನ್ನೆ ದರ್ಶಿಸುವ ಮಹಾನ್ ಚೈತನ್ಯ ವಿಶ್ವಮಾನವನ ಹೃದಯದಿಂದ ಮೂಡಿಬಂದ ವಚನವಿದು.

ಇಂದವರ ಭೌತಿಕ ಶರೀರ 'ನಾನು ನೀನು'ಗಳಲ್ಲಿ ಒಂದಾಗಿ ನಿರ್ವಲಯವಾಗಿ ಭೂಮದಲ್ಲಿ ಸೇರಿ ಹೋಯಿತಾದರೂ (೪-೯-೧೯೯೪) ಈ ಅಮರ ಸಂದೇಶ ಜಗತ್ತನ್ನು ಕಣ್ತೆರೆಯಿಸಬಲ್ಲ ದಿವ್ಯ ಜ್ಯೋತಿಯಾಗಿ ಬೆಳಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ಈ ಕಾವ್ಯಾನಂದ 'ಕಾವ್ಯದೇವಿ'ಯನ್ನುದ್ದೇಶಿಸಿ

ನಿನ್ನಾತ್ಮವಾನಂದ, ನನ್ನಾತ್ಮಕಾವ್ಯ
ಇಂತು ಕಾವ್ಯಾನಂದ ನಾಮ ಸುಶ್ರಾವ್ಯ

—ಎಂದು ಪ್ರಾರ್ಥಿಸಿಕೊಂಡೇ ಕಾವ್ಯ ಪ್ರಪಂಚದಲ್ಲಿ ಈ ಹೆಸರನ್ನು ತಮ್ಮದನ್ನಾಗಿಸಿಕೊಂಡವರು. ಮೊದಲನೆಯದಾಗಿ ಅವರು ರಾಯಚೂರು ಜಿಲ್ಲೆಯ ಯಲಬುರ್ಗ ತಾಲ್ಲೂಕಿನ ಹಳ್ಳಿ ದ್ಯಾಂಪುರದ ಕಲ್ಲಿನಾಥ ಶಾಸ್ತ್ರಿಗಳ ಮಗ ಸಿದ್ಧಯ್ಯ ಪುರಾಣಿಕ. ಜನ್ಮವೆತ್ತಿದ್ದು ಆಗಸ್ಟ್ ೧೮-೧೯೧೮ ರಂದು.

ದ್ಯಾಂಪುರ ಸಾಹಿತ್ಯ, ಸಂಸ್ಕೃತಿ, ಶಿಕ್ಷಣದ ದೃಷ್ಟಿಯಿಂದ ಮುಂದುವರಿದದ್ದೇನೂ ಅಲ್ಲ. ಅಲ್ಲಿಯ ವಿದ್ಯಾವಂತರ ಸಂಖ್ಯೆ ಬೆರಳೆಣಿಕೆಯದ್ದೆಂದರೂ ಸರಿ. ಆ ವಿದ್ಯಾವಂತರೂ ಸ್ವಾಧ್ಯಾಯಿಗಳು. ಸ್ವಪ್ರಯತ್ನದಿಂದಲೇ ಶಿಕ್ಷಣ ಪಡೆದವರು. ಇಂತಹ ಬೆರಳೆಣಿಕೆಯ ವಿದ್ಯಾವಂತರ ಸಾಲಿನಲ್ಲಿ ನಿಂತದ್ದು ಪುರಾಣಿಕರ ಮನೆತನ. ಅಜ್ಜ ಚೆನ್ನ ಕವಿ--ನೂತನ ಶರಣರನೇಕರ ಚರಿತ್ರೆಗಳನ್ನು ಪ್ರೌಢ ಕಾವ್ಯಗಳನ್ನಾಗಿ ರಚಿಸಿದವರು. ತಂದೆ ಪಂಡಿತ ಕಲ್ಲಿನಾಥ ಶಾಸ್ತ್ರಿಯವರು. ಇನ್ನು

ಳಿದ ಕೆಲವು ಶರಣರ ಚರಿತ್ರೆಗಳನ್ನು ಕಾವ್ಯ ರೂಪದಲ್ಲಿ ರಚಿಸಿದವರು – ಮಾತ್ರವಲ್ಲ ಶರಣರ ಸಂದೇಶವನ್ನು ಪುರಾಣ ಪ್ರವಚನ–ಶಿವಕೀರ್ತನೆಗಳ ಮೂಲಕ ಬಿತ್ತರಿಸುತ್ತ ತಮ್ಮ ಆಯುಷ್ಯವನ್ನು ಕಳೆದವರು. ಈ ವಂಶದ ಕೂಸು ಸಿದ್ಧಯ್ಯಪುರಾಣಿಕರು. ಸಹಜವಾಗಿ ಸಂಸ್ಕಾರವಂತ ಹೃದಯ ಶ್ರೀಮಂತಿಕೆ, ಸಜ್ಜನಿಕೆ, ಸಾಹಿತ್ಯ ಸಂಸ್ಕೃತಿಯ ರಸಸ್ರೋತ, ಪ್ರಾಜ್ಞತೆ, ವಿಚಾರ ವಂತಿಕೆ ಅವರಲ್ಲಿ ಹರಿದು ಬಂದಿದ್ದರೆ ಆಶ್ಚರ್ಯವೇನು?

ಸಿದ್ಧಯ್ಯ ಪುರಾಣಿಕರ ಪ್ರಾಥಮಿಕ ಶಿಕ್ಷಣ ತಂದೆ ಕಲ್ಲಿನಾಥ ಶಾಸ್ತ್ರಿಗಳ ಹಾಗೂ ಸೋದರ ಮಾವ ಕಾಲಕಾಲೇಶ್ವರ ಶಾಸ್ತ್ರಿಗಳ ಹತ್ತಿರ ನಡೆದರೆ ಮಾಧ್ಯಮಿಕ ಶಿಕ್ಷಣ ಕುಕ್ಕನೂರಿನ 'ಗುರುಕುಲ'ದ ಪ್ರಸಿದ್ಧ ಇತಿಹಾಸ ಸಂಶೋಧಕ ಪಾಂ. ಭೀ. ದೇಸಾಯಿಯವರ ಕಣ್ಣರಿಕೆಯಲ್ಲಿ ಸಾಗಿತಂತೆ. ಮಾಧ್ಯಮಿಕ ಶಾಲೆಯ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು (I Rank) ಗಿಟ್ಟಿಸಿದ ಪುರಾಣಿಕರು ಗುಲ್ಬರ್ಗದಲ್ಲಿ, ಹೈದರಾಬಾದಿನಲ್ಲಿ ಪ್ರೌಢ ಶಿಕ್ಷಣ ಮುಂದುವರಿಸಿದರು. ೧೯೪೨ ರಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯದ ಬಿ.ಎ. ಪದವಿಯನ್ನು ಮೊಟ್ಟ ಮೊದಲ ಸ್ಥಾನದಲ್ಲೇ ಪಡೆದರು. ಮರು ವರ್ಷವೇ ಪ್ರೊಬೆಷನರಿ ತಹಶೀಲ್ದಾರ್ ಹುದ್ದೆಗೆ ಆಯ್ಕೆಗೊಂಡು ನಾಂದೇಡದಲ್ಲಿ ವೃತ್ತಿ ಜೀವನ ಪ್ರಾರಂಭಿಸಿದರು. ನಿಜಾಂ ರಾಜ್ಯದಲ್ಲಿ ಮತ್ತೆ ಕರ್ನಾಟಕದಲ್ಲಿ ಅಸಿಸ್ಟೆಂಟ್ ಕಲೆಕ್ಟರರಾಗಿ, ಐ.ಎ.ಎಸ್ ಪದವಿಯನ್ನು ಪಡೆದು (೧೯೬೦) ವಿದ್ಯಾ ಇಲಾಖೆಯ ಉಪ ಕಾರ್ಯದರ್ಶಿಯಾಗಿ, ವಾರ್ತಾ ಮತ್ತು ಪ್ರವಾಸೋದ್ಯಮ ನಿರ್ದೇಶಕರಾಗಿ, ಜಿಲ್ಲಾಧಿಕಾರಿಯಾಗಿ, ಕಾರ್ಮಿಕ ಆಯುಕ್ತರಾಗಿ, ಕರ್ತವ್ಯನಿಷ್ಠ, ಪ್ರಾಮಾಣಿಕ, ದಕ್ಷ ಆಡಳಿತಗಾರನೆಂಬ ಕೀರ್ತಿಗೆ ಭಾಜನರಾದರು.

ಅಂದಿನ ನಿಜಾಂ ರಾಜ್ಯದಲ್ಲಿ ಶಿಕ್ಷಣ ನಡೆಯುತ್ತಿದ್ದುದು ಉರ್ದು ಮಾಧ್ಯಮದಲ್ಲಿ–ಇಂಗ್ಲಿಷ್ ಅನಿವಾರ್ಯ ಪಠ್ಯ ಭಾಷೆ. ಹಿಂದಿ ವ್ಯವಹಾರಕ್ಕೆ ಬೇಕಾದ ಭಾಷೆ–ಅರಾಬಿಕ್ ಉರ್ದುವಿಗೆ ಅಗತ್ಯ ಪೋಷಕ ಭಾಷೆ. ಇವುಗಳ ವ್ಯಾಸಂಗ ಕನ್ನಡ ಮಾತೃ ಭಾಷೆಯ ಪುರಾಣಿಕರಿಗೆ ಬಹು ಭಾಷಾ ಪಾಂಡಿತ್ಯಕ್ಕೆ ದಾರಿಯಾಯಿತು. ಈ ನಾಲ್ಕಾರು ಭಾಷೆಗಳ ಪ್ರಭಾವ ವಲಯದಲ್ಲೂ ಈ ಪ್ರತಿಭಾನ್ವಿತ ವಿದ್ಯಾರ್ಥಿ ಕನ್ನಡದ ಕಳಕಳಿಯನ್ನು ರೂಪಿಸಿಕೊಂಡದ್ದು ಕನ್ನಡಿಗರ ಭಾಗ್ಯ. ವಿದ್ಯಾರ್ಥಿ ದೆಸೆಯಲ್ಲಿ ಕನ್ನಡದಲ್ಲಿ ಭಾಷಣ, ನಾಟಕ ರಚನೆ. ನಾಟಕದಲ್ಲಿ ಪಾತ್ರಾಭಿನಯ ನಡೆಸಿ ಕನ್ನಡಕ್ಕಾಗಿ ಕೈಯೆತ್ತಿದರು. ಕನ್ನಡಮ್ಮನ ಸೇವೆಗಾಗಿ ಪಣತೊಟ್ಟರು. 'ಆತ್ಮಾರ್ಪಣೆ' ನಾಟಕದ ಮೂಲಕ ಕನ್ನಡಕ್ಕೆ ತಮ್ಮನ್ನೇ ತಾವು ಅರ್ಪಿಸಿಕೊಂಡರು.

ಆಡಳಿತ ದಂಡವನ್ನು ಪುರಾಣಿಕರು ಕನ್ನಡಿಗರಾಗಿಯೇ ನಿರ್ವಹಿಸಿದರು. ಕಂದಾಯ ಇಲಾಖೆಯ ಉನ್ನತ ಹುದ್ದೆಯನ್ನಲಂಕರಿಸಿ, ದಕ್ಷ ಆಡಳಿತಗಾರನೆಂಬ ಖ್ಯಾತಿವೆತ್ತು–ಕನ್ನಡದ ಕತೆಗಾರ–ಕವಿ–ಸಾಹಿತಿಯಾಗಿ ಮೆರೆದ ಮಾಸ್ತಿಯವರಲ್ಲಿ ತಹಶೀಲ್ದಾರ ಪುರಾಣಿಕರು ಹೇಳಿದ್ದರಂತೆ "ಸರ್, ನಾನು ತಹಶೀಲ್ದಾರನಾಗಿ ಆಯ್ಕೆಯಾದಾಗ ಇದು ಕನ್ನಡಕ್ಕೊಂದು ನಷ್ಟ ಎಂದಿರಂತೆ. ನಾನು ಕನ್ನಡವನ್ನು [ಬಿಡುವು

ದಿಲ್ಲ, ತಮ್ಮ ಆಶೀರ್ವಾದವಿದ್ದರೆ ಸರ್ಕಾರಿ ಸೇವೆಯಲ್ಲಿದ್ದೆ ತಾವು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದಂತೆ ನಾನೂ ನನ್ನ ಯೋಗ್ಯತೆ ಇರುವಷ್ಟು ಮಾಡುತ್ತೇನೆಂದು ಮಾತು ಕೊಡುತ್ತೇನೆ." ಈ ವಚನ ವನ್ನವರು ಪಾಲಿಸಿದರು. ಉನ್ನತ ಅಧಿಕಾರಿ ಕನ್ನಡ ಸಾಹಿತಿಗಳಲ್ಲಿ ಎರಡನೆಯವರಾದರು. ಕರ್ನಾಟಕದ ಐ.ಎ.ಎಸ್ ಅಧಿಕಾರಿ-ಸಾಹಿತಿ ಗಳಲ್ಲಿ ಮೊದಲಿಗರಾದರು. ಸವ್ಯಸಾಚಿಯಂತೆ ಅಧಿಕಾರ-ಸಾಹಿತ್ಯಗಳೆರಡರಲ್ಲಿಯೂ ದಕ್ಷರೂ, ಸಮರ್ಥರೂ, ಖ್ಯಾತನಾಮರೂ ಆದರು.

ಪುರಾಣಿಕರು ಅಧಿಕಾರ ದಂಡ ಹಿಡಿದದ್ದು ನಿಜಾಂ ರಾಜ್ಯದಲ್ಲಿ. ಆದರೆ ಅವರೆಂದೂ ನಿಜಾಂಶಾಹೀ ಅಧಿಕಾರ ದರ್ಪವನ್ನು ಮೆರೆಯಲಿಲ್ಲ. ಹೃದಯ ಶ್ರೀಮಂತಿಕೆಯ ಸಮರ್ಥ ಅಧಿಕಾರಿಯಾಗಿಯೇ ಉಳಿದರು. ಕೊಡಗಿನಲ್ಲಿ-ಬೆಳಗಾವಿಯಲ್ಲಿ ಜಿಲ್ಲಾಧಿಕಾರಿ ಯಾಗಿ ಅವರು ನಡೆಸಿದ ಆಡಳಿತವನ್ನು ಅಲ್ಲಿಯ ಜನ ಈಗಲೂ ನೆನೆಯುತ್ತಾ ರೆಂಬುದು ಸತ್ಯಸ್ಯಸತ್ಯ. ಎಲ್ಲಾದರೂ ಸರಿ- ಯಾವ ಅಧಿಕಾರದ ನೆಲೆಯಲ್ಲೇ ಆಗಲಿ ತನ್ನ ಹೊಣೆಗಾರಿಕೆಯನ್ನು ನಿರ್ವಂಚನೆಯಿಂದ ಜನೋಪಕಾರಕ್ಕಾಗಿ ನಿರ್ವಹಿಸುವುದೇ ಅವರ ಜಾಯಮಾನ. ಹಗಲಿರುಳೆನ್ನದೆ ಅದ ಕ್ಕಾಗಿ ಶ್ರಮಿಸುವುದು ಅವರ ಗುಣ. ಬರ ಗಾಲದಲ್ಲಾಗಲಿ-ಜಲಜಂಝಾಟದಲ್ಲಾಗಲಿ ಅವರ ಅಧಿಕಾರ ಹಸ್ತ ರಕ್ಷೆಯ ಶಕ್ತಿ!

ಪ್ರಾಣಭಯದಲ್ಲೂ ಅವರ ಕರ್ತವ್ಯ ಪ್ರಜ್ಞೆ ಅಬಾಧಿತ. ಹೈದರಾಬಾದಿನಲ್ಲಿ ಭುಗಿ ಲೆದ್ದ ರಜಾಕರ ಹಿಂಸಾಕೃತ್ಯದ ಸಂದರ್ಭ ದಲ್ಲೂ ಗುಲಬರ್ಗದ ಅಸಿಸ್ಟೆಂಟ್ ಕಮೀಷನ ರಾಗಿದ್ದ ಪುರಾಣಿಕರು ತನ್ನ ಕರ್ತವ್ಯದಿಂದ ವಿಮುಖರಾಗಲಿಲ್ಲ. ಹೆಂಡತಿ ಮಕ್ಕಳನ್ನು ಅವರ ತವರು ಮನೆಗೆ ಕಳುಹಿಸಿ—ದಿನ ಕ್ಕೊಂದೆಡೆ ರಾತ್ರಿಯನ್ನು ಕಳೆಯುತ್ತ ಬದುಕುಳಿದ ರೀತಿಯನ್ನು ಅವರಿಂದಲೇ ಕೇಳಬಹುದಿತ್ತು. ('ಸರದಾರ ಪಟೇಲರ ಪುಣ್ಯ ಈಗ ನಮ್ಮ ಮನೆ ದೀಪ ಹಚ್ಚು ತ್ತಿದೆ' ಎಂದಿದ್ದರು. ಆಗಿನ ಸಂದರ್ಭವನ್ನು ನೆನೆದು).

ಬಡವರಾಗಲಿ ಶೋಷಿತರಾಗಲಿ—ದೀನ ರಾಗಲಿ-ಸಾಮಾನ್ಯರಲ್ಲಿ ಸಾಮಾನ್ಯರಾಗಲಿ ಜಿಲ್ಲಾಧಿಕಾರಿಯನ್ನು ಕಾಣುವುದು, ತಮ್ಮಳಲನ್ನು ತೋಡಿಕೊಳ್ಳುವುದು ಅವರ ಕಾಲದಲ್ಲಿ ಕಷ್ಟವಾಗಿರಲಿಲ್ಲ. ಅವರಿಗೆ ಕೇವಲ ಸಹಾನುಭೂತಿಯಲ್ಲ ಕಾರ್ಯತಃ ಸಾಧ್ಯ ವಾದ ಸಹಾಯ ಈ ಜಿಲ್ಲಾಧಿಕಾರಿಯದು. (ಕೊಡಗಿನಲ್ಲಿ ಜಿಲ್ಲಾಧಿಕಾರಿಯಾಗಿದ್ದಾಗ ಪುರಾಣಿಕರನ್ನು ಹತ್ತಿರದಿಂದ ಕಂಡಿದ್ದ ಲೇಖಕನ ಅನುಭವ ಇದು)

ಹೊಸ ಲೋಕವ ಕಟ್ಟುವ ಹೊಣೆ ಬಡವನದು
ಹೊಸ ಬಾಳನು ರಚಿಸುವ ಹೊಣೆ ನಾಳಿನ
ದುಡಿವನದು

ಈ ಭಾವ ಅವರ ಅಧಿಕಾರದಲ್ಲೂ ಹಾಸು ಹೊಕ್ಕಾದದ್ದು.

ದಿನದ ಇಪ್ಪತ್ತನಾಲ್ಕು ಗಂಟೆಯೂ ಅಧಿಕಾರದ ಹೊಣೆ ಹೊತ್ತು ಶ್ರಮಿಸುತ್ತಿದ್ದ ಪುರಾಣಿಕರಿಗೆ ಸಾಹಿತ್ಯರಚನೆಗೆ—ಬರಹಕ್ಕೆ ಸಮಯವೆಲ್ಲಿಯದು? ಸ್ನೇಹಿತರೊಬ್ಬರು ಪ್ರಶ್ನಿಸಿದಾಗ ಅವರೆಂದಿದ್ದರಂತೆ "ಎಲ್ಲೋ ಕಾರಿನಲ್ಲಿ ಹೊರಟಿರುತ್ತೇನೆ. ಯಾವುದೋ ದೃಶ್ಯ ಬೀಳುತ್ತದೆ ದೃಷ್ಟಿಗೆ, ಮನಸ್ಸಿಗೆ

ಒಡಿಯುತ್ತದೆ. ಆಗಲೇ ಮನಸ್ಸಿನಲ್ಲಿ 'ಕಂಪೋಸಿಂಗ್' ಪ್ರಾರಂಭವಾಗಬಹುದು. ಇಲ್ಲ–ಮನೆಗೆ ಬಂದು ಮಲಗಿದಾಗಲೋ, ಮಾರನೆಯ ಬೆಳಗ್ಗೆಯೋ ಅದರ ಮೆಲುಕು ಹಾಕಿದಾಗ ಮೂರ್ತಿಯಾಗುತ್ತದೆ. ಬರೆಯಬೇಕು ಎನ್ನಿಸಿದರೆ ಬರೆದುಬಿಡುವೆ."

ಇದು ನಿಜ, ನಾನೊಂದು ದಿನ ಲೇಖನವನ್ನು ಬರೆದುಕೊಡಲು ಕೇಳಿಕೊಂಡಿದ್ದೆ. ನಿಸರ್ಗಸಂಪತ್ತಿನ ನಡುವೆ ಇದ್ದ ಶಾಲೆಯೊಂದರ ಮೈದಾನದ ಎತ್ತರದಲ್ಲಿ ನಿಂತು ಪ್ರಕೃತಿಯನ್ನೇ ನೋಡುತ್ತ ಶಾಲಾಭಿವೃದ್ಧಿಯ ಕುರಿತು ಮಾತನಾಡುತ್ತಿದ್ದ ಪುರಾಣಿಕರು ಅಂದೇ ಕವಿತೆಯೊಂದನ್ನು ಕಳುಹಿಸಿಕೊಟ್ಟರು 'ಹಸಿರು ಹರಿದುಬಂತು' ಎಂದು.

ಅಧಿಕಾರದಲ್ಲಿ–ಜನೋಪಕಾರಿ ಕೆಲಸದಲ್ಲಿ ತನ್ನನ್ನೇ ತೊಡಗಿಸಿಕೊಂಡಿದ್ದ ಅವರಿಗೆ ದೊರೆತ ಹಲವಾರು ಅನುಭವಗಳು ಅವರ ಪ್ರತಿಭೆಯ ಕುಲುಮೆಯಲ್ಲಿ ಕರಗಿ ಶುದ್ಧ ಕವಿತೆಗಳಾಗಿ—ವಚನಗಳಾಗಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದುವು ಎನ್ನುವುದು ಸರಿಯೆನಿಸುತ್ತದೆ. ಹೀಗಾಗಿಯೇ ಅವರು ಅಧಿಕಾರದಲ್ಲಾಗಲಿ, ಸಾಹಿತ್ಯ ಕ್ಷೇತ್ರದಲ್ಲಾಗಲಿ ಅಯಶಸ್ವಿಯಾಗಲಿಲ್ಲವೆನಿಸುತ್ತದೆ.

ಕಾವ್ಯಾನಂದ ಪುರಾಣಿಕರ ಕನ್ನಡ ಸಾಹಿತ್ಯ ಸೇವೆ ಅನುಪಮವಾದುದು. ನಾಟಕಗಳು, ಕವನ ಸಂಕಲನಗಳು, ವಚನಗಳು, ಚುಟುಕಗಳು, ವಿಮರ್ಶೆ, ಶಿಶುಸಾಹಿತ್ಯ ಹೀಗೆ ನಲವತ್ತಕ್ಕೂ ಹೆಚ್ಚಿನ ಪ್ರಕಟಿತ ಕೃತಿಗಳು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಅರ್ಪಣೆ ಅವರಿಂದ.

ಅವರ ಹೊತ್ತಗೆಗಳಿಗೆ ಮುನ್ನುಡಿ ಬರೆಯುವ ನೆವದಲ್ಲಿ ಕವಿತೆಗಳನ್ನು ಪರಾಮರ್ಶಿಸಿ ಹಿರಿಯ ಸಾಹಿತಿಗಳು ಬರೆದ ನುಡಿಗಳನ್ನಿಷ್ಟು ಬರೆದರೆ ಅವುಗಳ ಸತ್ವ—ಸೊಗಸುಗಳನ್ನು ತಿಳಿಸಿದಂತಾದೀತೆಂದು ಭಾವಿಸಿದ್ದೇನೆ.

“ಕಾವ್ಯಾನಂದರ ಕಾವ್ಯ ರಚನೆಯ ಅಸ್ತಿಭಾರಕ್ಕೆ ತತ್ವಗಳ ತೂಕವಿರುವುದರಿಂದಲೇ ಅವರ ನುಡಿಗಳಲ್ಲಿ ಬೆಂಕಿಯ ಜತೆ-ಜತೆಗೆ ಬೆಳಕು ನುಗ್ಗುತ್ತದೆ—ಭಾವನೆಯ ವಾಯುವೇಗವೂ ಬುದ್ಧಿಯ ಅಗ್ನಿಗುಣವೂ ಸೇರಿಕೊಂಡಿದೆ.”—ದ.ರಾ. ಬೇಂದ್ರೆ

“ಕಾವ್ಯಾನಂದರ ಕವನಗಳು ಹೂಗಳ ಹೃದಯವನು ಹೂಬಿಸಿಲು ಹೊಕ್ಕಂತೆ ನಮ್ಮ ಮನಸ್ಸನ್ನು ಹೊಗುತ್ತವೆ”—ಪುತಿನ

ಪುರಾಣಿಕರ ಸಂಶೋಧಿತ ಐತಿಹಾಸಿಕ ಗ್ರಂಥ ಶರಣಚರಿತಾಮೃತದ ಮುನ್ನುಡಿಯಲ್ಲಿ ಕವಿಋಷಿ ಕುವೆಂಪುರವರು “ಶ್ರೀ ಸಿದ್ಧಯ್ಯ ಪುರಾಣಿಕರು ಅರ್ವಾಚೀನ ಶ್ರೀಸಾಮಾನ್ಯರಿಗೆ ಪ್ರಾಚೀನ ಸಾಮಾನ್ಯ ತಾಶ್ರೀಯನ್ನು ಸುಲಭ ಮಧುರ ರೂಪದಲ್ಲಿ ಉಣಬಡಿಸಿದ್ದಾರೆ” ಎಂದರು.

“ಸ್ವತಂತ್ರಧೀರ ಸಿದ್ಧೇಶ್ವರ, ಎಲ್ಲರ ಕಾಲಕ್ಕೆ ಎಲ್ಲರ ಪಾಲಿಗೆ ಲಭ್ಯನಲ್ಲ. ಆದರೆ ಪುರಾಣಿಕರಂಥವರು ಬದುಕಿನ ಆ ಕೊರೆಯನ್ನು ತುಂಬಿಕೊಡುತ್ತಾರೆ. ಮಾತು ಕೃತಿಗಳ ನಡುವಿನ ಅಂತರ ಮಹಾಕಂದರವಾಗಿ ಏರ್ಪಟ್ಟು ಮಾತು ಅರ್ಥವನ್ನು ಕಳೆದುಕೊಂಡಾಗ ಅರ್ಥವತ್ತಾದ ಮಾತುಗಳನ್ನು ನಾವು ಹುಡುಕಬೇಕಾಗುತ್ತದೆ. ಆಗ ನಮ್ಮ ಅದೃಷ್ಟದಿಂದ ಒಮ್ಮೊಮ್ಮೆ ವಚನೋದ್ಯಾನದ ಬಾಗಿಲು ತೆರೆಯುತ್ತದೆ”

ಇದು ವಚನೋದ್ಯಾನದ ಬಗೆಗೆ ಹಿರಿಯ ಸಾಹಿತಿ ಹಾ. ಮಾ. ನಾಯಕರ ನುಡಿ.

"ತಾವು ಕೈಕೊಂಡ ಕೈಂಕರ್ಯಕ್ಕೆ ಅವರ ಕವಿಹೃದಯ ನೆರವಾದಂತೆ, ಅವರ ಕವಿಹೃದಯ ಪುಷ್ಟಿಗೊಂಡು ಪುಷ್ಪಿತವಾಗುವುದಕ್ಕೆ ಅವರ ಅಧಿಕಾರಸ್ಥಾನ ಸಹಾಯಕವಾಗುತ್ತದೆ. ಅವರ ಚೇತನದ ಮೂಲ ದ್ರವ್ಯ ಕಾವ್ಯಪ್ರತಿಭೆಯಾದ್ದರಿಂದ ಅಧಿಕಾರ ಸ್ಥಾನ ಅದರ ಹೊರಹೊಮ್ಮಿಕೆಗೆ ಸಾಧನವಾಯಿತೆಂದೇ ಹೇಳಬಹುದಾಗಿದೆ. ಲೋಕಾನುಭವದ ತವ ನಿಧಿಯಂತಿರುವ 'ವಚನೋದ್ಯಾನಕ್ಕೆ ಸ್ಫೂರ್ತಿಯ ಸೆಲೆ ಆ ಸ್ಥಾನವೆಂದರೂ ಸಲ್ಲುತ್ತದೆ. ಮಾನಸ ಸರೋವರ, ಕರುಣಾಶ್ರಾವಣ, ಕಲ್ಲೋಲ ಮಾಲೆ ಮೊದಲಾದ ಕೃತಿಗಳಲ್ಲಿ ಕುಡಿಯಿಟ್ಟ ಕವಿಪ್ರತಿಭೆ' ವಚನೋದ್ಯಾನದಲ್ಲಿ ದಾಂಗುಡಿವರಿದಿದೆಯೆಂಬ, ಅದು ಅವರ ಅಧ್ಯಾತ್ಮಿಕ ಸಾಧನೆಗೆ ಹಾಗೂ ಜೀವನದ ದರ್ಶನಕ್ಕೆ ದರ್ಪಣವಾಗಿದೆಯೆಂಬ ಸಂಗತಿ ಸುಸ್ಪಷ್ಟವಾಗಿದೆ"—'ವಚನೋದ್ಯಾನ ದರ್ಶನ'ದಲ್ಲಿ ದೇಜಗೌ.

ಕಾವ್ಯಾನಂದರ ಭಾವಸ್ರೋತದ ರಸ ಬಿಂದುಗಳನ್ನು ಕೆಲವನ್ನಾದರೂ ಗಮನಿಸಿದರೆ ಈ ಹಿರಿಯರ ಮಾತುಗಳ ಸಾರ್ಥಕತೆಯನ್ನು ಮನಗಾಣಬಹುದು.

ಕಾವ್ಯಾನಂದರು ಕಂಡ ನಿಸರ್ಗ ಕನ್ನಿಕೆಯ ಸೌಂದರ್ಯ—

ಹೊಳೆವ ತುಂತುರ್ವನಿಯೆ ಅಕ್ಷತೆ
ಸಾಂಧ್ಯಸ್ವರ್ಣವೆ ಅರಿಶಿನ
ಹೊಂಗದಿರ ಮಾಂಗಲ್ಯ, ಸಂಜೆಯ
ಕೆಂಪೆ ಕುಂಕುಮ ಚಂದನ.

ಈ ಪ್ರಕೃತಿ ಜಡವಲ್ಲ–ಚೈತನ್ಯಮಯಿ—

ಪ್ರಕೃತಿಯೇ ಗುರು, ಗಗನ ಲಿಂಗವು
ಜಗವೆ ಕೂಡಲ ಸಂಗಮ
ಹುಡಿಯೆ ಭಸ್ಮವು ಹುಲ್ಲೆ ಪತ್ರಿಯು
ಜಡವಿದೆಲ್ಲವು ಜಂಗಮ

'ಮಳೆ'–ನೀರನ್ನು ಸುರಿಸುವುದಲ್ಲ—

ನೀರಲ್ಲವಿದು ತೀರ್ಥ, ವಿಶ್ವಲಿಂಗೋದಕವು
ಅಗಲಿನ್ನಾದರೂ ಲೋಕ ನಾಕ

ಮುಕ್ತಿ ಯಾವುದು ?—

ಉಣಿಸಿ ಉಣ್ಣುವ ಭಾವ ಭಕ್ತಿಯು
ಒಲ್ಲೆನೆನೆ ಸುವಿರಕ್ತಿಯು
ಕೂಡಿ ನುಡಿಯಲು ಕೂಡಿ ಜಿಳೆಯಲು
ಕೂಡಿ ನಲಿಯಲು ಮುಕ್ತಿಯು

ಪೂರ್ವಪಶ್ಚಿಮಗಳಲ್ಲಿ—ಕಪ್ಪುಬಿಳಿಗಳಲ್ಲಿ ವೈರವೆಲ್ಲಿದೆ ?—

ಹೊತ್ತಾರೆ ಕೆಂಪು ಮತ್ತಪ್ಪು ಹಳದಿ
ಹೊತ್ತೇರೆ ಬಿಳುಪು ಗೆಳತಿ
ನಿನ್ನಂಗ ಬಿಳಿದು ಇದೊ ನೆರಳು ಕಪ್ಪು
ಎಲ್ಲಿಹುದು ವೈರಗೆಳತಿ

ಮುಳುಗುವವನು — ಮೂಡುವವರಿಗೆ ಏನೆನ್ನ ಬೇಕು ?—

ಮುಳುಗುತಿಹ ದಿನಕರನು ಮೂಡುತಿಹ
ಉಡುಗಣಕೆ
ಹೇಳುತಿಹ "ಮುಗಿದುದೈ ನನ್ನ ಪಾತ್ರ
ನೀವಿನ್ನು ಬೆಳಗಿರಿ, ನಿಮ್ಮಲ್ಲೆ ಜನಿಸಲಿ
ರಾತ್ರಿಯನೆ ಬೆಳಗುವಾ ಶಿವನಮೃತ ನೇತ್ರ

ಲೋಕದ ಸ್ಥಿತಿಯೆಂತಹುದು ?—

ಒಳಿತಿಗೆ ವನವಾಸ ಬಂತು
ರಾಜಕೀಯ ದ್ಯೂತದಿ
ಕೆಡುಕಿಗೆ ಅಧಿಕಾರ ಬಂತು
ಅಧಿಕ ಜೀವ ಜಾತಿಗೆ

ಈ ವೈಜ್ಞಾನಿಕ ಯುಗದಲ್ಲಿ ಕೇಳ ಬೇಕಾದ ಪ್ರಶ್ನೆ—

ಹಿಂದೆಂದು ಇನಿತೊಂದು ಜೀವಿಗಳ ಭವಿತವ್ಯ
ಒಂದೆ ಬೆರಳಿನ ಕ್ರಿಯೆಯನವಲಂಬಿಸಿತ್ತು ?
ಹಿಂದೆಂದು ಇನಿತೊಂದು ಮಾರಕಾಸ್ತ್ರವ ಪಡೆದ
ದೇಶದೆದೆಯೀ ಆದುರಿ ಕಂಪಿಸಿತ್ತು ?

ತ್ರಿಸಾಮಾನ್ಯನ ಅಂತರಾಳದ ಮೊರೆ ಯೇನು ?—

ಘಟನೆ ನೀಡುವ ಮೂಲಭೂತ ಹಕ್ಕುಗಳಲ್ಲ
ನಟನೆ ನೀಡುವ ದಾನದಯೆಯ ಚಿಕ್ಕುಗಳಲ್ಲ
ಜೀವಿಸುವ ಹಕ್ಕನ್ನು ಮಾತ್ರ ಕೊಡಿರಿ
ನನ್ನ ಗೋಜಿಗೆ ನನ್ನ ಬಿಟ್ಟುಬಿಡಿರಿ
ಬದುಕಗೊಡಿ ನನ್ನ ಬದುಕಗೊಡಿ

ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ 'ನಾನಾರು' ಪದ್ಯದ ಒಂದು ಸೊಲ್ಲು—

ಯಾರಾರಿಗುತ್ತರವ ಹೇಳಲಾ 'ನಾನಾರು'
ಎಂಬ ಪ್ರಶ್ನೆಗೆ ತಾಯಿ ಸಾಕಾಯಿತು,
'ನಾನಾರು' ಎನ್ನುವರು 'ನೀನಾರು' ಎಂದಿಲ್ಲ
ಈ ಹಿಗ್ಗು ಕಡೆತನಕ ಬೇಕಾಯಿತು.

ಕನ್ನಡ ಸಾಹಿತ್ಯದಲ್ಲಿ ಮತ್ತೊಮ್ಮೆ ಹನ್ನೆರಡನೆಯ ಶತಮಾನದ ವಚನ ವೈಭವ ವನ್ನು ನೆನಪಿಗೆ ತಂದುಕೊಡುವ 'ವಚನೋ ದ್ಯಾನ' (೧೯೭೭), 'ವಚನ ನಂದನ' (೧೯೮೩), 'ವಚನಾರಾಮ' (೧೯೯೨)— ಕಾವ್ಯಾನಂದರ ಕವಿಹೃದಯ ಸಿದ್ಧಿ. ಅದರಲ್ಲಿ—

ನೀಲಿ ನಕ್ಷೆಗಳ ಆಶ್ವಾಸನೆಗಳ ಆಧಾರದಿಂದ
ಬಡವರ ಹಸಿವೆಯನ್ನು ಹಿಂಗಿಸಿದವರುಂಟೆ
ಅಯ್ಯ ?

ಆಶ್ವಾಸನೆಗಳ ಹೊರೆಹೊತ್ತ ದೇಶಭಕ್ತ ರಿಗೆ ಇದು ಸವಾಲು—

ತೋಳ ನಿರ್ಧರಿಸಿದ ನೀತಿ ಕುರಿಗೆ ವರವಾಗ
ಬಲ್ಲುದೇನಯ್ಯ
ಶೋಷಕರು ರೂಪಿಸಿದ ಶಾಸ್ತ್ರ ಶಾಸನ
ಸಂವಿಧಾನಗಳು
ಶೋಷಿತರಿಗೆ ಸುಖವಾಗಬಲ್ಲುವೇನಯ್ಯ ?

ಪಟ್ಟಭದ್ರ ಹಿತಾಶಕ್ತಿಯ — ದೇಶೋ ದ್ಧಾರಕರಿಗೆ ಚುಚ್ಚು ಮಾತಿದು—

ಸಾಧಕನ ದೃಷ್ಟಿಗೆ ಗೋಚರವಾಗುವ ಸೃಷ್ಟಿ ಎಂತಹುದು ?—

ಕಣ್ಣು ತೆರೆಯೆ ವಿಶ್ವಲಿಂಗದರ್ಶನ
ಉಸಿರಾಡಿಸೆ ವಾಯುಲಿಂಗ ಸ್ಪರ್ಶನ
ಹಸಿವಾಗೆ ಅಗ್ನಿಲಿಂಗದ ಅನುಭವ
ತೃಷೆಯಾಗೆ ಜಲಲಿಂಗದ ಅರಿವು
ನಿದ್ರೆ ಬಂದೊಡೆ ನೆಲದ ಲಿಂಗದ ನೆನಪು
ನೋಡಯ್ಯ

ಕವಿ ಅನಂತಶಕ್ತಿಯನ್ನು ಪ್ರಶ್ನಿಸು ತ್ತಾರೆ—

ನಾನು ನೀನಾಗುವುದು
ನನಗೆ ಸಾಧ್ಯವಾಗಲಿಲ್ಲ
ನೀನು ನಾನಾಗುವುದು
ನಿನಗೂ ಸಾಧ್ಯವಾಗಲಿಲ್ಲವೇನಯ್ಯ ?

ಹೋಗಲಿ–'ನಾನು ನೀನಾಗುವುದಾಗಲಿ, ನೀನು ನಾನಾಗುವುದಾಗಲಿ ಸಾಧ್ಯವಾಗದೆ ಹೋದರೂ 'ನಾನು ನಾನಾಗುವಂತೆಸಗು' ಎಂಬುದೇ ಅವರ ಪ್ರಾರ್ಥನೆ.

ಕನ್ನಡದ ಈ ಪ್ರತಿಭಾನ್ವಿತ ಕವಿಗೆ ಹಲವು ಗೌರವಗಳು ಸಂದಿವೆ. ಮೈಸೂರು(೧೯೮೫) ಬೀದರ್ (೧೯೬೦) ದಿಲ್ಲಿ (೧೯೭೮) ಸಾಹಿತ್ಯ ಸಮ್ಮೇಳನಗಳಲ್ಲಿ ಬೇರೆ ಬೇರೆ ಗೋಷ್ಠಿಗಳ ಅಧ್ಯಕ್ಷತೆ. ಗುಲಬರ್ಗಾದಲ್ಲಿ ನಡೆದ ಅಖಿಲ

ಭಾರತ ಕನ್ನಡ ಸಮ್ಮೇಳನದ ಸಮ್ಮೇಳನ ಅಧ್ಯಕ್ಷತೆ. ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ (೧೯೭೬). ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೭೮). ಭಾರತೀಯ ಭಾಷಾ ಪರಿಷತ್ತಿನ 'ಭಿಲ್ವಾರ ಪ್ರಶಸ್ತಿ' (೧೯೮೦) ಮಾಳವಾಡ ಪ್ರಶಸ್ತಿ. ಮಕ್ಕಳ ಸಾಹಿತ್ಯಕ್ಕೆ ರಾಷ್ಟ್ರೀಯ ಬಹುಮಾನ.

ಕಾವ್ಯಾನಂದರ ಅನೇಕ ಕೃತಿಗಳು ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ ಭಾಷಾಂತರ ಗೊಂಡಿರುವುದೂ ಅವರಿಗೆ ಸಂದ ಗೌರವ.

ಸರ್ಕಾರಿ ಹುದ್ದೆಯಿಂದ ನಿವೃತ್ತರಾದರೂ ಕನ್ನಡದ ಸೇವೆಯಲ್ಲಿ–ಮಾನವ ಸೇವೆಯಲ್ಲಿ ಅವರು ಅವಿಶ್ರಾಂತರು. ಕನ್ನಡ ಪಠ್ಯಪುಸ್ತಕ ರಚನೆಯಲ್ಲಿ ನಿಘಂಟು ಕೆಲಸದಲ್ಲಿ ಅವರು ಸಕ್ರಿಯಾಶೀಲರು. ಕನ್ನಡ, ಕನ್ನಡ ಮಾಧ್ಯಮಗಳಿಗಾಗಿ ಹೋರಾಟದಲ್ಲಿ ಭಾಗಿಗಳು. ಲೋಕಸೇವಾ ಆಯೋಗದ ಪರೀಕ್ಷೆಗಳಲ್ಲಿ ಕನ್ನಡ ಕಡ್ಡಾಯ ಬೇಕೆಂಬುದಕ್ಕಾಗಿ ಡಾ|| ದೇಜಗೌರವರೊಡನೆ ಕುಳಿತು ಅವರು ಉಪವಾಸ ಸತ್ಯಾಗ್ರಹ ಹೂಡಿದ್ದುಂಟು.

ಹೀಗೆ ಸಾಹಿತ್ಯ–ಅಧಿಕಾರ ಉಭಯರಂಗಗಳಲ್ಲಿಯೂ ಯಶಸ್ವಿಯಾದ ಪುರಾಣಿಕರ ತುಂಬು ಜೀವನದ ಹಿರಿಮೆಗೆ, ಸುಖದುಃಖಗಳಲ್ಲಿ ಭಾಗಿಯಾಗಿ—ಕಾವ್ಯ ಸ್ಫೂರ್ತಿಯಾಗಿ ನಿಂತ ಚೈತನ್ಯದ ಚಿಲುಮೆ ಅವರ ಧರ್ಮಪತ್ನಿ ಗಿರಿಜಾದೇವಿಯವರೆಂಬುದು ಪುರಾಣಿಕರದೇ ಬಿಚ್ಚುನುಡಿ—

ನನಗೆ ಅಮೃತ ಬೇಕಿಲ್ಲ
ಮಡದಿಕಡೆದೀವ ಮಜ್ಜಿಗೆಯೆ ಸಾಕು
ಕಲ್ಪವೃಕ್ಷದ ಹಣ್ಣು ಬೇಕಿಲ್ಲ
ನಾನೆ ದುಡಿದುಣುವ ಕಜ್ಜಾಯ ಸಾಕು

ಅವರ ಈ ಜೀವನ ಧ್ಯೇಯವನ್ನು ಸಾಧಿಸಲು ನೆರವಾದವರು ಆ ತಾಯಿ ಗಿರಿಜಾದೇವಿ.

ಐ.ಎ.ಎಸ್. ಅಧಿಕಾರಿ ಕಾವ್ಯಾನಂದರು ಒಳ್ಳೆಯ ವಾಗ್ಮಿಗಳು. ಅವರ ಭಾಷಣ ಪ್ರಜ್ಞಾಪೂರ್ಣ, ರಸಭರಿತ, ಹೃದಯಸ್ಪರ್ಶಿ. ಸಾಹಿತ್ಯಿಕ–ಯಾ ಅಧಿಕಾರಯುತ ಭಾಷಣ ಆಯಾಯ ಶ್ರೋತೃಗಳ ಮನಮುಟ್ಟುವಂತಹುದು. ಅವರ ಮಾತು ಬಸವಣ್ಣನವರ 'ಮಾತು ಮಾಣಿಕ್ಯದ ಶಲಾಕೆಯಂತಿರಬೇಕು' ಎಂಬುದಕ್ಕೆ ಜೀವಂತ ನಿದರ್ಶನ.

'ಜ್ಞಾನ, ಅಧಿಕಾರ, ವಿನಯ–ಸೌಜನ್ಯ, ಸೃಜನಶೀಲತೆಗಳು ಏಕತ್ರ ಸಮಾವೇಶಗೊಂಡ ಪ್ರತಿಭಾಶೀಲ ಸತ್ಪುರುಷರ ವಿರಳ ಪಂಕ್ತಿಯಲ್ಲಿ ಸೇರಿದವರು' ಎಂಬ ಕಾವ್ಯರ್ಷಿ ಕುವೆಂಪು ಅವರ ಪ್ರಶಂಸೆಗೆ ಪಾತ್ರರಾದ ಕಾವ್ಯಾನಂದರ ವ್ಯಕ್ತಿತ್ವ ಸರ್ವಾಕರ್ಷಕ. ಅವರ ಮಂದಹಾಸ, ಮೃದುವಾದ ಹೃದಯಸ್ಪರ್ಶಿಯಾದ ಮಾತು, ಮೋಹಕ ಸೌಜನ್ಯ ಪೂರ್ಣ ವ್ಯಕ್ತಿತ್ವ ಯಾರನ್ನಾದರೂ ಆಕರ್ಷಿಸದೆ ಬಿಡಲಿಲ್ಲ. ಅವರ ಆ ವ್ಯಕ್ತಿತ್ವದ ಪ್ರಭೆಯಲ್ಲಿ ಒಮ್ಮೆ ಸಿಲುಕಿದವರು ಅದನ್ನೆಂದೂ ಮರೆಯಲಾರರು ಎಂಬುದು ಸ್ಪಷ್ಟ; ಅನುಭವ ವೇದ್ಯ.

ಗುಲಬರ್ಗಾದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಆಯ್ಕೆಯಾದಾಗ ಶುಭಾಶಯ ಕೋರಿ ಬರೆದ ಪತ್ರಕ್ಕೆ ಅವರಿಂದ ನನಗೆ ಬಂದ ಉತ್ತರ-ಕನ್ನಡಿಗ ಬಂಧುಗಳಿಗೆ "ನಾನು ಹೂವನಲ್ಲದೆ ಹುಲ್ಲ ತಾರೆನು" ಎಂದು. ನಿಜ ಕಾವ್ಯಾನಂದರು ಕನ್ನಡಿಗರ ಮಾತೆಗೆ ಸುಮಧುರ ಸುಂದರ ಹೂಗಳನ್ನು ತಂದಿತ್ತರು. ಅದರಿಂದ ಅಲಂಕರಿಸಿದರು–ಜೇನು ಹರಿಸಿದರು.

ಅವರಿಗೆ ಅರ್ಪಿಸುವ ನೆನಪಿನ ಕುಸುಮಾಂಜಲಿಯೊಂದೇ ನಮ್ಮಲ್ಲುಳಿದ ಆಸ್ತಿ.

ಮಾನವತೆಯ ಮಕರಂದ—ಕಾವ್ಯಾನಂದ

ಚಂದ್ರಿಕಾ ಪುರಾಣಿಕ

"ಕನ್ನಡದ ವಿಖ್ಯಾತ ಕವಿ, ಸಾಹಿತಿ, ವಿಮರ್ಶಕ, ದಾರ್ಶನಿಕ, ಉಜ್ವಲವಾಗ್ಮಿ, ದಕ್ಷ ಹಿರಿಯ ಸ್ನೇಹಪರ ಆಡಳಿತಾಧಿಕಾರಿ, ಕನ್ನಡದ ಕಟ್ಟಾಳು"—ಎನ್ನಬಹುದಾದ ಅಪೂರ್ವ ವ್ಯಕ್ತಿತ್ವ ಕನ್ನಡದಕಂದ ಕಾವ್ಯಾನಂದ ಡಾ|| ಸಿದ್ಧಯ್ಯ ಪುರಾಣಿಕರ ದಾಗಿತ್ತು.

ಇವೆಲ್ಲಕ್ಕಿಂತ ಮಿಗಿಲಾಗಿ ನನಗಿಂದು ಅವರು ಹಿರಿಯ ಆಶಾವಾದಿ ಚೇತನ, ಮಾನವ ಪಾರಮ್ಯದ ಹರಿಕಾರರಾಗಿ ಕಂಡು ಬರುತ್ತಾರೆ! ಒಂದೊಂದು ಸಲದ ಅವರ ದಿವ್ಯ ಸ್ಮರಣೆಯು ನಮ್ಮಲ್ಲಿ ಅದ್ಭುತ ಶಕ್ತಿಯ; ಉತ್ಸಾಹಗಳ ಮಿಂಚಿನ ಸಂಚಾರ ವನ್ನುಂಟು ಮಾಡುತ್ತದೆ.

ನಮಗೆಲ್ಲಾ ಅವರು ವಿನಯ, ಪ್ರತಿಭೆ, ಸೌಜನ್ಯ, ಸೃಜನಶೀಲತೆಗಳ ಸಿಂಧುವಾಗಿದ್ದರು, ಅಸೀಮ ಚೈತನ್ಯ, ಧೈರ್ಯ, ಆತ್ಮ ಸ್ಥೈರ್ಯಗಳ ಮೇರುಗಿರಿಯಾಗಿದ್ದರು, ಎಲ್ಲಕ್ಕಿಂತ ಹೆಚ್ಚಾಗಿ ನಮಗೆ ಅವರು ಅಭಿಮಾನದ, ಅಕ್ಕರೆಯ, ಆತ್ಮೀಯ ದೊಡ್ಡಪ್ಪಾಜಿಯೂ ಆಗಿದ್ದರು, ಎಲ್ಲರ ಭಾವ–ಬುದ್ಧಿ–ಮನಗಳ ಪುಷ್ಟಿವರ್ಧನೆಗೆ ಒಳ್ಳೆಯ ಟಾನಿಕ್ ಆಗಿದ್ದರು.

"....ಏನಾದರೂ ಆಗು ಮೊದಲು ಮಾನವನಾಗು" ಎಂಬುದು ಅವರ ಜೀವನದ ಶ್ರೀಸೂತ್ರವಾಗಿತ್ತು।

ದೈವನಿಷ್ಠೆಯೊಂದಿಗೆ ಶರಣ ಸಂಸ್ಕೃತಿಯನ್ನು ಅರಗಿಸಿಕೊಂಡ ಕೌಟುಂಬಿಕ ಪರಿಸರದ ಪ್ರಭಾವವನ್ನೂ, ತಮ್ಮ ಸತತ ಸಾಹಸ ಪ್ರಯತ್ನಗಳನ್ನು ಬೆಸೆದುಕೊಂಡು ಬೃಹದಾಕಾರವಾಗಿ ಬೆಳೆದ ಪರಿಪೂರ್ಣ ವ್ಯಕ್ತಿತ್ವ ಅವರದಾಗಿತ್ತು, ದೈವಬಲ, ಪ್ರತಿಭೆ ಹಾಗೂ ಅದೃಷ್ಟ ಅವರ ಸಂಗಾತಿಗಳಾಗಿದ್ದವು.

ಅವರ ಸ್ಮಿತವದನ, ಆತ್ಮೀಯತೆ, ಅಕ್ಕರೆಯನ್ನು ಸೂಸುವ ಹಿತಮಿತ ಮಿದುಮಾತುಗಳ ಮೋಹಕ ವ್ಯಕ್ತಿತ್ವವನ್ನು ನಾವು ಮರೆಯಲು ಸಾಧ್ಯವೇ? ಮಕ್ಕಳೊಂದಿಗೆ ಮಗುವಾಗಿ, ಹದಿವಯಸ್ಕರೊಂದಿಗೆ ಸನ್ಮಿತ್ರರಾಗಿ, ಹಿರಿಯರೊಂದಿಗೆ ಹಿರಿಯರಾಗಿ, ಎಲ್ಲರೊಳಗೊಂದಾಗಿ ಯಾರನ್ನೂ ವೈರಿ ಎನ್ನದ ಅವರು ವಿಶ್ವಬಂಧುತ್ವದ ಪ್ರತಿರೂಪರಾಗಿದ್ದರು.

ಡಾ|| ಸಿದ್ಧಯ್ಯ ಪುರಾಣಿಕರದು ಮೂಲತಃ ಕವಿಮನಸು, ಪರರ ದುಃಖಕ್ಕೆ ಮಿಡುಕಿದರು; ಅವರ ಸುಖವನ್ನು ಕಂಡು

ಹಿಗ್ಗಿದರು. 'ಪರರ ಏಳ್ಗೆಗೆ ಇನಿಸು ನೆರವಾಗುವುದನು' ನಾವು ಅವರಿಂದ ಕಲಿಯಬೇಕಾಗಿದೆ. ಈ ಬಾಳಬುತ್ತಿಯಲ್ಲಿ ನಮ್ಮ ಜೊತೆ ಅವರು ಉಂಡಿದ್ದು ಕೇವಲ ಸಿಹಿಯನ್ನು ಮಾತ್ರ! ನೋವು, ವಿಷಾದ, ನಿರಾಸೆ, ದುಮ್ಮಾನಗಳನ್ನೆಲ್ಲಾ ತಾವೊಬ್ಬರೇ ಕೊನೆಯವರೆಗೂ ಮೌನವಾಗಿ ಉಂಡು, ಜೀರ್ಣಿಸಿಕೊಂಡರು. ಲೌಕಿಕ ಲಾಭ-ವೃದ್ಧಿಗಳೆಷ್ಟೋ ಬಂದರೂ ಸ್ಥಿತಪ್ರಜ್ಞರಾಗಿ ಅನುಭವಿಸಿದರು, ಎಂಥಾ ಸಮಸ್ಯೆಗೂ ಅವರ ಲೋಕಾನುಭವದ ಅಕ್ಷಯನಿಧಿಯಲ್ಲಿ 'ಸಿದ್ಧೌಷಧ' ಖಂಡಿತಾ ಸಿಗುತ್ತಿತ್ತು, ಅನ್ಯಾಯ, ಅನೀತಿ, ಶೋಷಣೆ ಹಾಗೂ ದೌರ್ಜನ್ಯಗಳ ವಿರುದ್ಧ ಸಿಡಿದೇಳುತ್ತಿದ್ದರು, 'ಕೊಡಬೇಕು ನ್ಯಾಯವನು ಕರುಣೆಯಲಿ ಮೃದುಗೊಳಿಸಿ ಕೆಡುಕಿರಲಿ, ಒಳಿತಿರಲಿ' ಎಂಬುದನು ತಮ್ಮ ವೃತ್ತಿಯಲ್ಲಿ ಹಾಗೂ ಪ್ರವೃತ್ತಿಯಲ್ಲಿ ಪ್ರತಿಪಾದಿಸಿದರು.

ಕಾವ್ಯಾನಂದರು 'ಕವಿ-ವ್ಯಕ್ತಿ' ಎರಡೂ ಒಬ್ಬರೇ ಆಗಿದ್ದುದು ಇಲ್ಲಿ ಗಮನಾರ್ಹ ಸಂಗತಿ, ಅವರಿಗೆ 'ಕಾವ್ಯ-ಜೀವನ' ಎರಡೂ ಒಂದೇ ಆಗಿತ್ತು. ನಮ್ಮ ದೊಡ್ಡಮ್ಮನ ಅನಾರೋಗ್ಯ, ಬಸವಸಮಿತಿಯ ಹಿರಿಯರಿಂದಾದ ವಿಶ್ವಾಸದ್ರೋಹ, ನಂಬಿದವರಿಂದಾದ ವಂಚನೆ ಸದಾ ಅವರ ಮನಸ್ಸನ್ನು ಕೀಟವಾಗಿ ಕೊರೆಯುತ್ತಿದ್ದವು, ಇಂದಿನ ಕಲುಷಿತ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಗಳಿಂದ ಅವರು ಬಹುವಾಗಿ ನೊಂದಿದ್ದರು. ಎಂಥಾ ಕಡುವೈರಿಯನ್ನು, ಸನ್ಮಿತ್ರನನ್ನಾಗಿ ಪರಿವರ್ತಿಸುವ ಜಾದೂಗಾರರೂ ಅವರಾಗಿದ್ದರು, 'ಜೀವನವು ಇತ್ತುದನೆ ಜೀವಿಗಳಿಗರ್ಪಿಸುವುದರಲ್ಲಿ ನನ್ನದೇನು ಹೆಚ್ಚುಗಾರಿಕೆ' ಎಂಬುದು ಅವರ ಹಿರಿಯತನಕ್ಕೆ ಸಾಕ್ಷಿ ಆಗಿದೆ. ಅವರೆಂದೂ ವ್ಯರ್ಥವಾಗಿ ಕಾಲಕಳೆಯಲಿಲ್ಲ ಬದಲಿಗೆ ಅದನ್ನು ಕರಾರುವಾಕ್ಕಾಗಿ, ನಿಷ್ಠುರವಾಗಿ ಸರ್ವರ ಹಿತಕ್ಕಾಗಿ ದುಡಿಸಿಕೊಂಡರು. ಬಾಳದಾರಿಯಲ್ಲಿ ಕಾಲಕಳೆದಂತೆ, ಮಾಗುತ್ತಾ ಬಂದರು, ತಮ್ಮ ಪೂರ್ವಜರಂತೆ!

"ಮಾನವನೆ ಮಾನವನ ಭವಿತವ್ಯ ಗಂತವ್ಯ
ಮಾನವೀಯತೆಯೊಂದೆ ನಿಜಧರ್ಮವು
ಮಾನವರು ಕೆಟ್ಟರೂ ಮಾನವತೆ
ಉಳಿಯುವುದು
ಮಾನವರ ಮೇಲೆತ್ತಿ—ಮರುಳಸಿದ್ಧ"

"ಹಿಗ್ಗುವುದೆ ಜೀವನವು, ಕುಗ್ಗುವುದೆ
ಮರಣವು
ಹಿಗ್ಗದಿಹ ಜೀವಿಯೋ ಶವಕೆ ಸಮನಲ್ತೆ!
ಉಗ್ಗೆಯಿಡು ಹಿಗ್ಗಿಗೆ, ಜೀವನದ ಸುಗ್ಗಿಗೆ
ಹಿಗ್ಗು ಹಿಗ್ಗಿಸು, ಬಾಳು—ಮರುಳಸಿದ್ಧ"

"ಎಲ್ಲ ಯಾತ್ರೆಗಳಲ್ಲಿ ಜೀವನಯಾತ್ರೆ ಘನ
ಎಲ್ಲ ಕ್ಷೇತ್ರಗಳಲ್ಲಿ ಹೃದಯಕ್ಷೇತ್ರ
ಅಲ್ಲಿಗೊಯ್ಯುವ ದಾರಿ ಪ್ರೀತಿ ವಿಶ್ವಾಸಗಳು
ಕಲ್ಲು ಮುಳ್ಳುಗಳಲ್ಲ—ಮರುಳಸಿದ್ಧ"

ಹೌದು, ಇವು ಕಾವ್ಯಾನಂದರ 'ಜೀವನ-ದರ್ಶನ'ವನ್ನು ಅಭಿವ್ಯಕ್ತಿಸುವ ಮುಕ್ತಕಗಳು! "ಜೀವನದ ಸಫಲತೆಗೆ ಮನುಜನು ದೈವವೋ, ಜೀವನವೋ, ಸದ್ಗುಣವೋ—ಯಾವುದೋ ಒಂದನ್ನು ನಂಬುವುದು ನಂಬುವುದು ಅಗತ್ಯ' ಎನ್ನುತ್ತಿದ್ದರು, ವೈಚಾರಿಕತೆಯ ಹೂಗಳಿಂದ, ವೈಜ್ಞಾನಿಕತೆಯ ಲತೆಗಳಿಂದ, ಆಳವಾದ ಅನುಭಾವದ ಹದದಿಂದ ತಮ್ಮ 'ಕಾವ್ಯ—ಜೀವನ'ವನ್ನು

ಸಹಜವಾಗಿ ಸಿಂಗರಿಸಿದರು. ನೋಡಿ ಸಂತೋಷಿಸಿದರು. 'ಶಿಸ್ತಿನ ಸಿಪಾಯಿ'ಯೂ ಆಗಿದ್ದ ಡಾ॥ ಪುರಾಣಿಕರು ಎಂದೂ ಯಾರ ಮೇಲೂ ಏನನ್ನೂ ಹೇರಲಿಲ್ಲ; ಕಡ್ಡಾಯ ಮಾಡಲಿಲ್ಲ! ಪ್ರೀತಿ, ಸಮತೆ, ಶಾಂತಿ, ಗೌರವ, ದಯೆಯನ್ನಿತ್ತು ಅವನ್ನು ತಾವೂ ಪ್ರತಿಯಾಗಿ ಪಡೆದರು, ತಮ್ಮ ನೇರ, ಸರಳ, ಸಹಜ ನಡೆ-ನುಡಿಗಳಿಂದ ಬದುಕಿನ ಅರ್ಥವನ್ನು ಕಂಡುಕೊಂಡರು.

ಕೇವಲ 'ಮನುಜಮತ'ದ ಪ್ರತಿಪಾದಕರಾಗಿದ್ದ ಡಾ॥ ಪುರಾಣಿಕರು ತಮಗೆ ಬೇಡಾದುದನ್ನು ಎಂದೂ ಅನ್ಯರಿಗೆ ಬಯಸಲಿಲ್ಲ ಎಂಬುದು ಇಲ್ಲಿ ಉಲ್ಲೇಖಾರ್ಹ ಸಂಗತಿ, ಲೋಕದಲ್ಲಿ ಗಣ್ಯರಾಗುವುದು ಅವರಿಗೆ ಬೇಕಿರಲಿಲ್ಲ. 'ಕೇವಲ ಅತಿಥಿಗಳಂತೆ ಬಂದಿಲ್ಲಿ ಕೆಲದಿನ ಇದ್ದು ಹೋಗುವ ನಮಗೆ, ಪರರಿಗೆ ಲೇಸೆಸಗಿ ಧನ್ಯರಾಗುವುದೇ ಜೀವನದ ಗುರಿ' ಆಗಬೇಕು ಎಂದು ಹಲವು ಸಲ ನಮಗೆ ಹೇಳುತ್ತಿದ್ದರು.

ಡಾ॥ ಸಿದ್ಧಯ್ಯ ಪುರಾಣಿಕರು ತಮ್ಮ ಅಧಿಕಾರದ ಅವಧಿಯಲ್ಲಿನ ವಿವಿಧ ಹಂತಗಳಲ್ಲಿ ಕನ್ನಡಿಗರಿಗಾಗಿ, ಕನ್ನಡದ ಪ್ರಭುತ್ವಕ್ಕಾಗಿ ಅಹರ್ನಿಶಿ ಕಳಕಳಿಯಿಂದ, ನಿರ್ಭೀತರಾಗಿ ಶ್ರಮಿಸಿದರು, ದುಡಿದರು, ಸಾಧಿಸಿದರು! ಬೆಳಗಾಂನಂಥ ಗಡಿಭಾಗದಲ್ಲಿ ಜಿಲ್ಲಾಧಿಕಾರಿಯಾಗಿದ್ದಾಗ ಅವರಿಂದ ಈ ನಾಡು-ನುಡಿಗಾದ ಅಮೂಲ್ಯ ಸೇವೆಯನ್ನು ಯಾವ ಕನ್ನಡಿಗನೂ ಎಂದೂ ಮರೆಯುವಂತಿಲ್ಲ! ಮರೆತಲ್ಲಿ, ಅವನು ಕೃತಘ್ನನೇಸರಿ!

ಕನ್ನಡದ ಕಾರ್ಯಕ್ಕಾಗಿ ಕರೆ ಎಲ್ಲಿಂದ, ಯಾವಾಗ ಬಂದರೂ ಸಿದ್ಧರಾಗಿ ಹೊರಡುವುದು ಈ 'ಕನ್ನಡದ ಕಟ್ಟಾಳು'ವಿನ ವೈಶಿಷ್ಟ್ಯವಾಗಿತ್ತು. ಗೋಕಾಕ ಚಳುವಳಿಯಲ್ಲಿ ಸರೋಜಿನಿ ಮಹಿಷಿ ವರದಿಯ ಅನುಷ್ಠಾನದಲ್ಲಿ, ತಮ್ಮ ಅನಾರೋಗ್ಯವನ್ನು ಲೆಕ್ಕಿಸದೆ, ಶಕ್ತಿಮೀರಿ, ಸಕ್ರಿಯವಾಗಿ ಹೋರಾಡಿದರು.


ಇತ್ತೀಚಿನ ೩-೪ ವರ್ಷಗಳಲ್ಲಿ ಕಟುವಾಸ್ತವ ಬದುಕಿನ ಏರಿಳಿತಗಳು ಅವರನ್ನು ಸಾಕಷ್ಟು ಪರಿಪಕ್ವಗೊಳಿಸಿದ್ದವು, ಪುರಾಣಿಕ ಕುಟುಂಬವನ್ನು ಪ್ರೀತಿ, ವಿಶ್ವಾಸದಿಂದ ಬೆಸೆದು, ಅದನ್ನು ಒಂದು ಆದರ್ಶ ಹಾಗೂ ಸಾರ್ಥಕ ಮನೆತನವನ್ನಾಗಿ ಮಾಡುವ ಹೆಬ್ಬಯಕೆ ಅವರಲ್ಲಿತ್ತು! ಅವರ ಅಭಿಮಾನದ ತಮ್ಮಂದಿರಾದ ಶ್ರೀ ಅನ್ನದಾನಯ್ಯ ಪುರಾಣಿಕರು ಮತ್ತು ಪ್ರೊ॥ ಬಸವರಾಜ ಪುರಾಣಿಕರನ್ನು ಮತ್ತು ಸಂಬಂಧದ ಇನ್ನಿತರ ಸದಸ್ಯರನ್ನು ಅತ್ಯಂತ ಆತ್ಮೀಯತೆ, ಕಾಳಜಿಯಿಂದ ಅವರು ಕಾಣತೊಡಗಿದ್ದರು, ಅವರೆಲ್ಲರ ಶ್ರೇಯೋಭಿವೃದ್ಧಿಗಾಗಿ ಚಿಂತಿಸುತ್ತಿದ್ದರು, ಇತ್ತೀಚೆಗಂತೂ, ನನ್ನ ಆರೋಗ್ಯದ ಕಾಳಜಿ ನನಗಿಂತಾ ಅವರಿಗೇ ಹೆಚ್ಚಾಗಿತ್ತು. ಹೀಗೆ, ಕೇವಲ ಕೌಟುಂಬಿಕ ನೆಲೆಗೆ ಮಾತ್ರ ಸೀಮಿತವಾಗಿದ್ದ ಅವರ ಬಾಂಧವ್ಯದ ಎಲ್ಲೆಗಳು, ಕೊನೆಕೊನೆಗೆ ಎಲ್ಲರೆಡೆಗೂ ವ್ಯಾಪಿಸುತ್ತಾ ಬಂದವು, ಆದರೆ, ನಮ್ಮೆಲ್ಲರ ದುರ್ದೈವ! ಕಾಲನ ಕರೆ ಆಗಲೇ ಬರಬೇಕೆ? ಈ ಒಂದು 'ಪ್ರಯತ್ನ-ಸಿದ್ಧಿ'ಯು ಮಾತ್ರ ಅಪೂರ್ಣವಾಗಿಯೇ ಉಳಿಯಿತು!

"ಮತ್ತೆ ಈಲೋಕಕ್ಕೆ ಬರುವಿಯೋ, ಇಲ್ಲವೋ
ಕರ್ತವ್ಯವಾವುದನು ಉಳಿಸಬೇಡ।
ಸುಪ್ತ ಶಕ್ತಿಯ ಬೆಳೆಸು, ಲೋಕಸೇವೆಗೆ ಬಳಸು
ತೃಪ್ತ ಪಯಣವ ಬೆಳೆಸು—ಮರುಳಸಿದ್ಧ"

ಇದನ್ನು ಮೆಲುಕು ಹಾಕಿದಾಗಲೆಲ್ಲ ನಮಗನ್ನಿಸುತ್ತದೆ, "ಒಂದು ವೇಳೆ ಕಾವ್ಯಾನಂದರು ಇನ್ನೂ ಕೊಂಚ ಕಾಲ ಬದುಕಿದ್ದಿದ್ದರೆ ಖಂಡಿತಾ ಅವರಿಂದ ಮತ್ತೊಂದು ಮಹತ್ಕೃತಿಯೋ ಇಲ್ಲವೇ ಇನ್ನೊಂದು ಘನ ಕಾರ್ಯವೋ ಈ ಲೋಕದಲ್ಲಿ ದಾಖಲಾಗುತ್ತಿದ್ದವು" ಎಂದು. ಆದರೆ ವಿಧಾತನು ನಮ್ಮೆಲ್ಲಾ ಈ ಆಸೆಗೆ ತನ್ನ ತೆರೆಯನ್ನೆಳೆದ!

"....ಕನ್ನಡನಾಡಿಗೆ ನಾಲ್ಕು ದಶಕಗಳಿಂದಲೂ ಹೆಚ್ಚಿನ ಕಾಲ ಉತ್ತಮ ಸಾಹಿತ್ಯವನ್ನು ಸಂಸ್ಕೃತಿಯ ಆದರ್ಶವನ್ನು ಶ್ರೀ ಸಿದ್ಧಯ್ಯ ಪುರಾಣಿಕರು ನೀಡಿದ್ದಾರೆ, ಜೊತೆಗೆ ದಕ್ಷ ಆಡಳಿತಗಾರರೆಂದು ಪ್ರಖ್ಯಾತಿಯನ್ನು ಪಡೆದಿದ್ದಾರೆ, ಆಡಳಿತದಲ್ಲಿ ದಕ್ಷತೆಯ ಜೊತೆಗೆ ಸ್ವಚ್ಛತೆಯನ್ನು ಬೆರೆಸುವುದು ಸಾಧ್ಯ ಎಂಬುದಕ್ಕೆ ಶ್ರೀ ಪುರಾಣಿಕರು ಉತ್ತಮ ನಿದರ್ಶನವಾಗಿದ್ದಾರೆ. ಅವರ ಶುಭ್ರಜೀವನವನ್ನು ಅನುಸರಿಸಿದರೆ ನಮ್ಮ ಸಾರ್ವಜನಿಕ ಜೀವನವು ಉನ್ನತ ಮಟ್ಟಕ್ಕೆ ಏರುವುದರಲ್ಲಿ ಯಾವ ಸಂದೇಹವೂ ಇಲ್ಲ...." ರಸಋಷಿ ಡಾ|| ಕುವೆಂಪು ಅವರ ಈ ಆಶೀರ್ವಚನವೇ ಸಾಕಲ್ಲವೇ ಕಾವ್ಯಾನಂದರ ವ್ಯಕ್ತಿತ್ವಕ್ಕೆ?

ಕನ್ನಡ ಸಾಹಿತ್ಯಾಕಾಶದಲ್ಲಿ ಕಾವ್ಯಾನಂದರ, "ಶರಣ ಚರಿತಾಮೃತ, ಮಾನಸ ಸರೋವರ, ಪದ್ಯರತ್ನಾಕರ, ತುಪ್ಪಾರೊಟ್ಟಿ ಗೇಗೇಗೇ, ವಚನೋದ್ಯಾನ, ತ್ರಿಭುವನದಲ್ಲಿ, ಗಿರಿಜಾ ಕಲ್ಯಾಣ, ಮಿರ್ಜಾಗಾಲಿಬ್, ಮರುಳಸಿದ್ಧನ ಕಂತೆ...."ಗಳು ಬೆಳಗುವವರೆಗೆ, 'ಮಾನವತೆಯ ಮಕರಂದ'ವನ್ನು ಸರ್ವರಿಗೆ ಅವು ಉಣಬಡಿಸುತ್ತವೆ! ಸಂತೃಪ್ತ, ಸಾರ್ಥಕ, ೭೬ ವಸಂತಗಳನ್ನು ಕಂಡಿದ್ದ ಈ ಚಿರಸ್ಮರಣೀಯ ಚೇತನಕ್ಕೆ ಶ್ರದ್ಧಾಂಜಲಿ ಈ ಪುಟ್ಟ ಲೇಖನ!



ಕಾರ್ಯಸಾಧನೆ ಏನೂ ಇಲ್ಲದೇ ಎಲ್ಲಿ ಬಹಳ ಆದರ ಸಿಗುವದೋ ಅಂಥ ಆದರವು ಸಂಶಯಾಸ್ಪದನಾದುದು.

—ಹಿತೋಪದೇಶ

ಡಾ|| ಎಚ್. ತಿಪ್ಪೇರುದ್ರಸ್ವಾಮಿ

ಎಸ್. ಚನ್ನಪ್ಪ

ಕನ್ನಡದ ಹಿರಿಯ ವಿದ್ವಾಂಸರು, ಪ್ರಸಿದ್ಧ ಕಾದಂಬರಿಕಾರರೂ ಆಗಿದ್ದ ಹೊನ್ನಾಳಿ ತಿಪ್ಪೇರುದ್ರಸ್ವಾಮಿ ಅವರು (೧೯೩೮–೧೯೯೪) ಪಾಂಡಿತ್ಯಕ್ಕೆ ಹೆಸರಾಗಿದ್ದಂತೆ, ಸರಳತೆ, ಸಜ್ಜನಿಕೆಗಳಿಗೂ ಹೆಸರಾಗಿದ್ದರು. ಗಾಂಧೀವಾದಿಗಳಾಗಿದ್ದ ತಿಪ್ಪೇರುದ್ರಸ್ವಾಮಿ ಅವರದು 'ಆದರ್ಶ ವ್ಯಕ್ತಿತ್ವ'.

ತೆಂಗು–ಕಂಗುಗಳ ನಾಡಾದ ಮಲೆನಾಡಿನ ಹೊನ್ನಾಳಿಯಲ್ಲಿ 'ಬಡಜಂಗಮ' ಕುಟುಂಬವೊಂದರಲ್ಲಿ ಹುಟ್ಟಿದ ತಿಪ್ಪೇರುದ್ರಸ್ವಾಮಿ ಅವರು (ಜನನ : ೩–೧೨–೧೯೩೮) ಸ್ವಸಾಮರ್ಥ್ಯದಿಂದ ಬೆಳೆದವರು. ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಅವರು, ಅಜ್ಜಿ ಚೆನ್ನಮ್ಮ ಮುತ್ತಜ್ಜಿ ಗೌರಮ್ಮನವರ ಮಡಿಲಲ್ಲಿ ಬೆಳೆದರು. ತಂದೆಗೆ ಸರ್ಕಾರದಲ್ಲಿ ಒಂದು ಸಣ್ಣ ಕೆಲಸ. ಜೊತೆಗೆ ವೈದ್ಯವನ್ನೂ ಮಾಡುತ್ತಿದ್ದರು. ಮನೆಯಲ್ಲಿ ಧಾರ್ಮಿಕ ವಾತಾವರಣ ; ಶರಣರ ಚಿಂತನೆ. ಅಜ್ಜಿ ಬಾಯಲ್ಲಿ ಸದಾ ತತ್ತ್ವಪದಗಳು ; ಶರಣರ ವಚನಗಳು. ಅಂಥ ಧಾರ್ಮಿಕ ವಾತಾವರಣದಲ್ಲಿ ಅವರು ಬೆಳೆದರು.

ಹೊನ್ನಾಳಿ, ಶಿರಾಳಕೊಪ್ಪ ಮತ್ತು ಆನವಟ್ಟಿಗಳಲ್ಲಿ ಆರಂಭದ ವ್ಯಾಸಂಗವನ್ನೂ, ತೀರ್ಥಹಳ್ಳಿಯಲ್ಲಿ ಪ್ರೌಢ ಶಿಕ್ಷಣವನ್ನೂ ಮುಗಿಸಿದ ಅವರು, ಕಾಲೇಜು ಶಿಕ್ಷಣಕ್ಕೆಂದು ಮೈಸೂರಿಗೆ ಬಂದು, ಮಹಾರಾಜ ಕಾಲೇಜಿನ ವಿದ್ಯಾರ್ಥಿಯಾದರು. ಸುತ್ತೂರು ಸ್ವಾಮಿಗಳ 'ಪ್ರಸಾದ ನಿಲಯ'ದಲ್ಲಿ ಆಶ್ರಯ ಪಡೆದ ಅವರು, ವ್ಯಾಸಂಗವನ್ನು ಒಂದು 'ತಪಸ್ಸು' ಎಂಬಂತೆ ಮಾಡಿ, ಬಿ. ಎ. ಪದವಿಯನ್ನು ಉನ್ನತ ದರ್ಜೆಯಲ್ಲಿ ಪಡೆದರು. ಮೊದಲಿಗೆ ವಿಜ್ಞಾನದ ವಿದ್ಯಾರ್ಥಿಯಾಗಿದ್ದ ಅವರು, ಕುವೆಂಪು ಅವರ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ಕನ್ನಡಕ್ಕೆ ಆಕರ್ಷಿತರಾದರು. ಸ್ನಾತಕೋತ್ತರ ಮಟ್ಟದಲ್ಲಿ ಕನ್ನಡ ಸಾಹಿತ್ಯವನ್ನು ವ್ಯಾಸಂಗಮಾಡಿ, ಎಂ. ಎ. ಪದವಿಯನ್ನು ಚಿನ್ನದ ಪದಕಗಳೊಂದಿಗೆ ಪಡೆದರು. ಚಿಕ್ಕಂದಿನಲ್ಲಿಯೇ ಧಾರ್ಮಿಕ ಮನೋಭಾವವನ್ನೂ ಬೆಳೆಸಿಕೊಂಡಿದ್ದ ಅವರು, ಶರಣರ ಜೀವನದಿಂದ ಆಕರ್ಷಿತರಾದರು. ಹೀಗಾಗಿ ಶರಣರ ಜೀವನವನ್ನೂ ಕುರಿತು ಅಧ್ಯಯನ ನಡೆಸಿ, 'ಶರಣರ ಅನುಭಾವ ಸಾಹಿತ್ಯ' ಎಂಬ ಪ್ರೌಢ ಪ್ರಬುದ್ಧವನ್ನೂ ರಚಿಸಿ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪಿಎಚ್‌ಡಿ ಪದವಿ ಪಡೆದರು (೧೯೬೨). ಈ ಅಧ್ಯಯನದ

ಫಲವಾಗಿಯೋ ಮುಂದೆ ಅವರು ಶರಣರ ಜೀವನವನ್ನು ಕುರಿತಂತೆ ಅನೇಕ ಕಾದಂಬರಿಗಳನ್ನು ರಚಿಸಿದರು.

ಹಾಸನದ ಸರ್ಕಾರಿ ಕಾಲೇಜಿನಲ್ಲಿ ೧೯೫೩ರಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕಗೊಂಡು ತಮ್ಮ ವೃತ್ತಿಜೀವನವನ್ನು ಆರಂಭಿಸಿದ ತಿಪ್ಪೇರುದ್ರಸ್ವಾಮಿ ಅವರು, ತಮ್ಮ ಬೋಧನಾಸಾಮರ್ಥ್ಯದಿಂದ ವಿದ್ಯಾರ್ಥಿಗಳಿಗೆ ಪ್ರಿಯರಾದರು. ಸುಮಾರು ಏಳು ವರ್ಷಗಳ ಕಾಲ ಹಾಸನದಲ್ಲಿದ್ದ ಅವರು, ೧೯೬೦ರಲ್ಲಿ ಮೈಸೂರು ಮಹಾರಾಣಿ ಕಾಲೇಜಿಗೆ ಅಧ್ಯಾಪಕರಾಗಿ ಬಂದರು. ೧೯೬೪ರ ವರೆಗೆ ಆ ಕಾಲೇಜಿನಲ್ಲಿ ಕೆಲಸ ಮಾಡಿದ ಅವರು, ಕನ್ನಡ ವಿಭಾಗದ ಮುಖ್ಯಸ್ಥರಾಗಿಯೂ ಕಾರ್ಯ ನಿರ್ವಹಿಸಿದರು. ಅನಂತರ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರಾದ ಅವರು, ಕ್ರಮೇಣ ಉಪ ಪ್ರಾಧ್ಯಾಪಕರೂ ಆಗಿ ಕೆಲಸ ಮಾಡಿದರು. ತಮ್ಮ ಅಧ್ಯಯನ, ಅಧ್ಯಾಪನದ ಜೊತೆಗೆ ತಿಪ್ಪೇರುದ್ರಸ್ವಾಮಿ ಅವರು ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ನಿರ್ದೇಶಕರಾಗಿ (೧೯೭೩–೭೪); ಗಾಂಧಿಭವನದ ನಿರ್ದೇಶಕರಾಗಿಯೂ (೧೯೬೯–೧೯೭೩) ಕಾರ್ಯ ನಿರ್ವಹಿಸಿದರು. ೧೯೭೪ರಲ್ಲಿ ಶಿವಮೊಗ್ಗೆಯ ಬಿ. ಆರ್. ಪ್ರಾಜೆಕ್ಟ್‌ನಲ್ಲಿ ಹೊಸದಾಗಿ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ ನೇಮಕಗೊಂಡ ಅವರು, ಕನ್ನಡ ಪ್ರಾಧ್ಯಾಪಕರೂ ಮತ್ತು ವಿಭಾಗದ ಮುಖ್ಯಸ್ಥರೂ ಆಗಿ ಕೆಲಸ ಮಾಡಿದರು. ಸುಮಾರು ಹತ್ತು ವರ್ಷಗಳ ಕಾಲ ಅಲ್ಲಿದ್ದ ಅವರು, ಸ್ನಾತಕೋತ್ತರ ಕೇಂದ್ರದ ಅಭಿವೃದ್ಧಿಗೂ ಶ್ರಮಿಸಿದರು. ೧೯೮೪ರ ನವೆಂಬರ್ ೧ರಂದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ನೇಮಕಗೊಂಡ ಅವರು, ಸುಮಾರು ಮೂರು ವರ್ಷಗಳ ಕಾಲ ಆ ಹುದ್ದೆಯಲ್ಲಿದ್ದರು. ತಮ್ಮ ಕಾರ್ಯದಕ್ಷತೆಯಿಂದ, ಪಾಂಡಿತ್ಯದ ಬಲದಿಂದ ಸಂಸ್ಥೆಯ ಬೆಳವಣಿಗೆಗೆ ಶ್ರಮಿಸಿದರು; ಸಂಸ್ಥೆಯ ಕೀರ್ತಿ–ಪ್ರತಿಷ್ಠೆಗಳನ್ನು ಹೆಚ್ಚಿಸಿದರು. ವೃತ್ತಿಜೀವನದಿಂದ ೧೯೮೭ರ ನವೆಂಬರ್ ೧ರಂದು ನಿವೃತ್ತರಾದ ಅವರು, 'ಕುವೆಂಪು ಪೀಠ'ದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು.

ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಪರಿಶ್ರಮ ಪಡೆದಿದ್ದ ತಿಪ್ಪೇರುದ್ರಸ್ವಾಮಿ ಅವರು, ಪಾಶ್ಚಿಮಾತ್ಯ ಸಾಹಿತ್ಯದ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ಮಾಡಿದ್ದರು. ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ–ಮುಂತಾದ ಸಂತರ ಜೀವನ–ಕೃತಿಗಳಿಂದಲೂ ಸ್ಫೂರ್ತಿಗೊಂಡಿದ್ದರು. ವಿದ್ಯಾರ್ಥಿಯಾಗಿದ್ದಾಗಲೆ ಶ್ರೀ ಕುವೆಂಪು ಅವರ 'ಮೇರುಸದೃಶ ವ್ಯಕ್ತಿತ್ವ'ದಿಂದ ಪ್ರಭಾವಿತರಾಗಿದ್ದ ಅವರು ಡಿ. ಎಲ್. ನರಸಿಂಹಾಚಾರ್, ಕ. ವೆಂ. ರಾಘವಾಚಾರ್, ಎಸ್. ವಿ. ಪರಮೇಶ್ವರ ಭಟ್ಟ, ಎಸ್. ಅನಂತರಂಗಾಚಾರ್, ತ.ಸು. ಶಾಮರಾವ್, ಉಕಸು, ದೇಜಗೌ–ಮುಂತಾದ ಗುರು–ಹಿರಿಯರ ಮಾರ್ಗದರ್ಶನದಲ್ಲಿ ತಮ್ಮ ಬದುಕು-ಬರೆಹಗಳನ್ನು ರೂಪಿಸಿಕೊಂಡರು.

ಕಾದಂಬರಿ, ಕಾವ್ಯಮೀಮಾಂಸೆ, ವಿಮರ್ಶೆ, ವಿಚಾರ, ಶಾಸ್ತ್ರಸಾಹಿತ್ಯ- ಮುಂತಾದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಐವತ್ತಕ್ಕೂ ಮಿಕ್ಕ ಕೃತಿಗಳನ್ನು ತಿಪ್ಪೇರುದ್ರಸ್ವಾಮಿ ಅವರು ಪ್ರಕಟಿಸಿದ್ದಾರೆ. ಪ್ರಖರತೆ, ಖಚಿತತೆ, ಸ್ಪಷ್ಟತೆಗಳಿಂದ ಮುಪ್ಪುರಿಗೊಂಡಿರುವ ಅವರ ಕೃತಿಸಮೂಹ ಅವರಿಗಿದ್ದ 'ಘನ ಪಾಂಡಿತ್ಯ'ಕ್ಕೆ ಸಾಕ್ಷಿ ಆಗಿವೆ.

ಆರಂಭದಲ್ಲಿ ಸಣ್ಣ ಕಥೆಗಳನ್ನೂ; ನೀಳ್ಗವನಗಳನ್ನೂ ರಚಿಸಿದರು. ಅವರು ಬರೆದ ಸಣ್ಣ ಕಥೆಗಳು 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟವಾಗಿ ಸಾಹಿತ್ಯಾಸಕ್ತರ ಗಮನ ಸೆಳೆದವು. 'ಭಾವಗೀತೆ' ಪ್ರಕಟವಾದ ಅವರ ಪ್ರಥಮ ಪುಸ್ತಕ. 'ತಪೋರಂಗ' ಅವರ ಒಂದು ಕಾವ್ಯ ಸಂಕಲನ. 'ಸಾಹಿತ್ಯ ಚಿತ್ರಗಳು' ಸಣ್ಣ ಕಥೆಗಳ ಸಂಕಲನ. ತಮ್ಮ ಸ್ವಭಾವಕ್ಕನುಗುಣವಾಗಿ ಕಥೆ–ಕಾವ್ಯಕ್ಷೇತ್ರಗಳನ್ನು ಬಿಟ್ಟು, ಸಂಶೋಧನೆ, ವಿಮರ್ಶಾ ಕ್ಷೇತ್ರಗಳಿಗೆ ಒಲಿದರು. ಶಿವಶರಣರ ಜೀವನವನ್ನು ವಿವರವಾಗಿ ಅಧ್ಯಯನ ಮಾಡಲು ಆರಂಭಿಸಿದ ಅವರು, ಕರ್ನಾಟಕ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಅರಿಯಲು ಪ್ರಯತ್ನಿಸಿದರು. ಅದರ ಫಲವೇ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' (೧೯೬೮). ಸುಮಾರು ೮೦೦ ಪುಟಗಳಲ್ಲಿ ಸಚಿತ್ರವಾಗಿ ಪ್ರಕಟವಾಗಿರುವ ಈ ಗ್ರಂಥ, ಒಂದರ್ಥದಲ್ಲಿ ಕರ್ನಾಟಕ ಸಂಸ್ಕೃತಿಯ ವಿಶ್ವಕೋಶವೇ ಆಗಿದೆ. ತಿಪ್ಪೇರುದ್ರಸ್ವಾಮಿ ಅವರ ಪಾಂಡಿತ್ಯ- ಪರಿಶ್ರಮಗಳು ಈ ಗ್ರಂಥದಲ್ಲಿ ಕೆನೆಕಟ್ಟಿವೆ.

ವಚನಸಾಹಿತ್ಯ ತಿಪ್ಪೇರುದ್ರಸ್ವಾಮಿ ಅವರಿಗೆ ಬಹುಪ್ರಿಯವಾಗಿದ್ದ ಕ್ಷೇತ್ರ. ಈ ಕ್ಷೇತ್ರದಲ್ಲಿ ಅವರು ಮಾಡಿರುವ ಕೆಲಸ ದೊಡ್ಡಮಟ್ಟದ್ದು. ಹನ್ನೆರಡನೆಯ ಶತಮಾನದಲ್ಲಿ ಬಾಳಿದ ಶರಣರ ಜೀವನವನ್ನು ಮತ್ತು ಅವರು ಪ್ರತಿಪಾದಿಸಿದ ಮಾನವೀಯ ಮೌಲ್ಯಗಳನ್ನು ಇಂದಿನ ಸಾಮಾಜಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ ಸಾಹಿತ್ಯಕವಾಗಿ ಪರಿವರ್ತಿಸಿ 'ಜನಮನ'ವನ್ನು ಮುಟ್ಟುವ ರೀತಿಯಲ್ಲಿ, ಕಾದಂಬರಿಗಳ ರೂಪದಲ್ಲಿ ಚಿತ್ರಿಸಿರುವುದು ಅವರ ಬಹುದೊಡ್ಡ ಸಾಧನೆ. ಶರಣ ಸಮೂಹಕ್ಕೆ 'ಗುರುಸ್ಥಾನ'ದಲ್ಲಿದ್ದ ಪ್ರಭುದೇವರ ಮಹೋನ್ನತ ವ್ಯಕ್ತಿತ್ವವನ್ನು 'ಪರಿಪೂರ್ಣದೆಡೆಗೆ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. 'ವೈರಾಗ್ಯನಿಧಿ' ಅಕ್ಕಮಹಾದೇವಿಯ ಬದುಕನ್ನು 'ಕದಳಿಯ ಕರ್ಪೂರ'ದಲ್ಲಿ ಬಣ್ಣಿಸಿದ್ದಾರೆ. ಭಕ್ತಿಭಂಡಾರಿ ಬಸವಣ್ಣನವರ ಸಾಧನೆ-ಸಿದ್ಧಿಗಳನ್ನು 'ಕರ್ತಾರನ ಕಮ್ಮಟ'ದಲ್ಲಿ (೩ ಸಂಪುಟಗಳು) ನಿರೂಪಿಸಿದ್ದಾರೆ. ಬಸವಣ್ಣನವರ ಸಾಮಾಜಿಕ ಕಳಕಳಿ, ಸರ್ವಧರ್ಮ ಸಮಭಾವ ಮುಂತಾದ ಗುಣಗಳು ಈ ಕಾದಂಬರಿಯಲ್ಲಿ ಅನಾವರಣಗೊಂಡಿವೆ. 'ನೆರಳಾಚೆಯ ಬೆಳಕು' ಕಾದಂಬರಿಯಲ್ಲಿ ಸೊನ್ನಲಿಗೆ ಸಿದ್ಧರಾಮನ 'ಕಾಯಕನಿಷ್ಠ' ಬದುಕಿನ ಚಿತ್ರಣ ಇದೆ. 'ಕಲ್ಯಾಣ ಕ್ರಾಂತಿ : ಹಿಂದು ಮುಂದು'; 'ಶೂನ್ಯಸಂಪಾದನೆ ಮತ್ತು ಆಧುನಿಕ ಮೌಲ್ಯಗಳು'; 'ವಚನಗಳಲ್ಲಿ ವೀರಶೈವ ಧರ್ಮ'; 'ಕರ್ನಾಟಕ ಶರಣ ಕಥಾಮೃತ'- ಇವು ವೀರಶೈವ ಧರ್ಮ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ತಿಪ್ಪೇರುದ್ರಸ್ವಾಮಿ ಅವರು ಪ್ರಕಟಿಸಿರುವ ಇತರ ಕೃತಿಗಳು.

'ಚರಿತ್ರೆ'ಗೆ 'ಕಥೆ ಕಟ್ಟುವ' ಕಲೆಯನ್ನು ತಿಪ್ಪೇರುದ್ರಸ್ವಾಮಿ ಅವರು ಸಾಧಿಸಿದ್ದರು. 'ಸತ್ಯಾಶ್ರಯ ಸಾಮ್ರಾಜ್ಯ' ಮತ್ತು 'ಶಿಸ್ತುಗಾರ ಶಿವಪ್ಪನಾಯಕ' ಎಂಬ ಎರಡು ಐತಿಹಾಸಿಕ ಕಾದಂಬರಿಗಳನ್ನು ಅವರು ರಚಿಸಿದ್ದಾರೆ.

ನಾಟಕ ರಚನೆಯಲ್ಲೂ ಕೈಯಾಡಿಸಿದ್ದ ತಿಪ್ಪೇರುದ್ರಸ್ವಾಮಿ ಅವರು, 'ವಿಧಿಪಂಜರ'; 'ಶರಣರ ಮೂರು ನಾಟಕಗಳು'; 'ಶ್ರೀ ನಿಜಗುಣ ಶಿವಯೋಗಿ' ಎಂಬ ಮೂರು ನಾಟಕಗಳನ್ನು ರಚಿಸಿದ್ದಾರೆ.

ವಿಮರ್ಶಾ ಕ್ಷೇತ್ರಕ್ಕೂ ತಿಪ್ಪೇರುದ್ರಸ್ವಾಮಿ ಅವರ ಕೊಡುಗೆ ಸಂದಿದೆ. 'ಸಾಹಿತ್ಯ ವಿಮರ್ಶೆಯ ಮೂಲ ತತ್ವಗಳು';'ಕುವೆಂಪು ಅವರ ನಾಟಕಗಳು'; 'ಕುವೆಂಪು ಅವರ ವೈಚಾರಿಕತೆ'; 'ಋಷಿಕವಿ ರಾಘವಾಂಕ'; 'ಭೀಮಕವಿ'; 'ಚಾಮರಸ'—ಇವು ಅವರು ಪ್ರಕಟಿಸಿರುವ ಮುಖ್ಯ ವಿಮರ್ಶಾ ಗ್ರಂಥಗಳು.

ಕಾವ್ಯಮೀಮಾಂಸೆ ಕ್ಷೇತ್ರಕ್ಕೆ ತಿಪ್ಪೇರುದ್ರಸ್ವಾಮಿ ಅವರು ಸಲ್ಲಿಸಿರುವ ಕೊಡುಗೆ ದೊಡ್ಡ ಮಟ್ಟದ್ದು, ಗಣ್ಯವಾದದ್ದು. ಅವರು ಪ್ರಕಟಿಸಿರುವ 'ತೌಲನಿಕ ಕಾವ್ಯ ಮೀಮಾಂಸೆ' ಗುಣದಲ್ಲೂ, ಗಾತ್ರದಲ್ಲೂ ಹಿರಿದಾದುದು. 'ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಗಳ ಎತ್ತರ–ಬಿತ್ತರ; ಸ್ವರೂಪ–ಸಾಧನೆ; ಇತಿ–ಮಿತಿಗಳನ್ನು ಅವುಗಳ ಐತಿಹಾಸಿಕ ಹಿನ್ನೆಲೆಯಲ್ಲಿಟ್ಟು, ಜೊತೆ ಜೊತೆಯಲ್ಲಿಯೇ ಸಾದೃಶ್ಯ–ವೈದೃಶ್ಯಗಳನ್ನು' ಗುರುತಿಸುವ ಒಂದು ಸಾರ್ಥಕ ಪ್ರಯತ್ನವೆ ಈ ಕೃತಿ. ತಿಪ್ಪೇರುದ್ರಸ್ವಾಮಿ ಅವರ ಪಾಂಡಿತ್ಯ–ಪ್ರತಿಭೆಗಳಿಗೆ ಸಾಕ್ಷಿಯಾಗಿರುವ ಇದೊಂದು 'ಆಚಾರ್ಯ ಕೃತಿ'.

ಸಂಪಾದನಾಕ್ಷೇತ್ರದಲ್ಲಿ ತಿಪ್ಪೇರುದ್ರಸ್ವಾಮಿ ಅವರು ಪ್ರಕಟಿಸಿರುವ ಕೃತಿಗಳಿವು: 'ಅಮುಗಿ ದೇವಯ್ಯಗಳ ಸಾಂಗತ್ಯ'; 'ಮಾಧವಾಲಂಕಾರ'; 'ಶರಣ ಚರಿತ ಮಾನಸ'; 'ಸರ್ವಜ್ಞ ವಚನಗಳು'; 'ಸಿದ್ಧರಾಮನ ವಚನಗಳು'. ಈ ಕೃತಿಗಳಿಗೆ ಅವರು ಬೆಲೆಯುಳ್ಳ ಮುನ್ನುಡಿಗಳನ್ನೂ ಬರೆದಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾಗಿರುವ 'ಬಸವೇಶ್ವರ' ಎಂಬುದು ತಿಪ್ಪೇರುದ್ರಸ್ವಾಮಿ ಅವರು ಬರೆದಿರುವ ಒಂದು ಇಂಗ್ಲಿಷ್ ಕೃತಿ. ಬಸವಣ್ಣನವರ ಜೀವನ-ಸಾಧನೆ-ಸಿದ್ಧಿಗಳನ್ನು ಅಡಕವಾಗಿ ಈ ಕೃತಿಯಲ್ಲಿ ಹೇಳಿದ್ದಾರೆ.

ಸಾಹಿತ್ಯ ಸೇವೆಯ ಜೊತೆಗೆ ತಿಪ್ಪೇರುದ್ರಸ್ವಾಮಿ ಅವರು ಸಲ್ಲಿಸಿದ ಸಂಘ-ಸಂಸ್ಥೆಗಳ ಸೇವೆಯೂ ಗಣ್ಯವಾದುದು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಶರಣ ಸಾಹಿತ್ಯ ಪ್ರಕಟಣೆ—ಪ್ರಚಾರಗಳಿಗೆ ಶ್ರಮಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಮಂಡಳಿಗಳ ಸದಸ್ಯರಾಗಿ, ಹೊರನಾಡಿನ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿ ಮತ್ತು ನೇಮಕ ಮಂಡಳಿಗಳ ಸದಸ್ಯರಾಗಿ ತಿಪ್ಪೇರುದ್ರಸ್ವಾಮಿ ಅವರು ಸೇವೆ ಸಲ್ಲಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಷ್ಠ ಯೋಜನೆಗಳಾದ 'ಕನ್ನಡ ವಿಶ್ವಕೋಶ' ಮತ್ತು 'ಎಪಿಗ್ರಾಫಿಯ ಕರ್ನಾಟಕ'ದ ಪ್ರಧಾನ ಸಂಪಾದಕರಾಗಿದ್ದ ಅವರು, ಆ ಯೋಜನೆಗಳ ಪ್ರಗತಿಗೆ ಬಹು

ವಾಗಿ ಪ್ರವೇಶಿಸಿದರು. 'ಪ್ರಬುದ್ಧ ಕರ್ಣಾಟಕ'ದ ಪ್ರಧಾನ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದರು.

ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ತಿಪ್ಪೇರುದ್ರಸ್ವಾಮಿ ಅವರು ಸಲ್ಲಿಸಿದ ಸೇವೆಗಾಗಿ ವಿವಿಧ ಬಗೆಯ ಬಹುಮಾನಗಳು ಪ್ರಶಸ್ತಿಗಳು ಲಭಿಸಿವುವು. ಅವರ 'ಪರಿಪೂರ್ಣದೆಡೆಗೆ' ಕಾದಂಬರಿಗೆ ೧೯೬೨ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂತು. ಅವರ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಗ್ರಂಥಕ್ಕೆ ೧೯೬೮ ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿತು. 'ವಚನಗಳಲ್ಲಿ ವೀರಶೈವ ಧರ್ಮ' ಗ್ರಂಥಕ್ಕೆ ೧೯೮೦ ರಲ್ಲಿ ಹುಬ್ಬಳ್ಳಿ ಮೂರುಸಾವಿರ ಮಠದ ಧರ್ಮ ಪ್ರಚಾರಕ ಮಂಡಲ ಪ್ರಶಸ್ತಿ ಪ್ರಾಪ್ತವಾಯಿತು ಅವರ 'ನೆರಳಾಚೆಯ ಬೆಳಗು' ಕಾದಂಬರಿಗೆ ೧೯೮೧ ರಲ್ಲಿ ಇಲಕಲ್ಲಿನ ಶ್ರೀ ವಿಜಯ ಮಹಾಂತೇಶ್ವರ ಮಠದ ಸಾಹಿತ್ಯ ಪ್ರಶಸ್ತಿ ಬಂತು. ಕರ್ನಾಟಕ ಅಕಾಡೆಮಿ ೧೯೮೫ ರಲ್ಲಿ "ಪ್ರಶಸ್ತಿ" ನೀಡಿ ಸನ್ಮಾನಿಸಿತು. ಅವರ ೬೦ ನೆಯ ಹುಟ್ಟುಹಬ್ಬವನ್ನು ೧೯೮೮ರಲ್ಲಿ ಮೈಸೂರಿನಲ್ಲಿ ಸಾರ್ವಜನಿಕವಾಗಿ ಆಚರಿಸಿ, 'ಶಿವಚಿಂತನ' ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಿ, ಗೌರವಿಸಲಾಯಿತು.

'ಸಾಹಿತ್ಯ ಚಿಂತನೆ' ಮತ್ತು 'ಶಿವಚಿಂತನೆ'ಯಲ್ಲಿಯೇ ನಿರತರಾಗಿದ್ದ 'ಸಂಸ್ಕೃತಿ ಸಂಪನ್ನ' ತಿಪ್ಪೇರುದ್ರಸ್ವಾಮಿ ಅವರು ದಿನಾಂಕ ೨೮-೧೦-೧೯೯೪ ರಲ್ಲಿ ಮೈಸೂರಿನಲ್ಲಿ ತೀರಿಹೋದರು.



ಮೀನು ನೀರು ಬಿಟ್ಟು, ಮೇಲೆ ಬಂದರೆ ಸಾಯುವದು. ಹಾಗೆಯೇ ಧರ್ಮ ಬಿಟ್ಟವರ ಗತಿ.

—ಪರಮಹಂಸ

'ಶ್ರೇಷ್ಠ ವಿದ್ವಾಂಸ, ಅಪರೂಪದ ಅನುಭಾವಿ'

ಡಾ॥ ಸಿ. ಪಿ. ಸಿದ್ಧಾಶ್ರಮ

ಡಾ॥ ಎಚ್. ತಿಪ್ಪೇರುದ್ರಸ್ವಾಮಿ ಅವರು ಕನ್ನಡದ ಶ್ರೇಷ್ಠ ವಿದ್ವಾಂಸ, ಉತ್ತಮ ಸೃಜನಶೀಲ ಲೇಖಕ. ಮೊದಲ ದರ್ಜೆಯ ಸಂಶೋಧಕ, ಅತ್ಯುತ್ತಮ ಪ್ರಾಧ್ಯಾಪಕ, ಒಳ್ಳೆಯ ವಾಗ್ಮಿ, ದಕ್ಷ ಆಡಳಿತಗಾರ ಕನ್ನಡದ ಹೋರಾಟಗಾರ, ಅನುಭಾವಿ ಸಂತ—ಇದೆಲ್ಲವೂ ಹೌದು. ತಿಪ್ಪೇರುದ್ರ ಸ್ವಾಮಿಯವರು ಕಥೆ, ಕಾದಂಬರಿ, ನಾಟಕ, ಕಾವ್ಯ, ಸಂಶೋಧನೆ, ವಿಮರ್ಶೆ–ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಮೌಲಿಕ ಕೃತಿಗಳನ್ನು ರಚನೆ ಮಾಡಿದ್ದರೂ ಕಾದಂಬರಿಕಾರರಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ, ಅತ್ಯಂತ ಬೆಲೆಯುಳ್ಳ ಕೃತಿಗಳನ್ನು ರಚಿಸಿ ಪ್ರಸಿದ್ಧಿಯ ಶಿಖರವನ್ನೇರಿದವರು; ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನೂ, ನವಚೈತನ್ಯವನ್ನು ತಂದುಕೊಟ್ಟವರು. 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ', 'ಶರಣರ ಅನುಭಾವ ಸಾಹಿತ್ಯ' 'ತೌಲನಿಕ ಕಾವ್ಯಮೀಮಾಂಸೆ'– ಇವು ಇವರು ಆಚಾರ್ಯ ಕೃತಿಗಳು. ಗಾಂಧಿವಾದಿಗಳೂ ನಿಜವಾದ ಅರ್ಥದಲ್ಲಿ ಶರಣರೂ ಆಗಿದ್ದ ಸ್ವಾಮಿಯವರು ಬದುಕಿನಲ್ಲಿ ಬರುವ ಸುಖ-ದುಃಖಗಳನ್ನು ಸಮಚಿತ್ತದಿಂದ, ನಿರ್ಲಿಪ್ತ ಮನೋಭಾವದಿಂದ ಸ್ವೀಕರಿಸುವ ಸ್ಥಿತಪ್ರಜ್ಞರಾಗಿದ್ದರು. ವಿನಯ, ಸಜ್ಜನಿಕೆ, ಸೌಜನ್ಯ, ಸುಸಂಸ್ಕೃತ, ಮಾನವೀಯತೆಗಳ ಸಾಕಾರ-ಮೂರ್ತಿಯಾಗಿದ್ದರು.

ನನಗೆ ಮೊದಲು ತಿಪ್ಪೇರುದ್ರಸ್ವಾಮಿಯವರ ಪರಿಚಯವಾದದ್ದು, ಅವರ 'ಜ್ಯೋತಿ ಬೆಳಗುತಿದೆ' ಎಂಬ ಕಾದಂಬರಿಯ ಮೂಲಕ. ನಾನು ಪದವಿ ತರಗತಿಯಲ್ಲಿ ಓದುತ್ತಿದ್ದಾಗ ಈ ಕಾದಂಬರಿಯನ್ನು ಓದಿದೆ. ಅಲ್ಲಿ ನಿಜಗುಣರ ಬದುಕಿನ ವಿವಿಧ ಘಟ್ಟಗಳನ್ನು, ಅವರ ಸಾಧನೆ-ಸಿದ್ಧಿಗಳನ್ನು, ಅವರ ವ್ಯಕ್ತಿತ್ವದ ಮಹಿಮೆ-ಹಿರಿಮೆಯನ್ನು, ಅವರು ಏರಿದ ಎತ್ತರದ ನಿಲುವನ್ನು ಅತ್ಯಂತ ಮನೋಜ್ಞವಾಗಿ, ಚಿತ್ತಾಕರ್ಷಕವಾಗಿ ಸುಂದರವಾದ ಶೈಲಿಯಲ್ಲಿ ನಿರೂಪಿಸಿರುವುದು, ಚಿತ್ರಿಸಿರುವುದು ನನ್ನ ಮನಸ್ಸಿಗೆ ನಾಟಿ ಹೋಯಿತು. ನಂತರ ಅವರ 'ಕದಳಿಯ ಕರ್ಪೂರ' ಕಾದಂಬರಿಯನ್ನು ಇದೇ ಕಾಲದಲ್ಲಿ ಓದಿದೆ. ಅಲ್ಲಿ ಚಿತ್ರಿಸಲ್ಪಟ್ಟದ್ದ ಅಕ್ಕಮಹಾದೇವಿಯ ಜೀವನ ವೃತ್ತಾಂತ ಮೇಲಿನಂತೆಯೇ ಹೃದಯಂಗಮವಾಗಿತ್ತು. ಲೌಕಿಕ ಸುಖಕ್ಕೊಲಿಯದ ಅಕ್ಕ ಆಧ್ಯಾತ್ಮಿಕ ಚೆಲುವನ್ನು ಒಲಿದು, ಆತನನ್ನು ಪಡೆಯಬೇಕೆಂಬ

ಹಂಬಲದಲ್ಲಿ ನೊಂದು, ಬೆಂದು ಪಕ್ವಸ್ಥಿತಿಗೆ ಬರುವ ಅವಳ ಆಧ್ಯಾತ್ಮಿಕ ಬದುಕಿನ ಹೋರಾಟವನ್ನು ಹಂತಹಂತವಾಗಿ ಚಿತ್ರಿಸಿರುವುದು ಯಾರೂ ಮೆಚ್ಚುವ ಅಂಶವಾಗಿದೆ. ನಂತರ ನಾನು ಬಿ.ಎ. ಅಂತಿಮ ತರಗತಿಯಲ್ಲಿ 'ಧರ್ಮಗಳು (Religions) ಎಂಬ ಮೈನರ್ (Minor) ವಿಷಯವಾಗಿ ವೀರಶೈವ ಧರ್ಮವನ್ನು ಅಧ್ಯಯನ ಮಾಡಬೇಕಾಗಿ ಬಂತು. ನಂತರ ಕುತೂಹಲದಿಂದ ಆಸಕ್ತಿಯಿಂದ ತಿಪ್ಪೇರುದ್ರಸ್ವಾಮಿಯವರ ಕೆಲವು ಕೃತಿಗಳನ್ನು ಓದಿದೆ. ಹೀಗೆ ಸ್ವಾಮಿಯವರ ವ್ಯಕ್ತಿತ್ವದ ಪರಿಚಯ ನನಗೆ ಪರೋಕ್ಷವಾಗಿ ಸ್ವಲ್ಪಮಟ್ಟಿಗೆ ಆಗಿದ್ದರೂ ಪ್ರತ್ಯಕ್ಷವಾಗಿ ಅವರ ಪರಿಚಯವಾಗಿರಲಿಲ್ಲ; ಅವರನ್ನು ಕಂಡು ಮಾತಾಡಿಸುವ ಅವಕಾಶ ನನಗೆ ಲಭಿಸಿರಲಿಲ್ಲ.

ನಾನು ಧಾರವಾಡದಲ್ಲಿ ಬಿ.ಎ. ಪದವಿಯನ್ನು ಮುಗಿಸಿಕೊಂಡು ೧೯೭೪ ರಲ್ಲಿ ಕನ್ನಡ ಎಂ.ಎ., ವ್ಯಾಸಂಗಕ್ಕಾಗಿ ಮೈಸೂರಿಗೆ ಬಂದಿದ್ದಾಗ, ತಿಪ್ಪೇರುದ್ರಸ್ವಾಮಿಗಳು ಆಗ ತಾನೆ ಬಿ. ಆರ್. ಪ್ರಾಜೆಕ್ಟ್‌ಗೆ ಕನ್ನಡ ವಿಭಾಗದ ಮುಖ್ಯಸ್ಥರಾಗಿ ವರ್ಗವಾಗಿ ಹೋಗಿದ್ದರು. ಆದ್ದರಿಂದ ಅವರನ್ನು ಪರಿಚಯ ಮಾಡಿಕೊಳ್ಳುವ, ಮಾತನಾಡಿಸುವ, ಅವರಿಂದ ಪಾಠ ಕೇಳುವ ಭಾಗ್ಯ ಆವಾಗಲೂ ನನಗೆ ಒದಗಿ ಬರಲಿಲ್ಲ. ಆದರೆ ಡಾ. ಹಾ. ಮಾ. ನಾಯಕರು ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಕಗೊಂಡು ಗುಲಬರ್ಗಾಕ್ಕೆ ಹೋದ ನಂತರ. ಸ್ವಾಮಿಯವರು ಸಹಜವಾಗಿ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಗೆ ಬಂದು, ನಿರ್ದೇಶಕರಾಗಿ ಕಾರ್ಯಭಾರವನ್ನು ಹೊತ್ತರು. ಆ ಹೊತ್ತಿಗೆ ನಾನು ಕನ್ನಡ ಎಂ.ಎ. ಮತ್ತು ಡಾಕ್ಟರೇಟ್ ಪದವಿಗಗನ್ನು ಪಡೆದು, ಯುವರಾಜಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿ ಆರು ವರ್ಷ ಅನುಭವ ಪಡೆದು, ಮೂರು ವಿಮರ್ಶಾ ಗ್ರಂಥಗಳನ್ನು ಹಲವಾರು ಲೇಖನಗಳನ್ನು ಪ್ರಕಟಿಸಿಯಾಗಿತ್ತು. ಆಗ ಅಧ್ಯಯನ ಸಂಸ್ಥೆಯಲ್ಲಿದ್ದ ಹುದ್ದೆಯೊಂದಕ್ಕೆ ನಾನು ಅರ್ಜಿ ಸಲ್ಲಿಸಬೇಕಿತ್ತು. ಅರ್ಜಿ ಸಲ್ಲಿಸುವುದಕ್ಕಿಂತ ಮುಂಚೆ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ. ತಿಪ್ಪೇರುದ್ರಸ್ವಾಮಿಯವರನ್ನು ಕಂಡು, ಅವರಿಗೆ ಆ ವಿಷಯ ತಿಳಿಸಿ, ಅವರ ಸಲಹೆ ಪಡೆಯಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿ ಅವರನ್ನು ನೋಡಬೇಕೆಂದು ಅಂಜುತ್ತ ಅಳಕುತ್ತ ಅವರ ಕೊಠಡಿಯನ್ನು ಪ್ರವೇಶಿಸಿದೆ. ಸ್ವಾಮಿಯವರು ತುಂಬ ಪ್ರೀತಿ ಮಮತೆಯಿಂದ ನನಗೆ ಕೂರಲು ತಿಳಿಸಿ, ಸಂಸ್ಥೆಯಲ್ಲಿರುವ ಆ ಹುದ್ದೆಗೆ ಅರ್ಜಿ ಸಲ್ಲಿಸುತ್ತಿರುವೆ ಎಂದು ಸಂಕೋಚದಿಂದಲೇ ನುಡಿದೆ. ಆಗ ಅವರು ನನ್ನ ಶೈಕ್ಷಣಿಕ ವಿವರ ಬಯಸಿದರು. ನನ್ನ ವ್ಯಕ್ತಿ ವಿವರದ ಪ್ರತಿಯೊಂದನ್ನು ಮತ್ತು ನನ್ನ ಎರಡು ಗ್ರಂಥಗಳ ಪ್ರತಿಗಳನ್ನು ಅವರಿಗೆ ನೀಡಿದೆ. ನನ್ನ ವ್ಯಕ್ತಿ ವಿವರದ ಹಾಳೆಯ ಮೇಲೆ ಕಣ್ಣಾಡಿಸಿದ ಅವರು ತುಂಬ ಪ್ರಫುಲ್ಲಿತವದನರಾಗಿ "ನೀವು ಆ ಹುದ್ದೆಗೆ ಖಂಡಿತ ಅರ್ಜಿ ಹಾಕಿ. ಆ ಹುದ್ದೆಗೆ ಬೇಕಾದ ಎಲ್ಲ ಅರ್ಹತೆಗಳೂ ನಿಮಗಿವೆ. ನಿಮ್ಮ ಕೆಲವು ವಿಮರ್ಶಾ ಲೇಖನಗಳನ್ನು, ಪುಸ್ತಕಗಳನ್ನು ನಾನು ಓದಿರುವೆ. ನಿಮ್ಮ ಬಗ್ಗೆ ನನಗೆ ತೃಪ್ತಿ ಇದೆ" ಎಂದು ಮುಂತಾಗಿ ಮೆಚ್ಚುಗೆಯ ಮಾತುಗಳನ್ನು ಆಡಿದರು. ಇಲ್ಲಿ ಗಮನಿಸಬೇಕಾದ

ಅಂಶವೊಂದಿದೆ. ಅದೇನೆಂದರೆ ಸ್ವಲ್ಪ ಕೆಲಸ ಮಾಡಿದ ತರುಣರನ್ನೂ, ಎಳೆಯರನ್ನೂ ಸ್ವಾಮಿಯವರು ಹೇಗೆ ಪ್ರೀತಿ-ವಿಶ್ವಾಸಗಳಿಂದ ಕಾಣುತ್ತಿದ್ದರೆಂಬುದು; ಪ್ರೋತ್ಸಾಹಿಸುತ್ತಿದ್ದರೆಂಬುದು. ಇದು ಸ್ವಾಮಿಯವರ ದೊಡ್ಡ ಗುಣವನ್ನೂ ಸುಸಂಸ್ಕೃತ ವ್ಯಕ್ತಿತ್ವವನ್ನು ಪ್ರಕಟಪಡಿಸುತ್ತದೆ. ಮುಂದೆ ನಾನು ಹಲವಾರು ಸಲ ಅವರನ್ನು ಕಂಡೆ; ಮಾತನಾಡಿಸಿದೆ; ಅವರಿಂದ ಸಲಹೆ ಸೂಚನೆಗಳನ್ನು ಪಡೆದೆ. ಅವರು ನೀಡಿದ ಅಕ್ಕರೆ, ಮಮತೆಗಳನ್ನು ಸವಿದೆ.

ಡಾ. ತಿಪ್ಪೇರುದ್ರಸ್ವಾಮಿಯವರು ಮೈಸೂರಿಗೆ ಬಂದು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಮೇಲೆ ಅವರ ಹಲವಾರು ಉಪನ್ಯಾಸಗಳನ್ನು, ಭಾಷಣಗಳನ್ನು ಕೇಳುವ ಅವಕಾಶ ನನಗೆ ಲಭಿಸಿತು. ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ತು ವ್ಯವಸ್ಥೆಗೊಳಿಸಿದ್ದ ಜಿಲ್ಲಾ ಸಾಹಿತ್ಯ ಸಮ್ಮೇಳನದ 'ಧಾರ್ಮಿಕಗೋಷ್ಠಿ'ಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸ್ವಾಮಿಯವರ ಆ ಭಾಷಣ ಅವರ ವಿದ್ವತ್ತು, ಪ್ರತಿಭೆ, ಪಾಂಡಿತ್ಯಗಳಿಗೆ ಹಿಡಿದ ಕನ್ನಡಿಯಾಗಿತ್ತು. ಕನ್ನಡ, . ಸಂಸ್ಕೃತ, ಇಂಗ್ಲಿಷ್ ಭಾಷೆ-ಸಾಹಿತ್ಯವನ್ನು ಚೆನ್ನಾಗಿ ಬಲ್ಲವರಾಗಿದ್ದ ಭಾರತೀಯ ಮತ್ತು ಪಾಶ್ಚಾತ್ಯ ತತ್ವಶಾಸ್ತ್ರವನ್ನು ಜೀರ್ಣಿಸಿಕೊಂಡಿದ್ದ, ಮೀಮಾಂಸೆ – ವಿಮರ್ಶೆಯ ತತ್ವ. ಸಿದ್ಧಾಂತಗಳನ್ನು ಅರಗಿಸಿ ಕುಡಿದಿದ್ದ, ಸಂಸ್ಕೃತಿ-ಸಮಾಜಗಳ ಬಗೆಗೆ ಆಳವಾದ ಅಧ್ಯಯನ ನಡೆಸಿದ್ದ ಸ್ವಾಮಿಯವರು ಯಾವುದೇ ಸಭೆಯಲ್ಲಿ ಎಂಥದೇ ವಿಷಯವನ್ನು ಕುರಿತು ಮಾತನಾಡಿದರೂ ವಿಷಯದ ಆಳ-ಅಗಲಗಳ ಶೋಧನೆ ಮಾಡುತ್ತ ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ಆ ವಿಷಯದ ಪ್ರಸ್ತುತತೆಯನ್ನು ಸಾದರಪಡಿಸುತ್ತಿದ್ದರು. ಈಗ ಒಂದು ವರ್ಷದ ಹಿಂದೆ ಅಧ್ಯಯನ ಸಂಸ್ಥೆಯಲ್ಲಿ ನಡೆದ ತೌಲನಿಕ ಕಾವ್ಯ ಮೀಮಾಂಸೆಯ ವಿಚಾರ ಸಂಕಿರಣದ ಸಮಾರೋಪ ಭಾಷಣವೂ ಅತ್ಯಂತ ಅಮೋಘವಾಗಿತ್ತು. ಕಾವ್ಯ ತತ್ವಗಳನ್ನು, ಸಾಹಿತ್ಯದ ವಿಚಾರವನ್ನು ಕುರಿತು ಭಾರತೀಯ ಮತ್ತು ಪಾಶ್ಚಾತ ಮೀಮಾಂಸಕರು; ವಿಮರ್ಶಕರು ಹೇಗೆ ಚಿಂತಿಸಿದ್ದಾರೆ ಎಂಬುದನ್ನು ಅವರಲ್ಲಿ ಸಹಜವಾಗಿ ಕಂಡುಬರುವ ಸಾದೃಶ್ಯ-ವೈದೃಶ್ಯಗಳನ್ನು, ಅಲ್ಲಿನ ಸ್ವಾರಸ್ಯವನ್ನು ಕುರಿತು ಸ್ವಾಮಿಯವರು ಒಂದೂವರೆ ಗಂಟೆಯಷ್ಟು ದೀರ್ಘ ಕಾಲ ಮಾತನಾಡಿದರು. ಅಷ್ಟೊತ್ತೂ ಸಭೆ ಈ ದೀರ್ಘ ಭಾಷಣವನ್ನು ತಾಳ್ಮೆಯಿಂದ, ಪ್ರೀತಿಯಿಂದ, ನಿಜವಾದ ಆಸಕ್ತಿಯಿಂದ ಕುಳಿತು ಕೇಳಿತು. ಕಾವ್ಯಮೀಮಾಂಸೆಯಂಥ ವಿಷಯದ ಬಗೆಗಿನ ಭಾಷಣವನ್ನೂ ಸಭೆ ದೀರ್ಘ ಕಾಲ ಕುಳಿತು ಶ್ರದ್ಧೆ-ಆಸಕ್ತಿಯಿಂದ ಆಲಿಸಿರಬೇಕಾದರೆ ಆ ಭಾಷಣ ಎಷ್ಟು ರಸವತ್ತಾಗಿತ್ತು ಎಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದಾಗಿದೆ. ಹೀಗೆ ತಿಪ್ಪೇರುದ್ರಸ್ವಾಮಿಯವರು ಯಾವುದೇ ವಿಷಯವನ್ನು ಕುರಿತು ಮಾತನಾಡಿದರೂ ವಿಷಯದ ಬುಡ-ಬೇರು ಹಿಡಿದು ಜಾಲಾಡಿಸುತ್ತ ತಮ್ಮ ವಾದ, ಅಭಿಪ್ರಾಯಗಳ ಸಮರ್ಥನೆಗೆ, ಪುಷ್ಟಿಗೆ ವೇದ, ಉಪನಿಷತ್ತು, ಗೀತೆ, ರಾಮಾಯಣ, ಮಹಾಭಾರತ, ರಸೆಲ್, ಪ್ಲೇಟೊ ಅರಿಸ್ಟಾಟಲ್, ರಿಚರ್ಡ್ಸ್, ಇಲಿಯಟ್, ವಚನ ಸಾಹಿತ್ಯ,

ಪಂಪ, ಕುಮಾರವ್ಯಾಸ, ಸರ್ವಜ್ಞ— ಮುಂತಾದ ಮೂಲಗಳಿಂದ ಹೇಳಿಕೆಗಳನ್ನು, ಸಾಕ್ಷಿಗಳನ್ನು ಒದಗಿಸುತ್ತಿದ್ದರು; ದೃಷ್ಟಾಂತಗಳನ್ನು ನೀಡುತ್ತಿದ್ದರು. ಈ ರೀತಿಯಾಗಿ ಸ್ವಾಮಿಯವರ ಭಾಷಣ ಕಲೆ ಅತ್ಯಂತ ವಿಶಿಷ್ಟವಾದುದು; ರೋಮಾಂಚನಕಾರಿಯಾದುದು; ಅವರಿಗೆ ಮಾತ್ರ ವಿಶೇಷವಾದುದು.

ಸಾಹಿತಿಗಳಿಗೆ, ಅಧ್ಯಾಪಕರಿಗೆ ಆಡಳಿತ ನಡೆಸಲು ಬರುವುದಿಲ್ಲವೆಂಬ ಪ್ರತೀತಿ ಇದೆ. ಆದರೆ ಇದು ಎಲ್ಲರ ವಿಷಯಕ್ಕೆ ಸರಿಗಟ್ಟುವ ಸತ್ಯವಲ್ಲ. ಪ್ರಾಮಾಣಿಕತೆ, ನಿಷ್ಪಕ್ಷಪಾತ ದೃಷ್ಟಿ, ಮಾನವೀಯತೆ, ಕಾರ್ಯನಿಷ್ಠೆ-ಇವಿಷ್ಟು ಇದ್ದರೆ ಅತ್ಯಂತ ಸಮರ್ಥವಾಗಿ, ಲೀಲಾಜಾಲವಾಗಿ ಆಡಳಿತ ನಡೆಸಬಹುದು. ಡಾ. ತಿಪ್ಪೇರುದ್ರಸ್ವಾಮಿಯವರು ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ನಿರ್ದೇಶಕರಾಗಿ, ಬಿ. ಆರ್. ಪ್ರಾಜೆಕ್ಟ್‌ನ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ನೀಡಿದ ಆಡಳಿತ ಅತ್ಯಂತ ಸಮರ್ಥವಾಗಿತ್ತು, ದಕ್ಷತೆಯಿಂದ ಕೂಡಿತ್ತು. ಇವರು ತಾವು ಆಡಳಿತ ನಡೆಸಿದ ಸಂಸ್ಥೆಗಳ ಸರ್ವಾಂಗೀಣ ಉನ್ನತಿಗೆ ಹಗಲಿರುಳೂ ಪ್ರಾಮಾಣಿಕವಾಗಿ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇವರಿಗೆ ತಾವೊಬ್ಬ ದೊಡ್ಡ ಸಂಸ್ಥೆಯ ಮುಖ್ಯಸ್ಥನೆಂಬ, ಪ್ರಕಾಂಡ ಪಂಡಿತನೆಂಬ ಅಹಂಭಾವ ಸ್ವಲ್ಪವೂ ಇರಲಿಲ್ಲ. ಅಧಿಕಾರದ ದರ್ಪದಿಂದ ಸಹೋದ್ಯೋಗಿಗಳಿಂದ ಕೆಲಸವನ್ನು ತೆಗೆಯಬೇಕೆಂಬ ಅಹಮಿಕೆ ಎಳ್ಳಷ್ಟೂ ಇವರಿಗೆ ಇರಲಿಲ್ಲ. ಎಲ್ಲ ಸಹೋದ್ಯೋಗಿಗಳ ಮನಸ್ಸನ್ನು ಪ್ರೀತಿ-ವಿಶ್ವಾಸಗಳಿಂದ ಗೆದ್ದುಕೊಂಡಿದ್ದ ಸ್ವಾಮಿಯವರ ಆ ಪ್ರೀತಿ-ವಿಶ್ವಾಸಗಳಿಂದಲೇ ಸಂಸ್ಥೆಗಳ ಕೆಲಸ, ಕಾರ್ಯಗಳನ್ನು ಸಮರ್ಪಕವಾದ ರೀತಿಯಲ್ಲಿ ಆಗುಮಾಡಿಕೊಳ್ಳುತ್ತಿದ್ದರು. ಇವರು ಬಿ. ಆರ್. ಪ್ರಾಜೆಕ್ಟ್‌ನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದಾಗ, ಗಾಂಧೀಭವನದ ನಿರ್ದೇಶಕರಾಗಿದ್ದ ಕಾಲದಲ್ಲಿ ಕನ್ನಡ ಸಾಹಿತ್ಯವನ್ನೂ, ಗಾಂಧಿ ವಿಚಾರ ಧಾರೆಯನ್ನೂ ಕುರಿತಂತೆ ನಡೆಸಿದ ಉನ್ನತ ಮಟ್ಟದ ವಿಚಾರ ಸಂಕಿರಣಗಳು ಸ್ಮರಣೀಯವಾದವುಗಳು. ಸಂಘಟನಾ ಚತುರರಾದ ಸ್ವಾಮಿಯವರು ಎಂಥ ಕಷ್ಟವೆನ್ನಬಹುದಾದ ಕೆಲಸ ಕಾರ್ಯಗಳನ್ನೂ ಸುಲಭವಾಗಿ ಆಗುಮಾಡುತ್ತಿದ್ದರು. ಅವರಲ್ಲಿ ಪ್ರಾಮಾಣಿಕತೆ, ಪರಿಶುದ್ಧ ಮನಸ್ಸು, ಕಾರ್ಯನಿಷ್ಠೆ, ಮನೋಬಲಗಳು ಇದ್ದ ಕಾರಣದಿಂದಾಗಿ ಬೆಟ್ಟದಂಥ ಗುರುತರವಾದ ಜವಾಬ್ದಾರಿಗಳನ್ನು ಸುಲಭದಲ್ಲಿ ಸಮರ್ಥವಾಗಿ ನಿರ್ವಹಿಸಿಬಿಡುತ್ತಿದ್ದರು.

ಕನ್ನಡ ನಾಡು-ನುಡಿಗೆ ಕುತ್ತು ಬಂದಾಗ ನಾಡು-ನುಡಿಯ ಉಳಿವಿಗಾಗಿ ಬೀದಿಗಿಳಿದು ಹೋರಾಟ ಮಾಡಿದ ಧೀಮಂತ ವ್ಯಕ್ತಿ, ಸ್ವಾಮಿಯವರು. ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಶಿವಮೊಗ್ಗದಲ್ಲಿದ್ದ ಸ್ವಾಮಿಯವರು ಅಲ್ಲಿಂದಲೆ ಕನ್ನಡದ ಕಹಳೆಯನ್ನುಯನ್ನು ಊದಿದರು; ಚಳವಳಿಗೆ ನೈತಿಕ ಸ್ಥೈರ್ಯವನ್ನು ತಂದುಕೊಟ್ಟರು. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದಾಗ, ಸಂಸ್ಥೆಯ ಕೆಲವು ಮುಖ್ಯ ಇಲಾಖೆಗಳಿಗೆ ಅಪಾಯ ಒದಗಿಬರುವ ಸಂದರ್ಭದಲ್ಲಿ ಅವರು ತಳೆದ ಗಟ್ಟಿ ನಿಲವು, ತೋರಿದ ಎದೆಗಾರಿಕೆಯಿಂದಾಗಿ ಸಂಸ್ಥೆಯ ಆ ಅಪಾಯ ಕುತ್ತುಗಳು ನಿವಾರಣೆಯಾಗಿ ನಿಟ್ಟುಸಿರು ಬಿಡುವಂತಾಯಿತು.

'ಕರ್ಣಾಟಕ ಸಂಸ್ಕೃತಿ ಸಮೀಕ್ಷೆ' ಸ್ವಾಮಿಯವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ತಂದುಕೊಟ್ಟ ಮೇರು ಕೃತಿ. ನಲವತ್ತೆರಡರ ಕಿರುಹರೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದ ಮೊದಲ ಕನ್ನಡಿಗ ಇವರು. ಗ್ರಂಥದ ಮೊದಲಿಗೆ ಸಂಸ್ಕೃತಿ ಮತ್ತು ನಾಗರಿಕತೆಗಳ ಅರ್ಥವ್ಯಾಪ್ತಿಯನ್ನು ನೀಡಿ, ಸಂಸ್ಕೃತಿ ಎಂಬುದು ವಿಶಾಲ ಅರ್ಥವನ್ನು ಹೊಂದಿರುವ, ಮನುಷ್ಯ ಕಷ್ಟಪಟ್ಟು ಸಂಪಾದಿಸಬೇಕಾದ, ಎಲ್ಲ ವಿದ್ಯೆಗಳ ಮೂಲಕ ಅರಳುವ ಸಂಸ್ಕಾರ ಪರಾಗ ಎಂದು ತಿಳಿಯಪಡಿಸುತ್ತಾರೆ. ಕರ್ನಾಟಕದ ಜನತೆ ಮತ್ತು ಸಾಹಿತ್ಯದಲ್ಲಿ, ಜನಪದರಲ್ಲಿ ಮತ್ತು ಜನಪದ ಸಾಹಿತ್ಯದಲ್ಲಿ ಶಾಸನಗಳಲ್ಲಿ; ವಾಸ್ತುಶಿಲ್ಪ, ಶಿಲ್ಪ, ಸಂಗೀತ, ನೃತ್ಯ, ಚಿತ್ರಕಲೆಗಳಲ್ಲಿ ಕಾಣಸಿಗುವ ಕರ್ಣಾಟಕ ಸಂಸ್ಕೃತಿಯ ವೈವಿಧ್ಯಮಯ ಅಂಶಗಳನ್ನೂ, ಅದರ ವಿರಾಡ್ ಸ್ವರೂಪವನ್ನೂ, ಸಮನ್ವಯ ದೃಷ್ಟಿಯನ್ನು ವಿಶದವಾಗಿ ವಿವರಿಸಲಾಗಿದೆ. ಇಲ್ಲಿ ಸ್ವಾಮಿಯವರು ಕನ್ನಡ ಸಾಹಿತ್ಯ, ಜನಪದ ಸಾಹಿತ್ಯ, ಶಾಸನ ಸಾಹಿತ್ಯ, ಕರ್ನಾಟಕದ ಸಮಗ್ರ ಇತಿಹಾಸ, ಶಿಲ್ಪ, ವಾಸ್ತುಶಿಲ್ಪ, ಸಂಗೀತ, ನೃತ್ಯ, ಚಿತ್ರಕಲೆ—ಮುಂತಾದ ಎಲ್ಲ ವಿಷಯ ಸಂಗತಿಗಳನ್ನು ಸಮಗ್ರವಾಗಿ, ಆಳವಾಗಿ ಅಧ್ಯಯನ ಮಾಡಿರುವುದು ಕಂಡು ಬರುತ್ತದೆ. ಹೀಗೆ ಈ ಗ್ರಂಥ ಸ್ವಾಮಿಯವರ ಆಳವಾದ ಅಧ್ಯಯನದ ಫಲದಿಂದ ಮೂಡಿಬಂದಿದ್ದು, ಅವರ ವಿದ್ವತ್ತು, ಪ್ರತಿಭೆ, ಪಾಂಡಿತ್ಯಗಳಿಗೆ ಸಾಕ್ಷಿಯಾಗಿ ನಿಂತುಕೊಂಡಿದೆ.

'ತೌಲನಿಕ ಕಾವ್ಯಮೀಮಾಂಸೆ' ಸ್ವಾಮಿಯವರ ಇನ್ನೊಂದು ಆಚಾರ್ಯ ಗ್ರಂಥ, ಅವರ ಮಾತಿನಲ್ಲಿ ಹೇಳುವುದಾದರೆ, ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಗಳ ಎತ್ತರ ಬಿತ್ತರ, ಸ್ವರೂಪ-ಸಾಧನೆ, ಇತಿಮಿತಿಗಳನ್ನು ಅವುಗಳ ಐತಿಹಾಸಿಕ ಹಿನ್ನೆಲೆಯಲ್ಲಿಟ್ಟು ಜೊತೆ ಜೊತೆಯಲ್ಲಿಯೇ ಸಾದೃಶ್ಯ-ವೈದೃಶ್ಯಗಳನ್ನು ಗುರುತಿಸುವ ಪ್ರಯತ್ನ ಈ ಕೃತಿಯ ಮೂಲ ಉದ್ದೇಶ. 'ಶರಣರ ಅನುಭಾವ ಸಾಹಿತ್ಯ' ಸ್ವಾಮಿಯವರಿಗೆ ಡಾಕ್ಟರೇಟ್ ಪದವಿಯನ್ನು ತಂದುಕೊಟ್ಟ ಒಂದು ಉತ್ತಮ ಸಂಶೋಧನಾ ಗ್ರಂಥ. ಇಲ್ಲಿ ಶಿವತತ್ವ ವಿಕಾಸ, ಶರಣರ ತತ್ವದರ್ಶನ ಮತ್ತು ಸಾಧನೆ, ಶರಣರ ವಿಚಾರಧಾರೆ, ಶರಣರ ಅನುಭಾವ ಮಾರ್ಗ, ಶರಣರ ಸಾಹಿತ್ಯ-ಎಂಬ ಮುಖ್ಯ ಅಧ್ಯಾಯಗಳಲ್ಲಿ ಶರಣರ ಸಾಧನೆ–ಸಿದ್ಧಿಗಳನ್ನು ಅವರ ವಿಶ್ವಮಾನವ ತತ್ವಗಳನ್ನೂ, ವೈಚಾರಿಕ ನಿಲವನ್ನು, ಅನುಭಾವದ ಪರಿಯನ್ನು ಶರಣರ ವಚನಗಳ ಆಧಾರದ ಮೇಲೆ ತಲಸ್ಪರ್ಶಿಯಾಗಿ ವಿವೇಚನೆಗೆ ಒಳಪಡಿಸಲಾಗಿದೆ. ಶೂನ್ಯ ಸಂಪಾದನೆಗೆ ಸಂಬಂಧಿಸಿದ ಕೆಲವು ವಿವಾದಾಸ್ಪದ ವಿಷಯಗಳನ್ನು ಎತ್ತಿಕೊಂಡು ಸವಿವರವಾಗಿ ಚರ್ಚಿಸಿದ ಗ್ರಂಥ, 'ಶೂನ್ಯ ತತ್ವ ವಿಕಾಸ ಮತ್ತು ಶೂನ್ಯ ಸಂಪಾದನೆ' ಎಂಬುದು 'ವಚನಗಳಲ್ಲಿ ವೀರಶೈವ ಧರ್ಮ', 'ಋಷಿಕವಿ ರಾಘವಾಂಕ', 'ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ; ತೌಲನಿಕ ಅಧ್ಯಯನ', 'ಕನ್ನಡ ವಿಮರ್ಶೆ ಕವಲು ದಾರಿಯಲ್ಲಿ' 'ಕನ್ನಡದಲ್ಲಿ ಕೈವಲ್ಯ ಸಾಹಿತ್ಯ' 'ಕಲ್ಯಾಣ

ಕ್ರಾಂತಿ; 'ಹಿಂದು-ಮುಂದು ಮುಂತಾದ ಕೃತಿಗಳು ಸ್ವಾಮಿಯವರ ವಿದ್ವತ್ತು, ಪಾಂಡಿತ್ಯ, ಸಂಶೋಧನಾ ಶಕ್ತಿಯನ್ನು ಪ್ರಕಟಪಡಿಸುವ ಉತ್ತಮ ಗ್ರಂಥಗಳು.

ಡಾ. ತಿಪ್ಪೇರುದ್ರಸ್ವಾಮಿಯವರು ಶ್ರೇಷ್ಠ ವಿದ್ವಾಂಸರಾಗಿರುವಂತೆ ಉತ್ತಮ ಸೃಜನಶೀಲ ಲೇಖಕರೂ ಹೌದು. ಈ ಮಾತಿಗೆ ಸಾಕ್ಷಿಯಾಗಿ ಅವರ ಕಾವ್ಯ, ಕಥೆ, ನಾಟಕ ಮತ್ತು ಕಾದಂಬರಿಗಳ ಕೃತಿರಾಶಿಯೇ ನಮ್ಮ ಮುಂದೆ ಇದೆ. ಐತಿಹಾಸಿಕ ಕಾದಂಬರಿಗಳನ್ನು ಬರೆಯುವುದರಲ್ಲಿ ಸ್ವಾಮಿಯವರು ಸಿದ್ಧಹಸ್ತರು. ಹನ್ನೆರಡನೆಯ ಶತಮಾನದ ಪ್ರಮುಖ ಶರಣ-ಶರಣೆಯರಾದ ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಅಲ್ಲಮ ಪ್ರಭು-ಇವರ ಜೀವನ ವೃತ್ತಾಂತವನ್ನು ಕುರಿತಂತೆ ಕ್ರಮವಾಗಿ 'ಕರ್ತಾರನ ಕಮ್ಮಟ', 'ಕದಳಿಯ ಕರ್ಪೂರ', 'ನೆರಳಾಚೆಯ ಬೆಳಕು', ಪರಿಪೂರ್ಣದೆಡೆಗೆ'-ಎಂಬ ಕಾದಂಬರಿಗಳನ್ನು ರಚಿಸಿ ಕಾದಂಬರಿ ಪ್ರಪಂಚದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ. ಈ ಐತಿಹಾಸಿಕ ಕಾದಂಬರಿಗಳು ಹನ್ನೆರಡನೆಯ ಶತಮಾನದಲ್ಲಿ ಬದುಕಿ ಬಾಳಿದ ಶಿವಶರಣ-ಶರಣೆಯರ ಜೀವನ ವೃತ್ತಾಂತವನ್ನು ಮನೋಜ್ಞವಾಗಿ ಕಟ್ಟಿಕೊಡುತ್ತವೆ; ಅವರ ಜನಪರವಾದ ತತ್ವಗಳನ್ನು, ಸಮಾನತಾ ಸಿದ್ಧಾಂತಗಳನ್ನೂ, ಸಾಂಸ್ಕೃತಿಕ ಕಾಳಜಿಯನ್ನೂ, ಸಮಸಮಾಜದ ನಿರ್ಮಾಣಕ್ಕಾಗಿ ಅವರು ನಡೆಸಿದ ಆಂದೋಲನವನ್ನು ಸಮಗ್ರವಾಗಿ, ಸಮರ್ಥವಾಗಿ ಚಿತ್ರಿಸುತ್ತವೆ. ಈ ಕಾದಂಬರಿಗಳನ್ನು ಓದಿದರೆ ಹನ್ನೆರಡನೆಯ ಶತಮಾನದ ಶಿವಶರಣ-ಶರಣೆಯರ ಬದುಕಿನ ವಿವಿಧ ಮಜಲುಗಳ ಪರಿಚಯವಾಗುತ್ತದೆ; ಅವರು ನಡೆಸಿದ ಸಮಾಜೋ-ಸಾಂಸ್ಕೃತಿಕ ಆಂದೋಲನದ ತಿಳಿವೂ ನಮಗಾಗುತ್ತದೆ. ಈ ಕಾದಂಬರಿಗಳ ಪಾತ್ರ, ವಸ್ತು, ಸನ್ನಿವೇಶಗಳ ಒಳಹೊಕ್ಕು ಅಲ್ಲಿನ ಸೂಕ್ಷ್ಮ ಸಂಗತಿಗಳನ್ನೂ, ಭಾವದ ಬೆಳಕನ್ನು ನಿಚ್ಚಳವಾಗಿ ತೆರೆದು ತೋರಿಸಿರುವುದು ಶ್ಲಾಘನೀಯ ವಿಚಾರವಾಗಿದೆ. ಈ ಕಾದಂಬರಿಗಳನ್ನು ರಚಿಸುವಲ್ಲಿ ಸ್ವಾಮಿಯವರು ವಚನ ಸಾಹಿತ್ಯ, ತದನಂತರ ಹರಿಹರ-ರಾಘವಾಂಕರ ಸಾಹಿತ್ಯ, ಚಾಮರಸನ ಪ್ರಭುಲಿಂಗಲೀಲೆ, ಶಾಸನ ಸಾಹಿತ್ಯ, ಶೂನ್ಯ-ಸಂಪಾದನೆ-ಮುಂತಾದ ಸಾಹಿತ್ಯವನ್ನೂ ಮೂಲ ಆಕರ ಸಾಮಗ್ರಿಯನ್ನಾಗಿ ಬಳಸಿಕೊಂಡಿದ್ದಾರೆ. ಕಾದಂಬರಿಕಾರರ ಕಲ್ಪಕಥೆಯೂ ಇಲ್ಲಿ ಕೆಲಸ ಮಾಡಿರುವುದನ್ನೂ ಮರೆಯುವಂತಿಲ್ಲ.

'ಸತ್ಯಾಶ್ರಯ ಸಾಮ್ರಾಜ್ಯ' ಮತ್ತು 'ಶಿಸ್ತುಗಾರ ಶಿವಪ್ಪ ನಾಯಕ' ಕಾದಂಬರಿಗಳು ಸತ್ಯಾಶ್ರಯ ಪುಲಿಕೇಶಿಯ ಮತ್ತು ಕೆಳದಿ ಶಿವಪ್ಪನಾಯಕರ ಬಹುಮುಖ ಪ್ರತಿಭೆಯ ವ್ಯಕ್ತಿತ್ವವನ್ನು ಸಾಹಸ-ಪರಾಕ್ರಮಗಳನ್ನೂ, ಅವರ ಸಾಧನೆ-ಸಿದ್ಧಿಗಳನ್ನು ವಿವರವಾಗಿ ಕಟ್ಟಿಕೊಡುವ ಉತ್ತಮ ಐತಿಹಾಸಿಕ ಕಾದಂಬರಿಗಳು. 'ಸತ್ಯಾಶ್ರಯ ಸಾಮ್ರಾಜ್ಯ' ಕಾದಂಬರಿ ಬರೆಯುವಲ್ಲಿ ಕಾದಂಬರಿಕಾರರು ಹ್ಯೂಎನ್‌ತ್ಸಾಂಗನ ಬರವಣಿಗೆಗಳನ್ನು, ರವಿಕೀರ್ತಿಯ ಐಹೊಳೆಯ ಶಾಸನವನ್ನೂ, ಸಮಕಾಲೀನ ರಾಜವಂಶದ ಇತಿಹಾಸವನ್ನೂ ಬಳಸಿಕೊಂಡಿರುವುದನ್ನು ಕಾಣಬಹುದು. ಆದರೂ ಕಾಲ್ಪನಿಕತೆಯೂ ಇಲ್ಲಿ ಹೆಚ್ಚು ಅವಕಾಶ ಪಡೆದಿದೆ ಎಂಬುದನ್ನು ಅರಿಯಬೇಕಾಗಿದೆ. 'ಶಿಸ್ತುಗಾರ ಶಿವಪ್ಪನಾಯಕ' ಕಾದಂಬರಿ ಬರೆಯುವಲ್ಲಿ ಇತಿಹಾಸದ ವಸ್ತುವಿಗೆ ತೀರಾ ಹತ್ತಿರವಾದ ಲಿಂಗಣ್ಣ ಕವಿ 'ಕೆಳದಿ ನೃಪ


ವಿಜಯ' ಕೃತಿಯನ್ನು ಹೆಚ್ಚು ಆಶ್ರಯಿಸಲಾಗಿದೆ; ಅವಲಂಬಿಸಲಾಗಿದೆ; ಜೊತೆಗೆ ಲಭ್ಯವಿರುವ ಶಾಸನಗಳನ್ನೂ ಬಳಸಿಕೊಳ್ಳಲಾಗಿದೆ. ಒಟ್ಟಿನಲ್ಲಿ ಈ ಎರಡೂ ಕಾದಂಬರಿಗಳು ಇತಿಹಾಸದ ವಸ್ತುವನ್ನೊಳಗೊಂಡ ಉತ್ತಮ ಐತಿಹಾಸಿಕ ಕಾದಂಬರಿಗಳಾಗಿವೆ. 'ವಚನ ವಿರೂಪಾಕ್ಷ' ಹರಿಹರ-ರಾಘವಾಂಕರನ್ನು ವಸ್ತುವಾಗಿಟ್ಟುಕೊಂಡು ಅವರ ಸಾಧನೆ-ಸಿದ್ಧಿಗಳನ್ನು, ಏರಿದ ಎತ್ತರದ ನಿಲುವನ್ನು ಹಿಡಿದಿಡುವ ಕಾದಂಬರಿ.

'ಜಡದಲ್ಲಿ ಜಂಗಮ' ಒಂದು ವಿಶಿಷ್ಟವಾದ ಮಾದರಿಯ ಐತಿಹಾಸಿಕ ಕಾದಂಬರಿ. ಹದಿನೇಳನೆಯ ಶತಮಾನದಲ್ಲಿ ಬಾಳಿ ಬದುಕಿದ ಕ್ರಾಂತಿಯೋಗಿ ಷಣ್ಮುಖ ಶಿವಯೋಗಿಗಳ ಜೀವನ ವೃತ್ತಾಂತವನ್ನು, ಅವರ ತಾತ್ವಿಕ ನಿಲವನ್ನೂ, ವೈಚಾರಿಕತೆಯನ್ನು ವಿಶದಪಡಿಸುವ ಉತ್ತಮ ಕಾದಂಬರಿ. ಸಮಾನತೆ, ಸರ್ವೋದಯ, ಮಾನವ ಪ್ರೀತಿ, ಸಕಲ ಜೀವರಾಶಿಗಳಿಗೆ ಲೇಸನ್ನೇ ಬಯಸುವ ಉದಾರತೆ-ಮುಂತಾದ ತತ್ವಗಳನ್ನು, ಆದರ್ಶವನ್ನು, ಮೌಲ್ಯಗಳನ್ನು ಬೋಧಿಸಿದ ಹನ್ನೆರಡನೆಯ ಶತಮಾನದ ವೀರಶೈವ ಧರ್ಮ, ಕಾಲಾನಂತರದಲ್ಲಿ ಕೇವಲ ಆಚರಣೆಯ ಭಾಗಕ್ಕೆ ಹೆಚ್ಚು ಒತ್ತು ಕೊಟ್ಟು ಆ ಧರ್ಮದ ಹೃದಯದಂತಿದ್ದ ಸಮಾನತಾ ಮೌಲ್ಯವನ್ನು, ಸರ್ವೋದಯದ ಪರಿಕಲ್ಪನೆಯನ್ನು ಹಿಂದಕ್ಕೆ ತಳ್ಳಿತು. ಈ ಸ್ಥಿತಿ ಹದಿನೇಳನೆಯ ಶತಮಾನದಲ್ಲಿ ಮಠಾಧಿಪತಿಗಳಾಗಿ ಬದುಕಿ ಬಾಳಿದ್ದ ಷಣ್ಮುಖ ಶಿವಯೋಗಿಗಳ ಕಾಲದಲ್ಲಿಯೂ ಇತ್ತು; ಮುಂದುವರೆದಿತ್ತು. ಸಮಾನತಾ ಮೌಲ್ಯದ ಪ್ರತಿಪಾದಕರಾದ ಸಕಲ ಜೀವರಾಶಿಗಳಿಗೆ ಲೇಸನ್ನೇ ಬಯಸುವ ಉದಾರ ಮಾನವತಾವಾದಿ ಷಣ್ಮುಖ ಶಿವಯೋಗಿಗಳು ಧರ್ಮದ ಆಚರಣೆಯ ಭಾಗದ ಜಡತ್ವವನ್ನು ನೀಗಿಸಿ, ಮತ್ತೆ ಅಲ್ಲಿ ಸಮಾನತೆ, ಸರ್ವೋದಯಗಳ ಜಂಗಮತ್ವದ ಚಲನ ಶೀಲತೆಯನ್ನು ತರಲು ಸತತವಾಗಿ ಶ್ರಮಿಸಿದರು. ಇಂಥ ಕ್ರಾಂತಿಯೋಗಿ ಷಣ್ಮುಖ ಶಿವಯೋಗಿಗಳ ಜೀವನ ವೃತ್ತಾಂತವನ್ನೂ, ಅವರ ಸಮಾಜನಿಷ್ಠ ಕೆಲಸ ಕಾರ್ಯಗಳನ್ನೂ, ಅವರು ಸಾರಿದ ಸಮಾನತಾ ಮೌಲ್ಯವನ್ನು ಇಲ್ಲಿ ಬೆಳಕಿಗೆ ಹಿಡಿಯುವ ಸ್ತುತ್ಯ ಕಾರ್ಯವನ್ನು ಸ್ವಾಮಿಯವರು ಅಚ್ಚುಕಟ್ಟಾಗಿ ಮಾಡಿದ್ದಾರೆ. ಶಿಪ್ಪೇರುದ್ರಸ್ವಾಮಿಯವರ ಈ ಕಾದಂಬರಿ ಅವರ ಜನಪರ ನಿಲವಿಗೆ, ಸಮಾನತಾ ಸಿದ್ಧಾಂತಕ್ಕೆ ಸಂಕೇತವಾಗಿರುವಂತಿದೆ.

ಡಾ. ಶಿಪ್ಪೇರುದ್ರಸ್ವಾಮಿಯವರು ಸಾವನ್ನು ಸ್ವೀಕರಿಸಿದ ರೀತಿಯೂ ಅವರ ಸ್ಥಿತಪ್ರಜ್ಞತ್ವವನ್ನು ತಿಳಿಸುತ್ತದೆ. ಶರಣನಿಗೆ ಮರಣದ ಅಂಜಿಕೆ ಇರುವುದಿಲ್ಲ. ಮರಣದ ಭಯ ಇರುವವನು ಶರಣನಾಗಲು ಸಾಧ್ಯವಿಲ್ಲ. ಸ್ವಾಮಿಯವರು ತಮ್ಮ ಮರಣದ ಕಿಂಚಿತ್ತು ಭಯವಿಲ್ಲದೆ, ಮರಣ ಕಾಲ ಸನ್ನಿಹಿತವಾಯಿತೆಂಬ ಕಳವಳ-ತಳಮಳವಿಲ್ಲದೆ ಸಾವನ್ನು ಅತ್ಯಂತ ಸಹಜವಾದ ರೀತಿಯಲ್ಲಿ ಪ್ರೀತಿ, ಸಂತೋಷಗಳಿಂದ ಸ್ವೀಕರಿಸಿದ್ದು ಅವರು ಏರಿದ ಶರಣತ್ವದ ನಿಲವಿಗೆ ಸಂಕೇತವಾಗಿದೆ. 'ಮರಣವೇ ಮಹಾನವಮಿ' ಎಂಬ ಮಾತಿಗೆ ಅರ್ಥ ಬರುವುದು ಶಿಪ್ಪೇರುದ್ರಸ್ವಾಮಿಯವರಂಥ ಅಪರೂಪದ ಅನುಭಾವಿ ಶರಣರ ಬದುಕಿನ ಸಂದರ್ಭದಲ್ಲಿ ಮಾತ್ರ.

•• . •

ಜ್ಞಾನಪೀಠ ಪ್ರಶಸ್ತಿ ವಿಜೇತರು



ಡಾ|| ಯು. ಆರ್. ಅನಂತಮೂರ್ತಿ

ಡಾ|| ಯು. ಆರ್. ಅನಂತಮೂರ್ತಿ

ಪ್ರೊ|| ಪ್ರಧಾನ್ ಗುರುದತ್ತ

ಭಾರತೀಯ ಜ್ಞಾನಪೀಠ ಪ್ರಶಸ್ತಿ ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿನ ಅತ್ಯಂತ ಮಹತ್ವದ ಸಾಹಿತ್ಯಿಕ ಪ್ರಶಸ್ತಿ ಎನಿಸಿಕೊಂಡಿದೆ. ಈ ವರ್ಷದ ಮಹೋನ್ನತ ಪ್ರಶಸ್ತಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿರುವ ಹಾಗೂ ಕನ್ನಡದ ಪ್ರತಿಷ್ಠಿತ ಲೇಖಕರಲ್ಲಿ ಒಬ್ಬರಾದ ಡಾ. ಯು. ಆರ್. ಅನಂತಮೂರ್ತಿ ಅವರಿಗೆ ಲಭಿಸಿರುವುದು ಕನ್ನಡಿಗರಿಗೆಲ್ಲ ತುಂಬ ಸಂತೋಷದ ಸಂಗತಿಯೇ ಆಗಿದೆ. ತಮ್ಮ ಸೃಜನಶೀಲ ಸಾಹಿತ್ಯದ ಮೂಲಕ ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ಅವರು ನೀಡಿರುವ ಮಹತ್ವದ ಕೊಡುಗೆಗಾಗಿ ಅವರಿಗೆ ಈ ಪ್ರಶಸ್ತಿ ಲಭಿಸಿದೆ. ಆರನೆಯ ಬಾರಿಗೆ ಈ ಪ್ರಶಸ್ತಿ ಕನ್ನಡಕ್ಕೆ ಲಭಿಸುತ್ತಿರುವುದು ಕನ್ನಡ ಸಾಹಿತ್ಯದ ಸಿದ್ಧಿ-ಸಾಧನೆಗಳ ಪ್ರತೀಕವೂ ಆಗಿದ್ದು, ನಮ್ಮೆಲ್ಲರ ಹೆಚ್ಚಿನ ಸಂತೋಷಕ್ಕೆ ಕಾರಣವಾಗಿದೆ.

ಕನ್ನಡದ ಬರೆವಣಿಗೆಯ ಕ್ಷೇತ್ರದಲ್ಲಿ ಅನಂತಮೂರ್ತಿಯವರು ಎದ್ದು ಕಾಣುವುದು ತುಂಬ ಮಹತ್ವಾಕಾಂಕ್ಷೆಯ ಲೇಖಕರಾಗಿ. ಅಷ್ಟು ಮಾತ್ರವೇ ಆಗಿ ಉಳಿಯದೆ, ಮಹತ್ವವಾದುದನ್ನು ಅವರು ಸಾಧಿಸಿಯೂ ತೋರಿದ್ದಾರೆ ಎಂಬುದು ಗಮನಾರ್ಹವಾದ ಸಂಗತಿ. ನವ್ಯ ಸಾಹಿತ್ಯದ ಧಾರೆ ಕನ್ನಡ ಸಾಹಿತ್ಯದ ಕ್ಷೇತ್ರದಲ್ಲಿ ಉಕ್ಕಿಹರಿದಾಗ ಅದರ ಮುಂಚೂಣಿಯ ಲೇಖಕರಲ್ಲಿ ಅನಂತಮೂರ್ತಿಯವರೂ ಒಬ್ಬರಾಗಿದ್ದರು. ಅಷ್ಟೇ ಅಲ್ಲ, ಆ ಸಾಹಿತ್ಯದ ದಿಕ್ಕು-ದೆಸೆಗಳನ್ನು ನಿರ್ಧರಿಸುವಲ್ಲಿ ತಮ್ಮ ಮೌಲಿಕ ಕೊಡುಗೆಗಳನ್ನು ನೀಡಿದ ಹಾಗೂ ಆ ಸಾಹಿತ್ಯದ ನೆಲೆ-ಬೆಲೆಗಳನ್ನು ಸಂಸ್ಥಾಪಿಸುವುದಕ್ಕೆ ಅಗತ್ಯವಾದ ಒರೆಗಲ್ಲುಗಳನ್ನು–ಸೈದ್ಧಾಂತಿಕ ಸಾಹಿತ್ಯವನ್ನು–ಒದಗಿಸಿದ ಶ್ರೇಯಸ್ಸು ಕೂಡ ಅನಂತಮೂರ್ತಿಯವರಿಗೆ ಸಲ್ಲುತ್ತದೆ: 'ಸಂಸ್ಕಾರ', 'ಅವಸ್ಥೆ', 'ಭಾರತೀಪುರ' ಮತ್ತು ಇತ್ತೀಚಿನ 'ಭವ' ಕಾದಂಬರಿಗಳ ಮೂಲಕ, 'ಎಂದೆಂದೂ ಮುಗಿಯದ ಕಥೆ', 'ಪ್ರಶ್ನೆ', 'ಮೌನಿ', 'ಆಕಾಶ ಮತ್ತು ಬೆಕ್ಕು' ಕಥಾಸಂಕಲನಗಳ ಮೂಲಕ, 'ಪ್ರಜ್ಞೆ ಮತ್ತು ಪರಿಸರ', ಸನ್ನಿವೇಶ', 'ಸಮಕ್ಷಮ', 'ಪೂರ್ವಾಪರ', ಎಂಬ ವಿಮರ್ಶಾತ್ಮಕ ಪ್ರಬಂಧ ಸಂಕಲನಗಳ ಮೂಲಕ, '೧೫ ಪದ್ಯಗಳು', 'ಅಜ್ಜನ ಹೆಗಲ ಸುಕ್ಕುಗಳು' ಮತ್ತು 'ಮಿಥುನ' ಕವನ ಸಂಕಲನಗಳ ಮೂಲಕ ಅನಂತ

ಮೂರ್ತಿ ಅವರು ತಮ್ಮ ಸೃಜನಶೀಲ ಹಾಗೂ ವಿಮರ್ಶ ಪ್ರತಿಭೆಯನ್ನು ಅನ್ಯಾದೃಶ ರೀತಿಯಲ್ಲಿ ಮೆರೆದಿದ್ದಾರೆ. ಜನಜೀವನ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರತೀಕವಾಗಿರುವಂತೆಯೇ, ಮುಕ್ತ ಸಾಹಿತ್ಯಿಕ ಧ್ಯೇಯ-ಧೋರಣೆಗಳ ಪ್ರತಿಪಾದನೆ, ನಿರೂಪಣೆ ಮತ್ತು ಸಮರ್ಥನೆಗಳಿಗಾಗಿ ಮೀಸಲಾಗಿರುವ ಸಾಹಿತ್ಯಿಕ ಪತ್ರಿಕೆಯಾದ 'ರುಜುವಾತು' ಮೂಲಕವೂ ಅವರು ವಿಮರ್ಶೆಯ ಕ್ಷೇತ್ರಕ್ಕೆ ಗಮನಾರ್ಹ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಇವುಗಳ ಜೊತೆಗೆ, ಇತ್ತೀಚೆಗಷ್ಟೇ 'ತಾವೋ ಪದ್ಯಗಳು' ಎಂಬ ಅನುವಾದಿತ, ಪದ್ಯಗಳ ಸಂಕಲನವನ್ನೂ ಹೊರ ತಂದಿದ್ದಾರೆ.

ಅನಂತಮೂರ್ತಿಯವರ ಸಾಹಿತ್ಯ ಸೇವೆ ಸುಮಾರು ನಾಲ್ಕು ದಶಕಗಳಷ್ಟು ಅವಧಿಯನ್ನು ಆಕ್ರಮಿಸಿಕೊಳ್ಳುತ್ತಿದೆಯಾದರೂ ಅವರ ಒಟ್ಟಾರೆ ಬರೆಹದ ಪ್ರಮಾಣ ಕಮ್ಮಿ ಎಂದೇ ಅನ್ನಿಸುತ್ತಿದೆ. ೧೯೫೫ ರಲ್ಲಿ 'ಎಂದೆಂದೂ ಮುಗಿಯದ ಕಥೆ' ಪ್ರಕಟವಾಯಿತಾದರೂ ಅವರು ತಮ್ಮ ಮೊದಲ ಕಾದಂಬರಿ 'ಸಂಸ್ಕಾರ'ವನ್ನು ನೀಡಿದ್ದು ೧೯೬೫ ರಲ್ಲಿ. ಅವರ ಸಾಹಿತ್ಯಿಕ ಸಂಯಮ ಮೆಚ್ಚುವಂಥದ್ದು. ಏಕೆಂದರೆ, ಬರೆಯಲೇಬೇಕೆಂಬ ಚಟಕ್ಕೆ ಬಿದ್ದು ಹತ್ತಾರು ಕೃತಿಗಳನ್ನು ಒಂದರ ಮೇಲೆ ಒಂದು ಎಂಬಂತೆ ಅವರು ತಮ್ಮ ಕೃತಿಗಳನ್ನು ಹೊರತಂದಿಲ್ಲ ; ಒಂದಕ್ಕಿಂತ ಒಂದನ್ನು ಗಾತ್ರದಲ್ಲಿ ಮೀರಿ ನಿಲ್ಲುವಂಥ ಕೃತಿಗಳನ್ನು ಹೊರತರುವ ಗೋಜಿಗೆ ಅವರೆಂದೂ ಹೋಗಿಲ್ಲ. ಅವರ ಯಾವ ಕೃತಿಯೂ ಗಾತ್ರದ ದೃಷ್ಟಿಯಿಂದ ಕಣ್ಣು ಸೆಳೆಯುವಂಥದಲ್ಲ ; ಆದರೆ, ಗುಣದ ದೃಷ್ಟಿಯಿಂದ ಅವು ಮನಸ್ಸನ್ನು ಸೆಳೆಯುವಂಥವು. ಅವರೇ ಹೇಳಿಕೊಂಡಿರುವಂತೆ, "ನನಗೆ ಹೇಳಲು ಕಷ್ಟವಾಗಿರುವಂಥದನ್ನು ಮಾತುಗಳಲ್ಲಿ ಅರ್ಥಪೂರ್ಣವಾಗಿ ಸೆರೆಹಿಡಿಯಬೇಕು" ಎಂಬ ಛಲ ಹಾಗೂ "ಅಂಥ ಪ್ರಯತ್ನದಲ್ಲಿ ಸೋತರೂ ಪರವಾಗಿಲ್ಲ" ಎಂಬ ಮನೋಧರ್ಮ ಅವರ ಕೃತಿಗಳ ಹಿನ್ನೆಲೆಯಲ್ಲಿ ಸಕ್ರಿಯವಾಗಿರುವುದನ್ನು ನೋಡಬಹುದು. ಬರೆವಣಿಗೆಯ ಪ್ರಲೋಭನೆಯ ಹಿಡಿತದಿಂದ ಆದಷ್ಟೂ ತಪ್ಪಿಸಿಕೊಂಡಿರುವುದು ಹಾಗೂ ಅದರ ಫಲವಾದ ಸಂಯಮಪೂರ್ಣವಾದ ಬರೆವಣಿಗೆ ಅವರನ್ನು ಕನ್ನಡದ ಮಹತ್ವದ ಲೇಖಕರಲ್ಲಿ ಒಬ್ಬರನ್ನಾಗಿಸಿವೆ. ಅನುಭವದ ತಾಜಾತನ, ತೀವ್ರತೆ, ಗಟ್ಟಿತನ, ಮೌಲಿಕತೆ ಅಥವಾ ಸ್ವೋಪಜ್ಞತೆ-ಇವುಗಳು ಅವರ ಸೃಜನಶೀಲ ಸಾಹಿತ್ಯದ ವೈಶಿಷ್ಟ್ಯಗಳಾಗಿರುವಂತೆಯೇ, ವ್ಯಾಪಕವಾದ ಅಧ್ಯಯನ, ಜೀವನಾನುಭವ, ಆಳವಾದ ಚಿಂತನ-ಮಂಥನಗಳು ಅವರ ವಿಮರ್ಶಾತ್ಮಕ ಬರೆಹಗಳ ವೈಶಿಷ್ಟ್ಯವಾಗಿವೆ.

ಕಥೆ-ಕಾದಂಬರಿ ಮತ್ತು ವಿಮರ್ಶೆ ಅನಂತಮೂರ್ತಿಯವರ ಸೃಜನಶೀಲ ಮತ್ತು ವಿಮರ್ಶಾತ್ಮಕ ಪ್ರತಿಭೆಯ ವಿಲಾಸಕ್ಷೇತ್ರಗಳಾಗಿವೆ. ಅವರ ಮುಖ್ಯ ಕೊಡುಗೆ ಇರುವುದು ಈ ಕ್ಷೇತ್ರಗಳಲ್ಲಿ ಎಂಬುದು ನಿಜವಾದರೂ, ನವ್ಯ ಕಾವ್ಯದ ವೈಶಿಷ್ಟ್ಯ-ವೈಲಕ್ಷಣ್ಯಗಳ ಪ್ರತೀಕವಾಗಿರುವಂಥ ಹಲವು ಅರ್ಥಪೂರ್ಣ ಕವನಗಳನ್ನೂ ಅವರು ರಚಿಸಿದ್ ದಾರೆ. ಅನುಭವದ ಹೊಸತನದ ಪ್ರತೀಕವಾಗಿ, ಅವರು ಕವಿಯ ಪಾತ್ರವನ್ನು ನಿರೂಪಿಸಿರುವ ಬಗೆಯನ್ನು ನೋಡಬಹುದು :

"…ಮಾತು ಮಾತು ಮಾತುಗಳ
ಶಬ್ದಗುಮ್ಮಟವಾದ ಈ ಪ್ರಪಂಚ
ಕವಿಗೆ ತಿಪ್ಪೆಗುಂಡಿ ಎನ್ನುವುದಾದರೆ
ತಲೆ ಕೆದರಿದ ತಿರುಕಿಯಂತೆ ಕವಿ
ಈ ತಿಪ್ಪೆಯಲ್ಲಿ ಮರೆತು ಬಿಸಾಕಿದ
ಹರಳು, ಗುಲಗಂಜಿ, ಹೇರ್ ಪಿನ್ನು, ಬ್ಲೇಡು
ಸರದ ಹುಕ್ಕು, ಅದೃಷ್ಟವಿದ್ದರೆ ನಿರೀಕ್ಷಿಸದೇ ಇದ್ದ
ಮಗುವಿನ ಬೆಳ್ಳಿ ಒಳಲೆ ಇತ್ಯಾದಿ ವಿಶೇಷ ಹುಡುಕಿ ತೆಗೆದು
ಇಟ್ಟುಕೊಳ್ಳುತ್ತಾನೆ, ಅಥವಾ ರೀಸೈಕಲ್ ಮಾಡುತ್ತಾನೆ ಅಥವಾ
ಇದೇ ತಿಪ್ಪೆಯಿಂದ ಬಯೋಗ್ಯಾಸ್ ಮಾಡಿ
ದೀಪವನ್ನೂ ಉರಿಸಬಲ್ಲ ರೈತ ಅವನೆಂದರೂ
ಸರಿಯೆ." ('ಮಿಥುನ', ೩೯)

ಅಂತೆಯೇ, ಸ್ವಪ್ರತಿಷ್ಠೆಯ ವಿಮರ್ಶಕನನ್ನು ಚಿತ್ರಿಸುವಲ್ಲಿಯೂ ಅವರ ಮೌಲಿಕ ದೃಷ್ಟಿ ಹೇಗೆ ಮೈದಳೆಯುತ್ತದೆಂಬುದನ್ನು ನೋಡಬಹುದು:

"ಕವಿತೆ ಹೀಗಿರಬೇಕು, ಹಾಗಿರಬೇಕು
ನಿನ್ನ ಮನಸ್ಸಿನಲ್ಲಿ ಊಹಿಸಿದಂತಿರಬೇಕು
ಎನ್ನುವ ಸ್ವಪ್ರತಿಷ್ಠೆಯ ನೀನು
ತನ್ನ ಕನಸಿನ ಹುಡುಗಿಗಾಗಿ
ಹಿರಿಯರ ಜೊತೆ ಕನ್ಯಾನ್ವೇಷಣೆ ಮಾಡಿ
ಜಾತಕವನ್ನು ನೋಡಿ, ಖುದ್ದಾಗಿ ಹೋಟೆಲಲ್ಲಿ
ಅನ್ಯೋನ್ಯ ಮಾತೂ ಆಡಿ
ಕೊನೆಗೊಂದು ಗೊಂಬೆಯನ್ನು ಮದುವೆ
ಯಾಗುವ, ಆಗಿದ್ದು ಗೊತ್ತೂ ಆಗದ
ಕಮಂಗಿಯಂತೆ." ('ಮಿಥುನ', ೪೦)

ಗಾಂಧೀಜಿಯವರ ಸಾಧನೆಯನ್ನು ಕಂಡರಿಸುವ ಅವರ ಈ ಬಗೆಯೂ ವಿಶಿಷ್ಟವಾದದ್ದು; ಅದರ ಪರಿಣಾಮಕಾರಕ ಶಕ್ತಿ ನಮ್ಮನ್ನು ದಂಗುಬಡಿಸುತ್ತದೆ.

"ಗಾಂಧೀನೇ ಸರಿ !
ಶಿಟ್ಟಿಗೂ ಸೋಲ್‌ಗೂ, ನಾವು ಕಟ್ಟುವ
ಮೇಲು ಕೀಳಿನ ವ್ಯವಸ್ಥೆಗೂ
ಅವಿನಾಸಂಬಂಧ ಇದೆ ಅಂತ ಕಂಡೇ
ಅವನು ಮಹಾತ್ಮ ಆದದ್ದು.
ತಂತ್ರದ ಸೊಕ್ಕನ್ನೂ, ಮಂತ್ರದ ಗತ್ತನ್ನೂ
ಮೀರಲಿಕ್ಕೆ ಅಂತ
ನೂಲೋದನ್ನೂ ಹೇಲೆತ್ತೋದನ್ನೂ
ಅವನು ತನ್ನ ನಿತ್ಯದ ಕರ್ಮಮಾಡಿಕೊಂಡದ್ದು.
ಅದರಲ್ಲಿ ಸುಖ ಕಂಡು ತಂಪಾಗ್ತ ತಂಪಾಗ್ತ
ಕೆಸರಿನಲ್ಲಿ ಕಮಲ ಆದ್ದು,
ತೇಜಸ್ಸಾದ್ದು." ('ಮಿಥುನ', ೪೪)

ಕತೆಗಾರರಾಗಿಯೂ ಅನಂತಮೂರ್ತಿಯವರ ಸಾಧನೆ ವಿಶಿಷ್ಟವಾದುದು. ಕಥೆಯ ಸೀಮಿತ ಚೌಕಟ್ಟಿನಲ್ಲಿ ವಿಶಿಷ್ಟ ಜೀವನಾನುಭವಗಳನ್ನು ಸೆರೆಹಿಡಿದು ನಿಲ್ಲಿಸುವ ಅವರ ಕಲೆಗಾರಿಕೆ ಹಾಗೂ ತಾಂತ್ರಿಕ ಕೌಶಲ ಅವರ ಕಥಾ ಸಂಕಲನಗಳಲ್ಲಿ ವಿಶೇಷವಾಗಿ ನಮ್ಮ ಗಮನವನ್ನು ಸೆಳೆಯುತ್ತವೆ. ಅವರ 'ಮೌನಿ', 'ಕ್ಲಿಪ್ ಜಾಯಿಂಟ್', 'ಪ್ರಶ್ನೆ', 'ಘಟಶ್ರಾದ್ಧ', 'ಬರ' ಮೊದಲಾದ ಕತೆಗಳು ಮತ್ತು ನೀಳ್ಗತೆಗಳು ಬದುಕಿನ ಅನೇಕ ಮಗ್ಗುಲುಗಳನ್ನು ಅರ್ಥಪೂರ್ಣವಾಗಿ ಚಿತ್ರಿಸುತ್ತವೆ. ಅನಂತಮೂರ್ತಿಯವರ ವ್ಯಾಪಕ ಅಧ್ಯಯನದ ಪ್ರಭಾವ, ಪರಿಣಾಮಗಳನ್ನು ಇವುಗಳಲ್ಲಿ ಗುರುತಿಸಬಹುದಾದರೂ, ಅವುಗಳನ್ನು ಆತ್ಮೀಕರಿಸಿಕೊಂಡಿರುವ, ಅಳವಡಿಸಿಕೊಂಡಿರುವ ಬಗೆ ನಮ್ಮಲ್ಲಿ ಅಚ್ಚರಿಯನ್ನು ಮೂಡಿಸದೆ ಇರದು.

ಕಾದಂಬರಿಯ ಕ್ಷೇತ್ರದಲ್ಲಿನ ಅವರ ಸಾಧನೆಯಂತೂ ವಿಶಿಷ್ಟವಾದುದು. ಅವುಗಳಲ್ಲಿ ಕೆಲವು—'ಸಂಸ್ಕಾರ' ಮತ್ತು ಅವಸ್ಥೆ—ತಾವು ಸೃಷ್ಟಿಸಿದ ವಿವಾದಗಳನ್ನು ಮೀರಿ ನಿಂತು ತಮ್ಮ ಮಹತ್ವವನ್ನು ಸಾರಿವೆ. 'ಸಂಸ್ಕಾರ' ಕಾದಂಬರಿ ಹೊರಬಂದಾಗ, ಕನ್ನಡ ಕಾದಂಬರಿಗಳ ಲೋಕದಲ್ಲಿ ಹೊಸದೊಂದು ಕ್ರಾಂತಿಯನ್ನು, ಕೋಲಾಹಲವನ್ನು ಮೂಡಿಸಿತು. ಒಂದು ಸಮುದಾಯದ ಸಂಪ್ರದಾಯ ಮತ್ತು ಆಚರಣೆಗಳನ್ನು ಲೇವಡಿ ಮಾಡುವ ಪ್ರಯತ್ನ ಅದರಲ್ಲಿದೆಯೆಂದು ಕೆಲವರು ಹುಯಿಲೆಬ್ಬಿಸಿದರು. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಅದನ್ನು ಹೀಗಳೆಯುವ ಪ್ರಯತ್ನ ನಡೆಯಿತು. ಆದರೆ ತನ್ನ ಅಂತಃಸತ್ವದಿಂದ ಅದು ಎಲ್ಲವನ್ನೂ ಮೀರಿನಿಂತಿತು, ಹೊಸ ಇತಿಹಾಸವನ್ನು ಸೃಷ್ಟಿಸಿತು. ಸಂಪ್ರದಾಯದ ಶೃಂಖಲೆಯಲ್ಲಿ ಸಿಲುಕಿ ಮಾನವೀಯತೆ ಹೇಗೆ ನರಳಬಹುದು ಎಂಬುದನ್ನು ಮಾರ್ಮಿಕವಾಗಿ ಚಿತ್ರಿಸಿದ ಈ ಕಾದಂಬರಿಯ ಪ್ರಾಣೇಶಾಚಾರ್ಯ, ನಾರಣಪ್ಪ, ಚಂದ್ರಿ—ಇವೆಲ್ಲ ಮರೆಯಲಾಗದ ಪಾತ್ರಗಳು. ಸಂಸ್ಕಾರ ಕಾಣದೆ ಕೊಳೆಯುತ್ತ ಬಿದ್ದಿರುವ ನಾರಣಪ್ಪನ ಶವ ಅರ್ಥಹೀನ ಸಂಪ್ರದಾಯಗಳಿಗೆ ಸಿಲುಕಿ, ನಾರುತ್ತ ಇರುವ ನಮ್ಮ ಸಮಾಜದ ಅರ್ಥಪೂರ್ಣ ಸಂಕೇತವೇ ಆಗುತ್ತದೆ. 'ಸಂಸ್ಕಾರ' ಕಾದಂಬರಿಯ ಮೂಲಕ ಸಹೃದಯರ ಸಂವೇದನೆಗೆ ಹೊಸ ಸಂಸ್ಕಾರ ನೀಡಿದ ಶ್ರೇಯಸ್ಸು ಅನಂತಮೂರ್ತಿಯವರದಾಯಿತು. ಈ ಕೃತಿಗೆ ದೊರೆತಿರುವ ಜಾಗತಿಕ ಸ್ವಾಗತ ಅದರ ದೇಶ ಭಾಷಾ ಕಾಲಾತೀತವಾದ ಅಂತಸ್ಸತ್ವಕ್ಕೆ, ಅನಂತಮೂರ್ತಿಯವರ ಮೌಲಿಕತೆಗೆ ಸಾಕ್ಷಿಯಾಗಿದೆ. ಇಂಗ್ಲಿಷ್ ಮತ್ತು ಇತರ ವಿದೇಶಿ ಭಾಷೆಗಳಿಗೆ ಹಾಗೂ ಅನೇಕ ಭಾರತೀಯ ಭಾಷೆಗಳಿಗೆ ಅವರ ಈ ವಿಶಿಷ್ಟ ಕಾದಂಬರಿ ಅನುವಾದಗೊಂಡಿರುವುದು, ಆರ್. ಕೆ. ನಾರಾಯಣ್, ಹಾಸನದ ರಾಜಾರಾವ್ ಮೊದಲಾದವರ ಕೃತಿಗಳಂತೆ ಇದೂ ಭಾರತೀಯ ಜನಜೀವನ ಮತ್ತು ಸಂಸ್ಕೃತಿಗಳನ್ನು ಕುರಿತಪಠ್ಯಗಳಾಗಿರುವುದು ವಿಶೇಷ ಉಲ್ಲೇಖಕ್ಕೆ ಅರ್ಹವಾಗಿರುವ ಸಂಗತಿಗಳು. 'ಭಾರತೀಪುರ' ಒಂದು ಗ್ರಾಮವನ್ನೆ ಕೇಂದ್ರವಾಗಿರಿಸಿಕೊಂಡು ಅದರ ಹಲವು ಮೂಲಭೂತ ಸಮಸ್ಯೆಗಳನ್ನು ಕಲಾತ್ಮಕವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಒಳಗೊಂಡಿದ್ದರೆ ಸ್ವಲ್ಪಮಟ್ಟಿನ ವಿವಾದಕ್ಕೆ ಎಡೆಮಾಡಿಕೊಟ್ಟ 'ಅವಸ್ಥೆ' ಅನಂತಮೂರ್ತಿಯವರ ರಾಜಕೀಯ ಸಂವೇದನೆ-ಸಿದ್ಧಾಂತ-ಒಲವು ನಿಲುವುಗಳಿಗೆ, ಅದರ ಭ್ರಷ್ಟ ಮುಖಗಳಿಗೆ ಹಿಡಿದ ಕನ್ನಡಿಯೇ ಆಗಿದೆ.

'ಪ್ರಜ್ಞೆ ಮತ್ತು ಪರಿಸರ', 'ಸಮಕ್ಷಮ', 'ಸನ್ನಿವೇಶ', 'ಪೂರ್ವಾಪರ'—ಇವು ಅನಂತಮೂರ್ತಿಯವರ ವಿಮರ್ಶಕ ಪ್ರತಿಭೆಯ ಉಜ್ವಲ ಉದಾಹರಣೆಗಳೇ ಆಗಿವೆ. ಅವರ ಈ ಎಲ್ಲ ವಿಮರ್ಶಾತ್ಮಕ ಲೇಖನಗಳು ನಮ್ಮ ವಿಮರ್ಶೆಯ ಅತಿರೇಕಗಳನ್ನೇ ನಿವಾರಿಸಿ, ಆರೋಗ್ಯಪೂರ್ಣ ದೃಷ್ಟಿಯನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವನ್ನೇ ಸಾರಿಹೇಳುತ್ತವೆ. ಪೂರ್ವಾಗ್ರಹಮುಕ್ತವಾದ ಮನಸ್ಸು ಯಾವುದೇ ಕೃತಿಯ, ಬೆಳವಣಿಗೆಯ, ಸಂದರ್ಭದ ಮಹತ್ವ-ಔಚಿತ್ಯಗಳನ್ನು ಹೇಗೆ ಗುರುತಿಸಬಲ್ಲದು ಎಂಬುದಕ್ಕೂ ಇವು ನಿದರ್ಶನವಾಗಿವೆ. 'ಸಾಹಿತ್ಯ

ದಲ್ಲಿ ವೈಚಾರಿಕತೆಯನ್ನು ಕುರಿತು ಹೇಳುತ್ತ, "ತತ್ವಗಳನ್ನೇ ವಿರೋಧಿಸುವವರು ತತ್ವಗಳು ಜೀವನದ ಮೇಲೆ ಹೇಗೆ ಪ್ರಭಾವ ಮಾಡುತ್ತವೆ ಎಂಬುದನ್ನು ಮರೆತು ಸಾಹಿತ್ಯವನ್ನು ಚಿಲ್ಲರೆಯಾಗಿಸುತ್ತಾರೆ....ಕವಿಯ ಉದ್ದೇಶವನ್ನು ಗಣನೆಗೆ ತೆಗೆದುಕೊಳ್ಳದ ತತ್ವಶಾಸ್ತ್ರಜ್ಞರು ಸಾಹಿತ್ಯಕ್ಕೂ ತತ್ವಗಳಿಗೂ ಇರುವ ಸಂಬಂಧವನ್ನು ಸರಳಗೊಳಿಸುತ್ತಾರೆ" ಎನ್ನುತ್ತ ಎಲಿಯೆಟ್-ಕಾರ್ಲೈಲರ ನಡುವೆ ಕಾರ್ಲೈಲರ ಮಾತೇ ಹೇಗೆ ಹೆಚ್ಚು ಗ್ರಾಹ್ಯವಾಗುತ್ತದೆ ಎನ್ನುವುದನ್ನು ವಿವರಿಸುತ್ತಾರೆ: ನಮ್ಮ ಸಾಹಿತ್ಯ ಮುಖ್ಯವಾಗಿ ನೈತಿಕ ಕ್ರಾಂತಿಯಾಗಿ ಕನ್ನಡಕ್ಕೆ ಬಂದಿರುವ ಬಗೆಯನ್ನು ಅವರು ಅರ್ಥಪೂರ್ಣ ರೀತಿಯಲ್ಲಿ ವಿಶ್ಲೇಷಿಸುತ್ತಾರೆ. ಅಡಿಗರ 'ಪ್ರಾರ್ಥನೆ' ಎಂಬ ಕವನ ಪದಗಳ ನಿಸ್ಸಂಕೋಚ ಬಳಕೆಯಿಂದ ಮಡಿವಂತರನ್ನು ಆಘಾತಗೊಳಿಸಿದ್ದನ್ನು ಒಪ್ಪಿಯೂ, "ಅದು ಅವರ ಮಹತ್ಕೃತಿಗಳಲ್ಲಿ ಒಂದಲ್ಲ" ಎನ್ನುವ ವಸ್ತುನಿಷ್ಠತೆಯನ್ನು ಅವರು ಮೆರೆಯುತ್ತಾರೆ. ಅನಂತಮೂರ್ತಿಯವರ ನಿರೂಪಣೆಯ ರೀತಿ, ವಿಶ್ಲೇಷಣೆಯ ವಿಧಾನ ಅವರ ಆಳವಾದ ಪಾಂಡಿತ್ಯ ಮತ್ತು ಆದರ್ಶ ಪ್ರಾಧ್ಯಾಪಕತ್ವಗಳಿಗೆ ಸಾಕ್ಷಿ ನುಡಿಯುತ್ತವೆ.

ಅನಂತಮೂರ್ತಿಯವರು ಅನೇಕ ಪ್ರಥಮಗಳನ್ನು ಮೆರೆಸಿರುವಂಥವರು. ಹೊರ ರಾಜ್ಯವಾದ ಕೇರಳದ ಮಹಾತ್ಮಾ ಗಾಂಧಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡ ಕರ್ನಾಟಕದ ಮೊದಲ ಪ್ರಾಧ್ಯಾಪಕರು ಅವರು; ನ್ಯಾಷನಲ್ ಬುಕ್ ಟ್ರಸ್ಟ್‌ನ ಅಧ್ಯಕ್ಷತ್ವ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತ್ವ—ಈ ಎರಡೂ ಹುದ್ದೆಗಳನ್ನು ಅಲಂಕರಿಸಿದ ಗೌರವವನ್ನು ಕನ್ನಡಿಗರಿಗೆ ತಂದುಕೊಟ್ಟವರು, ಆಂಗ್ಲ ಸಾಹಿತ್ಯದ ಬೋಧಕರಾಗಿದ್ದುಕೊಂಡೂ ಕನ್ನಡ ಸಾಹಿತ್ಯದ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಅವಿಸ್ಮರಣೀಯ ಸೇವೆಯನ್ನು ಸಲ್ಲಿಸಿರುವ ಧೀಮಂತ ಪ್ರಾಧ್ಯಾಪಕರಾದ ಬಿ. ಎಂ. ಶ್ರೀಕಂಠಯ್ಯ, ವಿ. ಕೃ. ಗೋಕಾಕ್, ಗೋಪಾಲಕೃಷ್ಣ ಅಡಿಗ, ಎ. ಎನ್. ಮೂರ್ತಿರಾವ್, ವಿ. ಎಂ. ಇನಾಂದಾರ್ ಮೊದಲಾದವರ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿರುವ ಹಾಗೂ ತಮ್ಮದೇ ಆದ ರೀತಿಯಲ್ಲಿ ಬೆಳಗುತ್ತಿರುವ ನವೋಜ್ವಲ ತಾರೆಯೂ ಅವರಾಗಿದ್ದಾರೆ.

ಭಾರತೀಯ ಸಾಹಿತ್ಯದ ಕ್ಷೇತ್ರದಲ್ಲಿ ಕನ್ನಡದ ಸಾಧನೆ ಮಹತ್ವದ್ದಾಗಿದ್ದರೂ, ಪ್ರಚಾರದ ಕೊರತೆಯಿಂದಾಗಿ, ಸಮರ್ಥ ಅನುವಾದಗಳ ಅಭಾವದಿಂದಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನೆಲೆಗಳಲ್ಲಿ ಅದು ಹಿಂದುಳಿದಿದೆಯೇ ಹೊರತು, ತನ್ನ ಸತ್ವ-ಸಾಮರ್ಥ್ಯಗಳ ಕೊರತೆಯಿಂದಾಗಿ ಅಲ್ಲ. ಮೊದಲ ಬಾರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಳ್ಳುವ ಮೂಲಕ ಶ್ರೀ ಕುವೆಂಪು ಅವರು ಇದನ್ನು ಜಗಜ್ಜಾಹೀರಾಗಿಸಿದರು. ಈ ಪರಂಪರೆಯಲ್ಲಿ ಬಂದ ದ. ರಾ. ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ವಿ.ಕೃ. ಗೋಕಾಕ ಅವರುಗಳು ಕನ್ನಡದ ಹಿರಿಮೆಯನ್ನು ತಮ್ಮದೇ ಆದ ರೀತಿಯಲ್ಲಿ ಎತ್ತಿಹಿಡಿದರು. ಅನಂತಮೂರ್ತಿಯವರ

ಮೂಲಕ ಆರನೆಯ ಬಾರಿಗೆ ಈ ಪ್ರಶಸ್ತಿಯನ್ನು ಗಳಿಸಿ, ಕನ್ನಡ ಮತ್ತೊಮ್ಮೆ ಈ ವಿಕ್ರಮವನ್ನು ಮೆರೆದಿದೆ. ಜೊತೆಗೆ, ಹಿರಿಯ ತಲೆಮಾರಿನ ಮಹತ್ವದ ಲೇಖಕರ ತರುವಾಯ ಆ ಪ್ರಶಸ್ತಿಯನ್ನು ಅನಂತಮೂರ್ತಿಯವರು ಪಡೆದುಕೊಂಡಿರುವುದು ಆ ಗೌರವಪೂರ್ಣ ಪರಂಪರೆಯ ಮುಂದುವರಿಕೆಯಾಗಿರುವುದು ಮಾತ್ರವಲ್ಲದೆ, ಹೊಸ ತಲೆಮಾರಿನ ಲೇಖಕರ ಸಾಧನೆಗಳತ್ತ ನಮ್ಮ ಗಮನವನ್ನು ಸೆಳೆಯುವ ನೂತನ ಬೆಳವಣಿಗೆಯೂ ಆಗಿದೆ.

ಕನ್ನಡದ ಪ್ರತಿಭೆ ಸಾಧನೆಗಳು ನಾಡುನುಡಿಗಳ ಗಡಿಗಳನ್ನು ಮೀರಿ, ದಿಗಂತವಿಶ್ರಾಂತವಾಗಲು ಕಾರಣರಾಗಿರುವಂಥ ಅಪರೂಪದ ಲೇಖಕರಾದ ಡಾ. ಉಡುಪಿ ರಾಜಗೋಪಾಲಚಾರ್ಯ ಅನಂತಮೂರ್ತಿ ಅವರನ್ನು ಮತ್ತೊಮ್ಮೆ ಕನ್ನಡಿಗರ ಪರವಾಗಿ ಅಭಿನಂದಿಸೋಣ.*

* ದಿನಾಂಕ ೮-೧೨-೯೪ರಂದು ಆಕಾಶವಾಣಿಯಲ್ಲಿ ಪ್ರಸಾರಗೊಂಡ ಭಾಷಣ. ಸೌಜನ್ಯ: ಆಕಾಶವಾಣಿ, ಮೈಸೂರು ಕೇಂದ್ರ.



ಅರಳಿದ ಗುಲಾಬಿಯ ಸುವಾಸನೆ ನಮಗೆ ಬೇಕಾಗಿದ್ದರೆ ನಾವದರ ಮುಳ್ಳಿನ ಚುಚ್ಚುವಿಕೆಯ ನೋವನ್ನು ಸಹಿಸಬೇಕಾಗುತ್ತದೆ. ಮುಂಜಾವಿನ ಮಾಧುರ್ಯ ಬೇಕಾಗಿದ್ದರೆ ರಾತ್ರಿಯ ಗಾಢಾಂಧಕಾರ ಕಳೆಯಬೇಕಾಗುತ್ತದೆ.

—ನೇತಾಜಿ

ಚಿಕ್ಕ ಪುಟ್ಟ ಅಪರಾಧಗಳೆಂದು ಅಲಕ್ಷ್ಯಮಾಡಬೇಡಿ. ಅವೇ ದೊಡ್ಡ ಅಪರಾಧಗಳಿಗೆ ನಾಂದಿ.

—ರೆಕ್ಕೈವರ್

ಕಲಾಪ್ರೇಮಿ ದಂಪತಿಗಳ ಭವ್ಯ ಸ್ಮಾರಕ

ಉಮಾ ಸರಸ್ವತಿ

ಜಮ್‌ಷಡ್‌ಪುರದಲ್ಲಿ ಸ್ಥಾಪಿಸಲಾಗಿರುವ ಸರ್ ಜಮ್‌ಷಡಜೀ ತಾತಾ ಅವರ ಪ್ರತಿಮೆಯ ತಳದಲ್ಲಿ ಬರೆದಿರುವ ಸಾಲು : If you seek a monument look arcund (**ಸ್ಮಾರಕ? ನೋಡಿ ಸುತ್ತ !**) **ವ್ಯಕ್ತಿಯ ಕೃತಿಯೇ ಆತನ ನಿಜಸ್ಮಾರಕ.**

ಹತ್ತೊಂಬತ್ತನೆ ಶತಮಾನದ ಮಧ್ಯಭಾಗದಲ್ಲಿ ಫ್ರಾನ್ಸಿನ ರಾಜಧಾನಿ ಪಾರಿಯಾಮಾನಲ್ಲಿ ನಡೆದ ಘಟನೆ ಜಗತ್ತಿನಲ್ಲೇ ಒಂದು ಕಥೆಯಾಗುತ್ತಿತ್ತೇನೊ. ಆ ದಿನಗಳಲ್ಲಿ ೩೬ ವರ್ಷದ ಅವಿವಾಹಿತ ಬ್ರಿಟಿಷ್ ಯುವಕ ಜಾನ್‌ಬೋಜ್ ಪಾರಿಯಲ್ಲಿ ವಾಸವಾಗಿದ್ದರು. ಶ್ರೀಮಂತ ಅರ್ಲ್ ದರ್ಜೆಯ ಮಹಾಶಯನೊಬ್ಬನ ಮಗನಾದ ಜಾನ್‌ಬೋಜ್ ರಂಗಮಂದಿರದ ಬಗೆಗೆ ತೀವ್ರ ಆಸಕ್ತಿಯುಳ್ಳವರು. ಹೀಗಾಗಿ ಮೋಂಮಾರ್ಥ್ ಎಂಬಲ್ಲಿ ಥಿಯೇಟರ್ ಒಂದನ್ನು ಅವರು ಖರೀದಿಸಿದ್ದರು.

ಗಡಿಯಾರಗಳ ಉಸ್ತುವಾರಿಯ ಅತಿ ಸಾಮಾನ್ಯ ಉದ್ಯೋಗಿಯೊಬ್ಬನ ಮಗಳಾದ ೨೨ ವರ್ಷ ವಯಸ್ಸಿನ ತೆಳ್ಳಗಿನ ಮಾಸಲು ಬಣ್ಣವುಳ್ಳ ಜೋಸೆಫಿನ್ ಕೌಫಿನ್-ಶವಾಲ್ಯೆ ಜಾನ್‌ಬೋಜ್‌ರ ಥಿಯೇಟರ್‌ನಲ್ಲಿ ನಟಿಯಾಗಿ ಕೆಲಸಮಾಡಲು ಇಚ್ಛಿಸುತ್ತಿದ್ದಳು.

ಜೋಸೆಫಿನ್ ಮತ್ತು ಜಾನ್‌ಬೋಜ್‌ರ ನಡುವೆ ಬಿಡಿಸಲಾರದ ಬಂಧವೊಂದಿತ್ತು. ಅದೆಂದರೆ ಅವರಿಬ್ಬರೂ ಕಲೆಯ ಅನನ್ಯ ಉಪಾಸಕರಾಗಿದ್ದುದು. ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿಯುಳ್ಳ ಜೋಸೆಫಿನ್ ತನ್ನ ಚಿತ್ರಗಳಲ್ಲಿ ಪ್ರಾಕೃತಿಕ ದೃಶ್ಯಗಳನ್ನು ಸೆರೆಹಿಡಿಯುವುದರಲ್ಲಿ ಪರಿಣಿತಳಾಗಿದ್ದಳು. ಪಾರಿಯ ಕಲಾಕೃತಿ ಪ್ರದರ್ಶನಗಳಲ್ಲಿ ಅವರ ಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಲಂಡನ್‌ನ ರಾಯಲ್ ಅಕಾಡೆಮಿಯ ಪ್ರದರ್ಶನದಲ್ಲಿ ಕೂಡ ಒಮ್ಮೆ ಅವರ ಚಿತ್ರಗಳನ್ನು ಪ್ರದರ್ಶಿಸಲಾಯಿತು. ಜಾನ್ ಬೋಜರು ತಮ್ಮ ೧೫ನೆಯ ವಯಸ್ಸಿನಿಂದಲೇ ಚಿತ್ರಗಳನ್ನು ಸಂಗ್ರಹಿಸುವ ಹವ್ಯಾಸ ಬೆಳೆಸಿಕೊಂಡಿದ್ದರು. ಅವರು ವರ್ಷವೊಂದಕ್ಕೆ ಕೊಳ್ಳುತ್ತಿದ್ದ ೨೩ ಕಲಾಕೃತಿಗಳಲ್ಲಿ ಅನೇಕವು ಹಿಂದಿನಕಾಲದ ಪ್ರಸಿದ್ಧ ಚಿತ್ರಕಾರರ ಕೃತಿಗಳು.

೧೯೯೪ರ ಆಗಸ್ಟ್ ತಿಂಗಳಿನ 'ಸರ್ವೋತ್ತಮ್' ಹಿಂದಿ ಮಾಸಪತ್ರಿಕೆಯಲ್ಲಿ ಪ್ರಕಟವಾದ ಜಾರ್ಜ್ ಪಾಲಕ್ ಅವರ 'ಭವ್ಯ ಸ್ಮಾರಕ್ ಕಲಾ ಪ್ರೇಮಿ ದಂಪತಿ ಕಾ' ಎಂಬ ಹಿಂದೀ ಲೇಖನದ ಅನುವಾದ.

ಐದು ವರ್ಷಗಳ ಕಾಲ ಪ್ರೇಮಿಗಳಾಗಿದ್ದ ಈ ಜೋಡಿ ಅನಂತರ ವಿವಾಹ ಬಂಧನದಲ್ಲಿ ಸಿಲುಕಿ ಜೋಸೆಫಿನ್ 'ಬಿಲ್ಲೋ' ಎಂದೂ ಜಾನ್‌ಬೋಜ್ 'ಪಾಪಾ' ಎಂದೂ ಕರೆಸಿಕೊಳ್ಳಲಾರಂಭಿಸಿದರು. ಆದರೇನು! ಜಾನ್ ಬೋಜ್ ತಮ್ಮ ನಿಜಜೀವನದಲ್ಲಿ ಎಂದೂ ಈ 'ಪಾಪಾ' ಪಟ್ಟವನ್ನು ಪಡೆಯಲೇ ಇಲ್ಲ. ಮಕ್ಕಳಿಲ್ಲವೆಂಬ ಚಿಂತೆ ಆ ದಂಪತಿಗಳನ್ನು ಜೀವನವಿಡೀ ಕಾಡುತ್ತಿತ್ತು.

ಒಮ್ಮೆ ಜೋಸೆಫಿನ್ ಸಂಗ್ರಹಾಲಯವೊಂದನ್ನು (ಮ್ಯೂಸಿಯಂ) ಸ್ಥಾಪಿಸುವ ಸಲಹೆ ಇತ್ತರು. ಮಕ್ಕಳಿಲ್ಲದ ಅವರಿಗೆ ಈ ಸಂಗ್ರಹಾಲಯ ತಮ್ಮ ಹೆಸರನ್ನು ಉಳಿಸುವ ಒಂದು ದಾರಿಯಂತೆ ಕಂಡುದುದರಿಂದ ಜಾನ್‌ಬೋಜರೂ ಈ ಸಲಹೆಯನ್ನು ಒಪ್ಪಿದರು.

ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಾರಂಭದಲ್ಲಿ ಪ್ರಾಯಶಃ ಈ ದಂಪತಿಗಳು 'ಕ್ಯಾಲೆ'ಯ ಬಳಿ ದೊಡ್ಡದೊಂದು ಭವನವನ್ನು ನಿರ್ಮಿಸಲು ಯೋಚಿಸಿದ್ದರೇನೋ. ಆದರೆ ಫ್ರಾನ್ಸ್‌ನಲ್ಲಿಯ ಆಗಿನ ರಾಜಕೀಯ ಸ್ಥಿತಿಗತಿಗಳನ್ನು ಗಮನದಲ್ಲಿ ಇಟ್ಟುಕೊಂಡು ಅವರು ತಮ್ಮ ಸಂಗ್ರಹಾಲಯವನ್ನು ಇಂಗ್ಲೆಂಡಿನಲ್ಲಿ ಸ್ಥಾಪಿಸಬೇಕಾಯಿತು. ಅಲ್ಲಿಯೂ ಕಟ್ಟಡದ ನಿರ್ಮಾಣ ಕಾರ್ಯ ಫ್ರಾನ್ಸಿನ ವಾಸ್ತುಶಿಲ್ಪಿಯೊಬ್ಬ ಹಾಕಿಕೊಟ್ಟ ನಕ್ಷೆಯ ಅನುಸಾರವಾಗಿಯೇ ನಡೆಯಿತು. ತಮ್ಮ ಯೋಜನೆಗಾಗಿ ಅವರು ಇಂಗ್ಲೆಂಡಿನ ಡರ್ಹ್ಯಾಮ್ ಎಂಬ ಸಣ್ಣ ಪಟ್ಟಣದ ಹಳೇ ಮಾರುಕಟ್ಟೆ ಪ್ರದೇಶ ಬಾರ್ನಡ್ ಕ್ಯಾಸಿಲ್‌ನಿಂದಾಚೆಗಿನ ಸ್ಟ್ರೀಟ್ಲೈಮ್ ಪಟ್ಟಣದಿಂದ ಸುಮಾರು ೩೦ ಕಿ.ಮೀ. ದೂರದ ಒಂದು ಭಾಗವನ್ನು ಆರಿಸಿದರು. ಇಂಗ್ಲೆಂಡಿನ ಉತ್ತರದಲ್ಲಿದ್ದ ಸ್ಟ್ರೀಟ್‌ಲೈಮ್ ಪಟ್ಟಣದ ೧೬,೦೦೦ ಹೆಕ್ಟೇರ್ ಭೂಮಿ ಜಾನ್‌ಬೋಜರಿಗೆ ಜಾಗೀರು ರೂಪದಲ್ಲಿ ಹಿರಿಯ ತಲೆಮಾರುಗಳಿಂದ ಆಸ್ತಿಯಾಗಿ ಬಂದಿತ್ತು.

ಟೀಜ್ ನದಿಯ ದಡದಲ್ಲಿಯ ಟೀಜ್ ಡೇಲ್‌ಯ ಪರ್ವತಶ್ರೇಣಿಗಳಲ್ಲಿ ವಿಶಾಲವಾಗಿ ಹೊಮ್ಮಿರುವ ಇಂಗ್ಲಿಷ್ ಭೂಮಿಯಲ್ಲಿ ೧೦ ಮೀಟರ್ ಉದ್ದ ಹಾಗೂ ೨೫ ಮೀಟರ್ ಎತ್ತರ ನೆಲೆಸಿರುವ ಈ ಭವ್ಯ ಬಂಗಲೆಯನ್ನು ನೋಡಿದವರಾರೂ ಇದರ ಹಿನ್ನೆಲೆಯನ್ನು ನಂಬಲಾರರು. ಇದಕ್ಕೂ ಮಿಗಿಲಾಗಿ ಆಶ್ಚರ್ಯದ ಸಂಗತಿಯೆಂದರೆ ಅಲ್ಲಿ ಪ್ರದರ್ಶಿಸಿರುವ ೧೫,೦೦೦ ಕಲಾಕೃತಿಗಳು. ಈ ಕಲಾಕೃತಿಗಳ ಒಟ್ಟು ಅಂದಾಜು ಬೆಲೆ ೫ ಕೋಟಿ ಸ್ಟರ್ಲಿಂಗ್ ಪೌಂಡ್‌ಗಳನ್ನು ಮೀರುವುದು.

ಫ್ರಾನ್ಸಿನ ಐತಿಹಾಸಿಕ ಫರ್ನಿಚರ್‌ಗಳು, ಯೂರೋಪಿನ ಪ್ರಸಿದ್ಧ ಕಾರ್ಖಾನೆಗಳಲ್ಲಿ ತಯಾರಾದ ಜಿಗಟು ಮಣ್ಣಿನ ಕಲಾಕೃತಿಗಳು, ಗಡಿಯಾರ, ಪೂರ್ವದೇಶಗಳ ಮಣ್ಣಿನ ಆಲಂಕಾರಿಕ ವಸ್ತುಗಳು, ಬಟ್ಟೆಗಳು, ಕೆತ್ತನೆಯ ಕುಸುರಿ, ವಿಗ್ರಹಗಳು ಹಾಗೂ ೧೦೦೦ಕ್ಕೂ ಮಿಗಿಲಾಗಿ ಕಲಾಚಿತ್ರಗಳನ್ನು ಈ ಸಂಗ್ರಹಾಲಯದ ೪೦ ದೊಡ್ಡ ದೊಡ್ಡ ಕೊಠಡಿಗಳಲ್ಲಿ ಅಂದವಾಗಿ ಜೋಡಿಸಿಡಲಾಗಿದೆ. ಇದು ಬ್ರಿಟನ್‌ನಲ್ಲಿ ಸ್ಪೇನ್ ಚಿತ್ರಕಾರರ ಅತ್ಯಧಿಕ ಕಲಾಕೃತಿಗಳ ಪ್ರದರ್ಶನ ಸ್ಥಳವೂ ಹೌದು.

ಇಂಗ್ಲೆಂಡಿನಿಂದ ಸಾಕಷ್ಟು ದೂರದಲ್ಲಿಯ ಪ್ರದೇಶದಲ್ಲಿ ನೆಲೆಸಿರುವ ಈ ಸಂಗ್ರಹಾಲಯ

ವನ್ನು ವೀಕ್ಷಿಸಲು ೧೯೯೨ರಲ್ಲಿ ಬಂದ ದರ್ಶಕರ ಸಂಖ್ಯೆ ೧,೨೫,೦೦೦, ೧೯೯೩ರ ಜೂನ್ ತಿಂಗಳ ಕೊನೆಭಾಗದಲ್ಲಿ ಏರ್ಪಡಿಸಲಾಗಿದ್ದ ನ್ಯಾಶನಲ್ ಗ್ಯಾಲರಿ ಪ್ರದರ್ಶನದಲ್ಲಿ ಜಾನ್ ಬೋಜರ ೨೯ ಅತ್ಯುನ್ನತ ಕಲಾಕೃತಿಗಳನ್ನು ಪ್ರದರ್ಶಿಸಲಾಗಿತ್ತು. 'ದ ಟಿಯರ್ಸ್ ಆಫ್ ಸೈಂಟ್ ಪೀಟರ್' ಎಂಬ ಅತ್ಯಂತ ಪ್ರಸಿದ್ಧ ಥಾಮಿರ್ ಕ ಚಿತ್ರವೂ ಇವುಗಳಲ್ಲಿ ಒಂದಾಗಿತ್ತು. ಸ್ಪೈನ್‌ನ ಸುಪ್ರಸಿದ್ಧ ಕಲಾವಿದ ಎಲ್. ಗ್ರೆಕೋರವರ ಈ ಚಿತ್ರವನ್ನು ಜಾನ್ ಬೋಜರು ಕೇವಲ ೮ ಪೌಂಡುಗಳಷ್ಟನ್ನೇ ಕೊಟ್ಟು ಕೊಂಡಿದ್ದರು.

ಈಟನ್ ಮತ್ತು ಕೇಂಬ್ರಿಡ್ಜ್‌ನ ಟ್ರಿನಿಟಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಜಾನ್ ಬೋಜರು ಸೂಕ್ಷ್ಮಮತಿಯಾಗಿದ್ದರು. ಅವರು ವ್ಯವಹಾರಶೀಲ ವ್ಯಾಪಾರಿಯೊಬ್ಬರಾಗಿದ್ದರಿಂದ ಕಲ್ಲಿದ್ದಲು ಗಣಿಗಳಲ್ಲಿ ತೊಡಗಿಸಿದ್ದ ಹಣದಿಂದ ದಿನವೊಂದಕ್ಕೆ ಕಡಿಮೆ ಎಂದರೆ ೧೦೦೦ ಪೌಂಡುಗಳಷ್ಟಾದರೂ ಲಾಭ ಬರುತ್ತಿತ್ತು. ಇಷ್ಟೇ ಅಲ್ಲ ಅವರು ರೇಸುಕುದುರೆಗಳನ್ನು ಸಹ ಸಾಕಿದ್ದರು. ಡರ್ಬಿರೇಸಿನಲ್ಲಿ ನಾಲ್ಕು ಬಾರಿ ಗೆದ್ದು ೩೦,೦೦೦ ಪೌಂಡುಗಳನ್ನು ಪಡೆದಿದ್ದರು. ಗಿನೀಸ್, ಡರ್ಬಿ ಮತ್ತು ಸೇಂಟ್‌ಲೇಜರ್ ಈ ಮೂರು ರೇಸುಗಳನ್ನು ತಮ್ಮದಾಗಿಸಿಕೊಂಡ ಪ್ರಪ್ರಥಮ ವ್ಯಕ್ತಿ ಅವರು.

ಜಾನ್ ಬೋಜರು ಸಂಸತ್ ಸದಸ್ಯರಾಗಿ ಸುಮಾರು ೧೫ ವರ್ಷಗಳ ಕಾಲ ದಕ್ಷಿಣ ಡರಮ್ ಪ್ರದೇಶವನ್ನು ಪ್ರತಿನಿಧಿಸಿದರು. ಡರಮ್ ಮಲೇಷಿಯಾದಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿಯೂ ಹಾಗೂ ಡರಮ್ ಪಟ್ಟಣದ ಡೆಪ್ಯುಟಿಲೆಫ್ಟಿನೆಂಟ್ ಮತ್ತು ಹೈಷರೀಫರಾಗಿಯೂ ಸಹ ಕಾರ್ಯನಿರ್ವಹಿಸಿದರು. ಇಷ್ಟಾಗಿಯೂ ಜಾನ್ ಬೋಜ್ ಗತಿಸಿದ ತಮ್ಮ ಕರಾಳ ಜೀವನದ ನೆನಪನ್ನು ಎಂದೂ ಮರೆಯಲಾರರು.

ಅವರ ತಂದೆ ಜಾನ್ ಬೋಜ್, ಸ್ವೆಥ್ ಮೋರಿನ ಹತ್ತನೆ ಅರ್ಲ್ ಸಿರಿವಂತ ವರ್ಗಕ್ಕೆ ಸೇರಿದವರು. ಮಧ್ಯಯಸ್ಸಿನವರೆಗೂ ಮದುವೆಯಾಗದೆಯೇ ಇದ್ದ ಅವರು ಒಮ್ಮೆ ಯಾರ್ಕ್‌ಶೈರಿನ ಶಿಕಾರ್‌ಗಾಡ್ ಹಳ್ಳಿಯ ೨೨ ವರ್ಷ ವಯಸ್ಸಿನ ಸಹಾಯಕಿ ಮೇರಿ ಮಿಲನರರ ಪ್ರೇಮಪಾಶದಲ್ಲಿ ಸಿಲುಕಿದರು ಇದರ ಪರಿಣಾಮ ಮೇರಿಯ ಮೈ ತುಂಬಿಬಂತು. ೧೮೧೧ರ ಜೂನ್ ತಿಂಗಳಲ್ಲಿ ಜಾನ್ ಬೋಜರ ಜನನ. ಅರ್ಲರೇನೋ ಮಗುವನ್ನು ತನ್ನದೆಂದು ಸ್ವೀಕರಿಸಿದ್ದರು. ಆದರೆ ಮೇರಿಯ ಜೊತೆ ವಿವಾಹವಾಗುವ ವೇಳೆಗೆ ಅವರ ಆರೋಗ್ಯ ಹದಗೆಟ್ಟಿತು. ವಿವಾಹಕ್ಕಾಗಿ ಅವರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಲಂಡನ್ನಿನ ಹೈನೋವರ್ ಸ್ಕ್ವೇರ್‌ನ ಸೈಂಟ್ ಜಾರ್ಜ್ ಚರ್ಚಿಗೆ ಕರೆತಂದರು. ಆದರೆ ವಿವಾಹದ ಮರು ದಿನವೇ ಅವರು ತಮ್ಮ ಕೊನೆಯುಸಿರೆಳೆದರು.

ಅವರ ಪತ್ನಿ ಮೇರಿ ಸ್ವೆಥ್‌ಮೋರಿನ ಕೌಂಟೆಸ್ ದರ್ಜೆಯ ಶ್ರೀಮಂತೆಯಾದರು. ಆದರೆ ಮದುವೆಗೆ ಮುನ್ನವೇ ಹುಟ್ಟಿದ ಮಗು ಜಾನ್ ಬೋಜ್‌ರನ್ನು ಮಾತ್ರ ಅಕ್ರಮ ಸಂತಾನವೆಂದು ಪರಿಗಣಿಸಿ ಅದನ್ನು ಅರ್ಲ್ ವರ್ಗಕ್ಕೆ ಸೇರಿಸಿಕೊಳ್ಳಲಾಗಲಿಲ್ಲ. ಬದಲಾಗಿ ಅವರ ಚಿಕ್ಕಪ್ಪ ಥಾಮಸ್ ಬೋಜ್ ಈ ಪದವಿಯನ್ನು ಹೊಂದಿದರು. ಥಾಮಸ್ ಬೋಜರು ಇಂದಿನ ಬ್ರಿಟಿಷ್

ಮಹಾರಾಣಿಯವರ ತಾಯಿ ಎಲಿಜಬೆತ್‌ರ ಮುತ್ತಾತನ ತಂದೆ.

ಧನಿಕರಾಗಿದ್ದರೂ ತಾವು ಸರಿಯಾದ ತಂದೆ-ತಾಯಿಗಳಿಗೆ ಹುಟ್ಟಿದ ಮಗನಲ್ಲವೆಂಬ ಕೊರಗು ಜಾನ್‌ರನ್ನು ಸದಾ ಕಾಡುತ್ತಿತ್ತು. ವಿಕ್ಟೋರಿಯಾ ಯುಗದ ಅಂದಿನ ಸಮಾಜದ ರೀತಿಗಳನ್ನು ಎದುರಿಸಲಾರದೆಯೋ ಏನೋ ಎಂಬಂತೆ ಅವರು ತಮ್ಮ ಬಹಳಷ್ಟು ಸಮಯವನ್ನು ಫ್ರಾನ್ಸಿನ ಪಾರಿಯಲ್ಲಿಯೇ ಕಳೆಯುತ್ತಿದ್ದರು. ಪಾರಿಯ ಜನ, ಜೀವನದ ಭಿನ್ನ ಭಿನ್ನ ಪರಿಸ್ಥಿತಿಗಳಿಂದ ಹೊರತಾಗಿ, ಕಲೆಯಲ್ಲಿ ಸಾಕಷ್ಟು ಆಸಕ್ತಿ ವಹಿಸುತ್ತಿದ್ದರು. ಜಾನ್‌ಬೋಜ್ ಮತ್ತು ಜೋಸೆಫಿನ್ನರೂ ಇದೇ ಹಾದಿಯನ್ನು ಅನುಸರಿಸಿ ಪಾರಿಯಲ್ಲಿಯೇ ತಮ್ಮ ಸಂಗ್ರಹಾಲಯಕ್ಕಾಗಿ ಕಲಾಕೃತಿಗಳ ಆಯ್ಕೆ ಆರಂಭಿಸಿದರು. ಈ ಕೆಲಸವನ್ನು ಅವರು ೧೫ ವರ್ಷಗಳ ಕಾಲ ಮುಂದುವರಿಸಿದರು.

ಹೀಗೆ ಜಾನ್ ದಂಪತಿಗಳು ಕಲಾಕೃತಿಗಳ ಅಪಾರ ಸಂಪತ್ತನ್ನು ಒಟ್ಟುಗೂಡಿಸಿದರು. ಬಹಳಷ್ಟು ಚಿತ್ರಗಳನ್ನವರು ೧೦ ಪೌಂಡುಗಳಿಗಿಂತಲೂ ಕಡಿಮೆ ಬೆಲೆ ಕೊಟ್ಟು ಕೊಂಡರು. 'ಬೂದ್ಯೆ' ಎಂಬ ಚಿತ್ರವನ್ನು ೨ ಪೌಂಡುಗಳಿಗೂ, 'ಕೂರಬೆ' ಮತ್ತು 'ಫಾಂತ್ಯೆ' ಚಿತ್ರಗಳನ್ನು ಕೇವಲ ೪-೪ ಪೌಂಡುಗಳಿಗೂ ಕೊಂಡುಕೊಂಡರು ಇದಕ್ಕೆ ಹೊರತಾಗಿ, ೧೮ನೆಯ ಶತಮಾನದ ಅತ್ಯಂತ ವೈಭವಪೂರ್ಣ ಚಿತ್ರಗಳಿಗೆ ೨೦೦ ಪೌಂಡುಗಳನ್ನೂ ಕೊಟ್ಟಿದ್ದುಂಟು. ಈ ಕಲಾಕೃತಿಯಲ್ಲಿನ ಹಂಸ ಕೀಲುಕೊಟ್ಟಾಗ ತನ್ನ ಕೊಕ್ಕಿನಿಂದ ರೆಕ್ಕೆಗಳನ್ನು ಸವರಿಕೊಳ್ಳುವುದು, ನೀರಿನಲ್ಲಿನ ಮೀನನ್ನು ಹಿಡಿಯಲು ಕೊಕ್ಕು ಬಗ್ಗಿಸಿ ಒದ್ದಾಡುತ್ತಿರುವ ಮೀನನ್ನು ಹಿಡಿದು ನುಂಗುವುದು.

ತಮ್ಮ ಚಿತ್ರ ಕಲಾಕೃತಿಗಳ ಅಪಾರ ಸಂಪತ್ತನ್ನು ಬಾರ್ನರ್ಡ್‌ಗೆ ಕೊಂಡೊಯ್ಯುವ ಮೊದಲು ಜಾನ್ ದಂಪತಿಗಳು ಫ್ರಾನ್ಸಿನ ಪಾರಿಯಲ್ಲಿಯೇ ಅವುಗಳನ್ನು ಇಡಬೇಕೆಂಬ ಉದ್ದೇಶದಿಂದ ಒಂದು ಜಾಗವನ್ನೇನೋ ಆರಿಸಿದರು. ಆದರೆ ೧೮೭೦-೭೧ರಲ್ಲಿ ನಡೆದ ಫ್ರಾನ್ಸ್-ಪರ್ಷಿಯಾ ಯುದ್ಧ ಕೊನೆಗೊಳ್ಳುವ ಕೆಲವು ದಿನಗಳಿಗೆ ಮುಂಚೆ ಕಾಮ್ಯುನಾರ್ಡ್ ವಿದ್ರೋಹಕ್ಕೆ ತುತ್ತಾಗಿ ಇವರು ಆರಿಸಿದ ಭವನ ನುಚ್ಚುನೂರಾಯಿತು. ಇದೇ ಸಮಯದಲ್ಲಿ ಜಾನ್ ಬೋಜ್ ಮತ್ತು ಜೋಸೆಫಿನ್ ದಂಪತಿಗಳು ಸಂಗ್ರಹಾಲಯದ ಆಧಾರಶಿಲೆಗಾಗಿ ಇಂಗ್ಲೆಂಡಿಗೆ ಹೋಗಿದ್ದರು ಅವರು ಹಿಂದಿರುಗುವಷ್ಟರಲ್ಲಿ ಬಹಳ ದಿನಗಳೇ ಉರುಳಿಹೋದವು, ತಮ್ಮ ಅಮೂಲ್ಯ ಚಿತ್ರಸಂಗ್ರಹದ ಬಗ್ಗೆ ಬಹಳ ಚಿಂತೆಯಿದ್ದರೂ ಸುಮಾರು ೨ ವರ್ಷಗಳಿಗೂ ಮಿಗಿಲಾಗಿ ಅವರಿಗೆ ಪಾರಿಗೆ ಹಿಂದಿರುಗಿ ಬರಲಾಗಲೇ ಇಲ್ಲ.

ಪಾರಿಗೆ ವಾಪಸ್ಸಾದ ದಿನದಿಂದಲೇ ತಮ್ಮ ಚಿತ್ರ ಕಲಾಕೃತಿಗಳನ್ನು ಸುರಕ್ಷಿತವಾಗಿ ಇಂಗ್ಲೆಂಡಿಗೆ ವರ್ಗಾಯಿಸುವ ಬೃಹತ್ ಕಾರ್ಯವನ್ನು ದಂಪತಿಗಳು ಹಚ್ಚಿಕೊಂಡರು ಆದರೆ ಈ ಮಹತ್‌ಕಾರ್ಯವನ್ನು ಪೂರ್ಣಗೊಳಿಸುವ ಮೊದಲೇ ಜೋಸೆಫಿನ್ ತನ್ನ ೪೮ನೆಯ ವಯಸ್ಸಿನಲ್ಲಿ ೧೮೭೪ರಲ್ಲಿ ಸ್ವರ್ಗಸ್ಥರಾದರು.

ಜಾನ್‌ಬೋಜ್ ತಮ್ಮ ಸಂಗ್ರಹಗಳನ್ನು ಕೂಡಿಡುವ ಕೆಲಸವನ್ನೇನೋ ಮುಂದು

ಮರಿಸಿದರು. ಜೋಸೆಫಿನ್ ಇಲ್ಲದ ಅವರ ಬಾಳು ಒಂಟಿಯಾಗಿತ್ತು. ಇದನ್ನು ತುಂಬಲು ಅವರು ಎರಡನೆಯ ಮದುವೆಯನ್ನು ಮಾಡಿಕೊಂಡರು. ಆದರೆ ಅದು ಅವರ ಪಾಲಿಗೆ ನಿಷ್ಪ್ರಯೋಜಕವಾಯಿತು. ೧೮೮೫ರಲ್ಲಿ ತಮ್ಮ ೭೪ನೆಯ ಇಳಿವಯಸ್ಸಿನಲ್ಲಿ ಜಾನ್ ಬೋಜ್ ಅಸುನೀಗಿದರು. ಬೋಜ್ ದಂಪತಿಗಳ ಕಲ್ಪನೆಯ ಸಂಗ್ರಹಾಲಯವನ್ನು ಅವರ ಮರಣದ ಏಳು ವರ್ಷಗಳ ಬಳಿಕ ಉದ್ಘಾಟಿಸಲಾಯಿತು.

ಈ ನಡುವೆ, ಕಲ್ಲಿದ್ದಲ್ಲಿನ ವ್ಯಾಪಾರದ ಏರಿಳಿತ ಹಾಗೂ ವ್ಯವಸ್ಥಾಪಕ ವರ್ಗದವರೊಬ್ಬರ ಅಪ್ರಾಮಾಣಿಕತೆಯಿಂದಾಗಿ ಬೋಜ್‌ರವರ ಆರ್ಥಿಕ ಪರಿಸ್ಥಿತಿಯೂ ಹದಗೆಟ್ಟಿತ್ತು. ಇದರಿಂದಾಗಿ, ಸಂಗ್ರಹಾಲಯಕ್ಕಾಗಿ ಅವರು ಮೀಸಲಾಗಿಟ್ಟಿದ್ದ ಹಣದ ಬಹುಭಾಗ ೨೦ ವರ್ಷಗಳ ಕಾಲ ಸಂಗ್ರಹಾಲಯದ ಟ್ರಸ್ಟಿಗಳಿಗೆ ಸಿಗಲೇ ಇಲ್ಲ. ಜಾನ್ ಬೋಜರು ತಮ್ಮ ಉಯಿಲಿನಲ್ಲಿ ಬರೆದಿಟ್ಟಿದ್ದಂತೆ ಅವರಿಟ್ಟಿದ್ದ ಹಣ ಆ ದಿನಗಳಲ್ಲೇನೋ ಸಂಗ್ರಹಾಲಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಸಾಕಾಗುತ್ತಿತ್ತು. ಆದರೆ ಬರುಬರುತ್ತಾ ಹಣ ದುಬ್ಬರದ ಕಾರಣ ಅದರ ಬೆಲೆ ಬಹಳಷ್ಟು ಇಳಿದು ಹೋಯಿತು. ಪರಿಣಾಮ ಐವತ್ತರ ದಶಕದ ಆದಿಯಲ್ಲಿ ಸಂಗ್ರಹಾಲಯ ಮುಚ್ಚುವ ಸ್ಥಿತಿಗೆ ಬಂದುಬಿಟ್ಟಿತು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅದನ್ನು ಉಳಿಸಿಕೊಳ್ಳುವ ನಾಗರಿಕ ಹೊಣೆ ಜನಗಳಲ್ಲಿ ಆತಂಕ ಉಂಟುಮಾಡಿತು. ಬಹಳಷ್ಟು ಮಿತ್ರಮಂಡಳಿಗಳೂ ಜನ್ಮ ತಾಳಿದವು. ಮಹಾರಾಣಿಯವರ ತಾಯಿಯವರ ಈ ಮಂಡಳಿಗಳ ಬೇಡಿಕೆಯನ್ನು ಸಮರ್ಥಿಸಿ ಈ ಸಂಗ್ರಹಾಲಯದ ಉಸ್ತುವಾರಿಯನ್ನು ೧೯೫೬ರಲ್ಲಿ ಡರಮ್ ಪಟ್ಟಣ ಕೌನ್ಸಿಲ್‌ಗೆ ವಹಿಸಿದರು. ಹಾಗಾಗಿ ಸಂಗ್ರಹಾಲಯದ ಭವಿಷ್ಯ ಮಣ್ಣುಪಾಲಾಗದೆ ಉಳಿಯಿತು.

ಇಂದು ಜೋಸೆಫಿನ್ ಬದುಕುಳಿದಿದ್ದರೆ ಬಹಳ ಸಂತೋಷಪಡುತ್ತಿದ್ದರೇನೊ. ತಮ್ಮ ಕಲ್ಪನೆಯ ಸೌಧ ಈ ಸಂಗ್ರಹಾಲಯದ ಬಗ್ಗೆ ಅವರಿಗೆ ಅಪಾರ ನಿಷ್ಠೆ ಇತ್ತು. ಈ ಸಂಗ್ರಹಾಲಯದ ಶಿಲಾನ್ಯಾಸಕ್ಕಾಗಿ ಹಣದ ಮುಗ್ಗಟ್ಟು ಒದಗಿಬಂದಾಗ ಅವರು ಜಾನ್ ಬೋಜರ ಜೊತೆ ತಮ್ಮ ವಿವಾಹದ ಸಂಕೇತವಾಗಿ ತಮಗೆ ದೊರೆತಿದ್ದ ಸೇನ್ ನದಿಯ ದಡದಲ್ಲಿ ಲೂವೆಸೀಸ್ ಎಂಬಲ್ಲಿದ್ದ ಜಮೀನನ್ನು ಸಹ ಮಾರಿದ್ದರು. ಇದನ್ನು ಹದಿನೈದನೇ ಲೂಯಿ ಮೇಡಮ್ ದ್ಯುಬಾರಿ ಗೋಸ್ಕರ ಖರೀದಿಸಿದ್ದನು.

ದೊಡ್ಡ ಆವರಣದಲ್ಲಿನ ಭವ್ಯ ಭವನದಲ್ಲಿ ದೊಡ್ಡ ದೊಡ್ಡ ಕಲಾಕೃತಿಗಳು ಹಾಗೂ ಬೋಜ್ ದಂಪತಿಗಳ 'ಪಾರಿ'ನಿವಾಸದಲ್ಲಿದ್ದ ಸಂಗ್ರಹಗಳೆಲ್ಲವನ್ನೂ ಜೋಡಿಸಿಡಲಾಯಿತು. ಚಿತ್ರ,ಕಲಾಕೃತಿಗಳ ಅಪಾರ ಸಂಪತ್ತಿನಿಂದ ಕಂಗೊಳಿಸುವ ಈ ಸಂಗ್ರಹಾಲಯವನ್ನು ಇಂದು ಬ್ರಿಟನ್ನಿನಲ್ಲಿ ಸರ್ವಶ್ರೇಷ್ಠ ಸಂಗ್ರಹಾಲಯವೆಂದು ಪರಿಗಣಿಸಲಾಗಿದೆ. ಎಲಿಜಬೆತ್ ಕೋನ್‌ರಾನ್‌ನ ಹೇಳಿಕೆಯಂತೆ—'ಬೋಜ್ ಸಂಗ್ರಹಾಲಯ, ದಂಪತಿಗಳ ಪ್ರಣಯಜೀವನ ಮತ್ತು ಉದಾರತೆಯನ್ನು ಎತ್ತಿ ಸಾರುವ ಹೃದಯಸ್ಪರ್ಶಿ ಸ್ಮಾರಕವಾಗಿದೆ. ಇದು ನಿಸ್ಸಂದೇಹವಾಗಿ ನಮ್ಮ ಭಾವನೆಗಳನ್ನು ಹಿಗ್ಗಿಸುತ್ತದೆ.'

ಮೊದಲನೆಯ ಪತ್ರ

ಮಾಧವರಾವ್ ಮುಧೋಳ್

ಮಿಸ್ ನಂದಾ ಬಾಲ ವಿದ್ಯಾಮಂದಿರದಲ್ಲಿ ಮೂರನೇ ವರ್ಗದ ಕ್ಲಾಸ್ ಟೀಚರ್ ಆಗಿದ್ದರು. ಅವರು ತಮ್ಮ ಸಹ ಟೀಚರ್ ಮಿಸ್ ಭಾರತೀಯ ಜೊತೆ ಹಾಸ್ಟೆಲ್‌ನಲ್ಲಿ ಇರುತ್ತಿದ್ದರು. ಅವರು ಹೊಸ ಪಟ್ಟಣಕ್ಕೆ ಬಂದು ಇನ್ನೂ ಕೇವಲ ಒಂದೇ ತಿಂಗಳಾಗಿತ್ತು. ಈ ಮೊದಲು ಅವರು ಆಗ್ರಾದಲ್ಲಿ ಒಂದು ಸ್ಕೂಲಿನಲ್ಲಿ ಪಾಠ ಹೇಳುತ್ತಿದ್ದರು. ಒಂದು ದಿವಸ ಅವರು ಸ್ಕೂಲಿನಿಂದ ಬರುತ್ತಲು, ಆಗ್ರಾ ಸ್ಕೂಲಿನ ಮೂರನೆ ವರ್ಗದ ಹುಡುಗಿಯರ ಕಡೆಯಿಂದ ಒಂದು ಪತ್ರ ಬಂದಿದ್ದಿತು. ಪತ್ರದ ಎರಡೂ ಕಡೆಗೂ ಅನೇಕರು ಬರೆದ ಕೈ ಬರಹಗಳಿದ್ದವು. ಸೊಟ್ಟ ಸೊಟ್ಟಾದ ಸಾಲುಗಳು, ಪ್ರತಿಯೊಂದು ಹುಡುಗಿಯರು ಬರೆದ ಒಂದೊಂದು ಎರಡೆರಡು ವಾಕ್ಯಗಳು, ಪುಟದ ಸುತ್ತಲೂ ಹಬ್ಬಿಕೊಂಡಿದ್ದವು. ಎಡಕ್ಕೆ, ಬಲಕ್ಕೆ, ಮೇಲೆ, ಕೆಳಗೆ ಎಲ್ಲ ಕಡೆಗೂ.

"ಪ್ರೀತಿಯ ಸೋದರಿ! ತಾವು ನಮಗೆ ಬಹಳ ನೆನಪಿಗೆ ಬರುತ್ತೀರಿ."

"ಅಕ್ಕಾ! ನೀವು ಇಲ್ಲಿಗೆ ಯಾವಾಗ ಬರುವಿರಿ? ಯಾವಾಗ ಬಂದರೂ ಸ್ಕೂಲಿಗೆ ಅವಶ್ಯ ಬನ್ನಿರಿ."

"ಸಹೋದರಿಯವರೇ! ತಾವು ನಮ್ಮನ್ನು ಮರೆತಿಲ್ಲತಾನೆ?"

"ಅಕ್ಕಾ ಅವರೇ! ನಮ್ಮ ಪತ್ರಕ್ಕೆ ತಾವು ಜರೂರು ಉತ್ತರಾ ಹಾಕಿ."

ಈ ಪತ್ರವನ್ನು ಓದುತ್ತಿದ್ದಾಗ ಸಹೋದ್ಯೋಗಿ ಟೀಚರ ಮಿಸ್ ಭಾರತಿ ರೂಮಿನೊಳಕ್ಕೆ ಬಂದರು, "ಯಾರ ಪತ್ರವಮ್ಮಾ? ಇಷ್ಟು ಕುತೂಹಲದಿಂದ ಓದುತ್ತಿದ್ದೀಯೆ?" ಎಂದು ಕೇಳಿದರು!

"ಆಗ್ರಾ ಸ್ಕೂಲಿನ ಮಕ್ಕಳು ಬರೆದಿದ್ದಾರೆ" ಎಂದು ಮಿಸ್ ನಂದಾ ಹೇಳಿದರು. ಕೇಳುತ್ತಲು ಭಾರತಿಯವರು ಒಂದು ಥರ ಮುಖ ಸಿಂಡರಿಸಿಕೊಂಡರು. ಅಯ್ಯೋ! ಬಿಡಿ. ಇದೂ ಒಂದು ಪತ್ರಾವೆ? ಇಷ್ಟು ಆತುರ ಪಟ್ಟು ಓದುತ್ತಿರುವುದಕ್ಕೆ?" ಎನ್ನುವ ಹಾಗಿತ್ತು ಅವರ ಮುಖ. ಇಷ್ಟು ಹೇಳಿ ಅವರು ಹೊರಗೆ ಹೊರಟು ಹೋದರು. ಮಿಸ್ ನಂದಾ, ಪತ್ರ ಕೈಯಲ್ಲಿ ತೆಗೆದುಕೊಂಡು ವಿಚಾರದಲ್ಲಿ ಮುಳುಗಿ ಹೋಗಿದ್ದರು. ಈ ಪತ್ರ ಅವರೆದುರು ಅವರ ಬಾಲ್ಯವನ್ನು ತಂದು ನಿಲ್ಲಿಸಿತ್ತು. ಅವರೂ ಎಂದೋ ಮೂರನೇ ವರ್ಗದಲ್ಲಿ ಓದು

ಮೂಲ : ಡಾ॥ ವಿಶೇಶ್ವರ ಪ್ರದೀಪ್

ತ್ತಿದ್ದರು. ಆಗ ಅವರಿಗೂ ಒಬ್ಬ ಟೀಚರ್ ಇದ್ದರು-ಮಿಸ್ ಬಾರ್ಕರ್ ಅವರ ಹೆಸರು. ಎಲ್ಲ ಬಾಲಕಿಯರು ಈ ಟೀಚರನ್ನು ಬಹಳ ಪ್ರೀತಿಸುತ್ತಿದ್ದರು. ಅವರಿಗೂ ಮಕ್ಕಳೆಂದರೆ ಪಂಚಪ್ರಾಣ. ಅದರಲ್ಲೂ ನಂದಾಳ ಮೇಲೆ ಅವರಿಗೆ ಅತಿವಾತ್ಸಲ್ಯ ಮಿಸ್ ಬಾರ್ಕರ್‌ಸಿಗೆ ಬೇರೆ ಊರಿನಲ್ಲಿ ಒಂದು ಒಳ್ಳೇ ಕೆಲಸ ಸಿಕ್ಕಿತು. ಅವರು ಹೊರಡುವ ಸಮಾಚಾರ ತಿಳಿದು ಎಲ್ಲ ಬಾಲಕಿಯರಿಗೂ ನಿರುತ್ಸಾಹವಾಯಿತು. ಕೊನೆಗೆ ಮಿಸ್ ಬಾರ್ಕರ್‌ಗೆ ಬೀಳ್ಕೊಡುವ ಸಮಾರಂಭ ಇಟ್ಟುಕೊಳ್ಳುವ ದಿವಸ ಬಂದೇ ಬಿಟ್ಟಿತು. ಕ್ಲಾಸಿನ ಎಲ್ಲ ಬಾಲಕಿಯರು ಸ್ವಲ್ಪ ಸ್ವಲ್ಪ ಹಣವನ್ನು ಸೇರಿಸಿ, ಪಾರಿತೋಷಿಕವಾಗಿ ಕೊಡಲು ಒಂದು ಹಿತ್ತಾಳೆಯ ಹೂದಾನಿಯನ್ನು ಕೊಂಡರು. ಆ ಹೂದಾನಿಯ ಮೇಲೆ ಕ್ಲಾಸಿನ ಎಲ್ಲ ಬಾಲಕಿಯರ ಹೆಸರನ್ನೂ ಬರೆಸಲಾಗಿತ್ತು.

ಮಿಸ್ ಬಾರ್ಕರ್‌ರನ್ನು ಬೀಳ್ಕೊಡುತ್ತಿರುವಾಗ ಎಲ್ಲ ಹುಡುಗಿಯರು ತಮ್ಮ ತಡೆಯದ ಕಣ್ಣೀರನ್ನು ಒರೆಸಿಕೊಳ್ಳುತ್ತಿದ್ದರು. ಮಿಸ್ ಬಾರ್ಕರ್ ಒಂದೊಂದು ಹುಡುಗಿಯ ಹತ್ತಿರವೂ ಬಂದು ಅವರಿಂದ ಹೂವನ್ನು ತೆಗೆದುಕೊಳ್ಳುತ್ತಿದ್ದರು. ಕೆಲವರ ಕೆನ್ನೆಮುಟ್ಟಿ, ಕೆಲವರ ತಲೆಯಮೇಲೆ ಕೈಯಾಡಿಸುತ್ತಿದ್ದರು. ಅವರ ಕಣ್ಣುಗಳೂ ತೇವವಾಗ ತೊಡಗಿದ್ದವು. ವಿಷಣ್ಣವಾದ ತಮ್ಮ ಮುಖದ ಮೇಲೆ ಮುಗುಳು ನಗೆ ತರ ಬಯಸಿದ ಅವರ ಪ್ರಯತ್ನ ಅವರ ಮುಖವನ್ನು ಇನ್ನೂ ಸುಂದರವನ್ನಾಗಿ ಮಾಡಿತ್ತು.

"ಅಕ್ಕ ಅವರೆ! ತಾವು ನಮಗೆ ಪತ್ರ ಬರೆಯುತ್ತೀರಲ್ಲವೆ?"

"ಅಕ್ಕ! ತಾವು ಇಲ್ಲಿಗೆ ಬಂದಾಗ ನಮ್ಮನ್ನು ಕಾಣುತ್ತೀರಲ್ಲವೆ?"

"ಅಕ್ಕ ಅವರೆ! ತಮ್ಮ ನೆನಪು ನಮಗೆ ತುಂಬಾ ಬರುವುದು."

ಅಕ್ಕ! ನೀವು ನಮ್ಮನ್ನು ಮರೆಯಬೇಡಿ" ಎಂದು ಎಲ್ಲರೂ ಕೇಳುವವರೇ.

ಬಾಲಕಿಯರು ಅಂದು ಬಹಳ ನಿರುತ್ಸಾಹಿಗಳಾಗಿದ್ದರು. ಇದಾದಮೇಲೂ ಅವರ ಕಣ್ಣುಗಳು ಮಿಸ್ ಬಾರ್ಕರ್‌ರನ್ನು ಅದೆಷ್ಟೋ ದಿವಸ ಅವರ ಹೊಸ ಕ್ಲಾಸ್ ಟೀಚರ್ ಆ ಮಕ್ಕಳಿಗಾಗಿ ಒಂದು ಅಂದವಾದ ಪದಾರ್ಥವನ್ನು ತಂದರು. ಇದು ಮಿಸ್ ಬಾರ್ಕರ್‌ರವರ ಪತ್ರವಾಗಿತ್ತು. ಅದು ಮೂರನೇ ವರ್ಗದ ಬಾಲಕಿಯರಿಗೆ ಬರೆದುದಾಗಿತ್ತು. ಆ ಪತ್ರವನ್ನು ಟೀಚರ್ ಕ್ಲಾಸಿನಲ್ಲಿ ಓದಿ ಹೇಳಿದರು. ಆ ಪತ್ರದಲ್ಲಿ ಮಿಸ್ ಬಾರ್ಕರರು ಹೋಗಿದ್ದ ಊರಿನ ವಿಷಯವಿತ್ತು. ಎಲ್ಲ ಹುಡುಗಿಯರ ಬಗ್ಗೆ ಕೇಳಿದ್ದರು. ಎಲ್ಲ ಬಾಲಕಿಯರು ನೆನಪಿಗೆ ಬರುತ್ತಾರೆಂದೂ ಬರೆದಿದ್ದರು. ಈ ಪತ್ರವನ್ನು ಕೇಳಿ ಎಲ್ಲ ಹುಡುಗಿಯರಿಗೂ ಸಂತೋಷವಾಯಿತು. ಆ ಪತ್ರ ತಮ ತಮಗೆ ಸಿಗಬೇಕಿತ್ತೆಂದು ಎಲ್ಲ ಬಾಲಕಿಯರೂ ಬಯಸಿದರು. ಅವರ ಪ್ರೀತಿಯ ಅಕ್ಕನ ಪತ್ರ ಅವರೆಲ್ಲ ಇದನ್ನೇ ವಿಚಾರ ಮಾಡುತ್ತಿದ್ದಾಗ, ಕ್ಲಾಸ್ ಟೀಚರು, "ನೀವು ಮಿಸ್ ಬಾರ್ಕರ್‌ಗೆ ಪತ್ರ ಹೇಗೆ ಬರೆಯುತ್ತೀರಿ?" ಎಂದು ಕೇಳಿದರು.

ಮೂರನೇ ವರ್ಗದ ಹುಡುಗಿಯರು ಪತ್ರ ಬರೆಯುವುದನ್ನು ಇನ್ನೂ ಕಲಿತಿರಲಿಲ್ಲ.

ಅವರು ಗೋಣುಹಾಕುತ್ತ ಒಮ್ಮೆ ಟೀಚರ್ ಕಡೆಗೆ, ಮತ್ತೊಮ್ಮೆ ಒಬ್ಬರಿಗೊಬ್ಬರನ್ನು ನೋಡುತ್ತಿರುವಾಗ, "ನೋಡಿ! ಇವತ್ತು ನಾನು ನಿಮಗೆ ಪತ್ರ ಬರೆಯುವುದನ್ನು ಕಲಿಸುತ್ತೇನೆ" ಎಂದು, ಬ್ಲ್ಯಾಕ್ ಬೋರ್ಡಿನ ಮೇಲೆ ಪತ್ರದ ನಮೂನೆಯನ್ನು ಬರೆದರು. ಜೊತೆಗೆ ಮಿಸ್ ಬಾರ್ಕರ್‌ರ ವಿಳಾಸವನ್ನೂ ಬರೆದರು. ಬಾಲಕಿಯರೆಲ್ಲ ಸಂತೋಷದಿಂದ ಆ ಪತ್ರವನ್ನು ತಮ್ಮ ನೋಟಬುಕ್ಕಿನಲ್ಲಿ ಪ್ರತಿ ಮಾಡಿಕೊಂಡರು ಮತ್ತೆ ಬೇರೆ ಯಾವ ಹುಡುಗಿಯಾದರು ಮಿಸ್ ಬಾರ್ಕರ್‌ರಿಗೆ ಕಾಗದ ಬರೆದರೊ ಇಲ್ಲವೊ? ಅವಳಿಗೆ ತಿಳಿಯದು, ಆದರೆ ಇವಳು ಮಾತ್ರ ಮಿಸ್ ಬಾರ್ಕರ್‌ರಿಗೆ ಒಂದು ಪತ್ರವನ್ನು ಬರೆದಿದ್ದಳು, ಮತ್ತೆ ಸ್ವತಃ ತನ್ನ ಕೈಯಿಂದಲೇ ಲೆಟರ್ ಬಾಕ್ಸಿನಲ್ಲಿ ಹಾಕಿದ್ದಳು ಇದೆಲ್ಲ ಅವಳಿಗೆ ಈಗಲೂ ನೆನಪಿದೆ. ಒಂದು ವಾರದ ಅನಂತರ ಇವಳಿಗೆ ತನ್ನ ಪತ್ರಕ್ಕೆ ಉತ್ತರವೂ ಸಿಕ್ಕಿತ್ತು. ಮಿಸ್ ಬಾರ್ಕರ್ ಪತ್ರ ಇವಳ ಹೆಸರಿಗೆ! ಈ ಪತ್ರ ಪಡೆದು ಇವಳಿಗೆ ಅತ್ಯಂತ ಸಂತೋಷವಾಗಿತ್ತು. ಈ ಪತ್ರವನ್ನು ಅವಳು ಸ್ಕೂಲಿಗೆ ತಂದಿದ್ದಳು. ಅದನ್ನು ಇವಳು ತನ್ನ ಕ್ಲಾಸಿನ ಎಲ್ಲ ಬಾಲಕಿಯರಿಗೂ ತೋರಿಸಿದ್ದಳು. ಹುಡುಗಿಯರೆಲ್ಲ ಆಶ್ಚರ್ಯದಿಂದ ಇವಳತ್ತ ನೋಡುತ್ತಿದ್ದರು ಎಷ್ಟೋ ದಿವಸಗಳವರೆಗೆ ಇವಳು ತನ್ನ ಕ್ಲಾಸಿನ ಬಾಲಕಿಯರಿಗೆಲ್ಲ ಹೆಮ್ಮೆಯಿಂದ ಆ ಪತ್ರವನ್ನು ತೋರಿಸುತ್ತ ತಿರುಗಿದ್ದಳು ಆ ಪತ್ರವನ್ನು ಬಹಳ ಜಾಗರೂಕತೆಯಿಂದ ಕಾಯ್ದಿಟ್ಟುಕೊಂಡಿದ್ದಳು. ಈಗಲೂ ಅದು ಅಮೂಲ್ಯ ವಸ್ತುವಿನಂತೆ ಇವಳ ಬಳಿಯಲ್ಲಿದ್ದಿತು.

ಬಾಲಕಿಯರ ಕಡೆಯಿಂದ ಬಂದ ಈ ಪತ್ರವನ್ನು ಕಂಡು ಮಿಸ್ ನಂದಾಗೆ, ಮಿಸ್ ಬಾರ್ಕರ್‌ರ ಪತ್ರದ ನೆನಪಾಯಿತು. ಇವರು ತಮ್ಮ ಕೈಚೀಲದೊಳಗಿಂದ ಒಂದು ಫೈಲು ತೆಗೆದರು. ಅದರಲ್ಲಿ ಬಹಳ ಹಳೆಯ ಪತ್ರಗಳನ್ನು 'ಸ್ಮರಣೆ'ಗೆಂದು ಇರಿಸಲಾಗಿತ್ತು. ಅದರಲ್ಲಿ ಮೊದಲನೆಯ ಪತ್ರ ಮಿಸ್ ಬಾರ್ಕರ್‌ರದಾಗಿತ್ತು. ಈ ಫೈಲಿನಲ್ಲಿ ಬಾಲಕಿಯರಿಂದ ಬಂದ ಈ ಕಾಗದವನ್ನೂ ಹಾಕಿದರು. ಅವರು ಚಿಕ್ಕ ಬಾಲಕಿಯಿದ್ದಾಗ ಮೂರನೇ ಕ್ಲಾಸಿನಲ್ಲಿ ಓದುತ್ತಿದ್ದಾಗ ಒಂದು ಪತ್ರ ಬರೆದಿದ್ದರು. ಆ ಪತ್ರದ ಉತ್ತರ ಬಂದಿತ್ತು, ಅದನ್ನೂ ಈ ಫೈಲಿನಲ್ಲೇ ಹಾಕಲಾಗಿತ್ತು. ಆದರೆ ಹುಡುಗಿಯರ ಕೈಯಿಂದ ಬರೆದ ಯಾವ ಪತ್ರಗಳೂ ಇದರಲ್ಲಿರಲಿಲ್ಲ. ಈಗ ಚಿಕ್ಕಪುಟ್ಟ ಬಾಲಕಿಯರೆಲ್ಲ ಬರೆದ ಈ ಪತ್ರಗಳೂ ಈ ಫೈಲಿನಲ್ಲಿ ಸೇರಿ ಹೋದವು.

ಜೊತೆ ಟೀಚರ್ ಮಿಸ್ ಭಾರತಿ ಹೊರಟು ಹೋಗಿದ್ದರು. ಆದರೆ ಮಿಸ್ ನಂದಾ ಹೊರಗೆ ಹೋಗುವ ತಮ್ಮ ಪ್ರೋಗ್ರಾಮನ್ನು ರದ್ದು ಮಾಡಿದರು, ಮುದ್ದುಮುದ್ದು ಬಾಲಕಿಯರ ಪತ್ರಕ್ಕೆ ಉತ್ತರ ಬರೆಯುತ್ತ ಕುಳಿತರು.

ಹೆಮ್ಮೊಳೆಯೊಂದು ಹೃದಯವನ್ನೇ ಸೀಳಿದಾಗ!

ಎಂ. ಜಯಂತಿಬಾಯಿ

(ಯುವಕನಾಗಿದ್ದ ಸ್ಪಾಲ್‌ಡಿಂಗ್ ಹುಚ್ಚು ಸಾಹಸದ ಅನೇಕ ಪ್ರದರ್ಶನಗಳನ್ನು ಯಶಸ್ವಿಯಾಗಿ ಮಾಡಿ ತೋರಿಸಿದ್ದ. ಆದರೆ ಇಂಥ ಒಂದು ಸಾಹಸದಿಂದ ಆತನನ್ನು ಕಾಪಾಡಬೇಕಾದರೆ ಪವಾಡವೇ ನಡೆಯಬೇಕಾಯಿತು.)

ಿಸಿಲು ಇಳಿದಿತ್ತು, ಹವಾಗುಣ ಹಿತಕರ ಾಗಿತ್ತು. ಪೂರ್ವಕ್ಯಾಲಿಫೋರ್ನಿಯದ ಯೇರಾ ನಿವೇಡ ಎಂಬ ಪರ್ವತ ಪ್ರದೇಶದ ಿಕ್ಕೀ' ಎಂಬ ಪಟ್ಟಣದ ಸೌಂದರ್ಯ ನ್ನು ಮೇಲಿನಿಂದ ಸವಿಯುತ್ತದೆಯೋ ನ್ನುವಂತೆ ಎತ್ತರವಾಗಿದ್ದ ಗುಡ್ಡಬೆಟ್ಟದ ೕಲೆ ೩೨ ವರ್ಷ ಪ್ರಾಯದ ಮೈಕ್ ಪಾಲ್‌ಡಿಂಗ್ ಎಂಬ ಕಟ್ಟಡದ-ಕಂಟ್ರಾಕ್ಟ ರನು ಒಂದು ಭವನ ನಿರ್ಮಾಣ ಕಾರ್ಯ ನ್ನು ಪೂರ್ಣಗೊಳಿಸಬೇಕಾಗಿತ್ತು. ೕಗಾಗಿ ಸ್ಪಾಲ್‌ಡಿಂಗ್ ಮತ್ತು ೨೭ ವರ್ಷ ಯಸ್ಸಿನ ಬಡಗಿ ಟ್ರೇವಿಸ್ ಮ್ಯಾಕ್ ಾಸ್ಟರ್ ಅವರಿಬ್ಬರೂ ಆಪರ್ವತ ್ರದೇಶಕ್ಕೆ ಹಿಮದ ಆಚ್ಛಾದನೆಯಾಗುವುದ ೊಳಗಾಗಿ ಅಲ್ಲಿನ ಹಿತಕರವಾಗಿದ್ದ ಹವಾ ಾನದ ಪ್ರಯೋಜನವನ್ನು ಪಡೆಯ ಯುಸಿದ್ದರು.

ಎಂಟು ಸೆಂ. ಮೀ. ಉದ್ದದ ಮೆಶೀನ್ ಗನ್‌ನಲ್ಲಿ ಗುಂಡುಗಳನ್ನು ತುಂಬುವಂತೆಯೇ ಅವರಿಬ್ಬರೂ ಅತ್ಯಂತ ಶಕ್ತಿಯುತವಾದ ಮೊಳೆ–ಪಿಸ್ತೂಲಿನೊಳಗೆ ಎಂಟು ಸೆಂಟಿಮೀಟರ್ ಉದ್ದದ ಹೆಮ್ಮೊಳೆಗಳನ್ನು ತುಂಬಿಕೊಂಡು ಕಾಗದದ ಹಾಳೆಗಳನ್ನು ಒಟ್ಟುಗೂಡಿಸಿ ಹೊಲಿಯುವಂತೆ ಚೌಕಟ್ಟಿನ ದೂಲಗಳನ್ನು ಮೊಳೆಹೊಡೆದು ಜೋಡಿಸುತ್ತಿದ್ದನು. ಪಿಸ್ತೂಲಿನ ಸನ್ನೆಕೀಲನ್ನು ಸ್ವಲ್ಪ ಎಳೆದರೆ ಪಿಸ್ತೂಲಿನೊಳಗಿನ ಒಂದೊಂದು ಮೊಳೆಯೂ ಭಾರವಾದ ಮರದ ಚೌಕಟ್ಟಿನ ಒಳಗೆ ತಲೆಮೇಲಾಗಿ ಅಂಟಿಕೊಳ್ಳುತ್ತಿತ್ತು.

೧೯೯೧ರ ಡಿಸೆಂಬರ್ ೫ರ ಮುಂಜಾನೆಯ ನಸುಬೆಳಕಿನಲ್ಲಿ ಹವಾಮಾನದ ಉಷ್ಣತೆ ಏರತೊಡಗಿತ್ತು. ಅಷ್ಟು ಹೊತ್ತಿಗೆ ಈ ಇಬ್ಬರು ವ್ಯಕ್ತಿಗಳು ಟೀ-ಶರ್ಟುಧರಿಸಿ ಕೆಲಸಮಾಡತೊಡಗಿದ್ದರು. ಮ್ಯಾಕ್ ಮಾಸ್ಟರನು

೧೯೯೪ರ ಫೆಬ್ರುವರಿ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಪೆರ್‌ಒಲಾ ಮತ್ತು ಮಿಲಿ ಡಿ ಅಲೇರ್ ಅವರು ಬರೆದ "ನೇಯಲ್ಡ್ ತ್ರೂದಿ ಬಾರ್ಟ್" ಎಂಬ ಲೇಖನದ ನುವಾದ.

ಕೈಯಲ್ಲಿ ಮೊಳೆ-ಪಿಸ್ತೂಲನ್ನು ಹಿಡಿದು ಕೊಂಡಿದ್ದನು ಮತ್ತು ಸ್ಪಾಲ್‌ಡಿಂಗನು ಅದರ ಕೆಳಭಾಗವನ್ನೆಳೆದು ಸರಿಯಾದ ಸ್ಥಾನ ದಲ್ಲಿರಿಸಿದನು. ಅನಿರೀಕ್ಷಿತವಾಗಿ ಭಯಂಕರ ಗಾಳಿ ಬೀಸಿತು, ಬೋರ್ಡನ್ನು ಒತ್ತಿಹಿಡಿ ದಂತಾಯಿತು ಮತ್ತು ಅದು ಫಕ್ಕನೆ ಅವನತ್ತ ಹೊರಳಿ ತೂಗಿಕೊಂಡಿತು. ಈ ಅನಿರೀಕ್ಷಿತ ಗಾಳಿಯ ಹೊಡೆತದಿಂದ ಮೊಳೆ-ಪಿಸ್ತೂಲಿನ ಸನ್ನೆ ಕೀಲಿನ ಮೇಲಿದ್ದ ಸ್ಪಾಲ್‌ಡಿಂಗ್‌ನ ಬೆರಳುಗಳು ಹಿಸುಕಿದಂತಾದುವು. ಹೀಗಾಗಿ, ಮೊಳೆಪಿಸ್ತೂಲಿನ ಸನ್ನೆ ಕೀಲು ಒತ್ತಿದಂತಾಗಿ ಅದರಿಂದ ಮೊಳೆಗಳು ಬಂದರ ಹಿಂದೆ ಒಂದರಂತೆ ಹೊರಸಿಡಿದುವು.

ಮೊದಲು ಮೊಳೆಯು ತನ್ನ ಕೈ ತಪ್ಪಿ ಹೋಯಿತೆಂದು ಸ್ಪಾಲ್‌ಡಿಂಗನಿಗೆ ಅನ್ನಿಸಿತು. ಆದರೆ ಅದರಿಂದ ಅವನಿಗೇನೂ ನೋವಾಗಲಿಲ್ಲ. ಆದರೆ ಮರುಕ್ಷಣದಲ್ಲಿಯೇ ಆತನಿಗೆ ಎದೆಯಲ್ಲಿ ಬರೆಹಾಕುವಂತೆ ಮರಣ ಯಾತನೆಯಾಗತೊಡಗಿತು. ಹೀಗಾಗಿ ಏನಾಯಿತೆಂದು ಆತನು ತನ್ನ ದೃಷ್ಟಿಯನ್ನು ತಗ್ಗಿಸಿ ಕೆಳಮುಖವಾಗಿ ನೋಡಿದಾಗ ಮೊಳೆ ಪಿಸ್ತೂಲಿನಿಂದ ಆಕಸ್ಮಿಕವಾಗಿ ಚಿಮ್ಮಿದ ಆ ಹೆಮ್ಮೊಳೆಯು ಮೇಲ್ಭಾಗ ತನ್ನ ಜೊತೆಯಲ್ಲಿಯೇ ಆತನ ಟೀ ಶರ್ಟಿನ ಬಹುಭಾಗವನ್ನು ಆತನ ದೇಹದೊಳಗೆ ಎಳೆದಿತ್ತು. ಮೀಸೆಯುಳ್ಳ, ಮಾಟವಾಗಿ ಕೆತ್ತಿದಂತಿರುವ ಆತನ ಮುಖ ನೋವಿನಿಂದ ಕಿವುಚಿಕೊಂಡಿತು. "ಯಾರೋ ರೈಲ್ವೆ ಸ್ಲೀಪರ್‌ಅನ್ನು ಆತನ ಎದೆಯ ಮೂಲಕ ದಮ್ಮಸ್ಸಿನಿಂದ ಗಟ್ಟಿಸಿದಂತೆ ಆಯಿತು"– ಎಂದು ಅವನಿಗೆ ಅನ್ನಿಸಿತು.

ಉಸಿರಿಗಾಗಿ ಬಾಯಿಬಿಡುತ್ತ ಸ್ಪಾಲ್‌ಡಿಂಗನು ತನ್ನ ಎದೆಗೆ ನಾಟಿದ್ದ ಮೊಳೆಯನ್ನು ಕಿತ್ತುಹಾಕಲು ಪ್ರಯತ್ನಿಸುತ್ತ ತನ್ನ ಶರ್ಟಿನತ್ತ ಬಲವಾಗಿ ಎಳೆದನು. ಆಗ ಶರ್ಟು ಹರಿಯಿತೇ ವಿನಾ ಎದೆಗೆ ನಾಟಿದ ಮೊಳೆ ಒಂದಿಷ್ಟೂ ಅಲುಗಲಿಲ್ಲ. ಆಗ ಕೋಪದಿಂದ ಕೆರಳಿದ ಆತನು ಹೂತು ಹೋದ ಮೊಳೆಗಳನ್ನು ಹೊರಗೆಳೆಯಲು ಬಳಸುವ ಬಾಗಿದ ಕೊಕ್ಕೆಯುಳ್ಳ "ಕ್ಯಾಟ್ಸ್–ಪಾ" ಎಂಬ ಸಾಧನವನ್ನು ಎತ್ತಿಕೊಳ್ಳಲು ಅದರೆಡೆಗೆ ತೆವಳಿದನು.

"ನಿಲ್ಲು!" ಏಣಿಯಿಂದ ಕೆಳಗಿಳಿಯುತ್ತಿದ್ದ ಮ್ಯಾಕ್‌ಮಾಸ್ಟರ್ ಅರಚಿದನು. ಅವನಿಗೆ ದೇಹದೊಳಗೆ ನೆಟ್ಟಿರುವ ಯಾವುದೇ ವಸ್ತುವನ್ನು ಎಳೆಯಲು ಹೋಗಬೇಡಿ" ಎಂಬ ಪ್ರಥಮಚಿಕಿತ್ಸೆಯ ಪ್ರಧಾನ ನಿಯಮವೊಂದು ಜ್ಞಾಪಕಕ್ಕೆ ಬಂತು. ಸ್ಪಾಲ್‌ಡಿಂಗನ ಎದೆಯಲ್ಲಿ ಏನೇ ನೆಟ್ಟಿರಲಿ, ಈ ಆತನ ಎದೆಯನ್ನು ಹೊಕ್ಕ ಮೊಳೆಯು ಆ ಬಿರುಕಿನೊಳಗೆ ಬೆರಳಿನಂತೆ ತೂರಿಕೊಂಡಿದೆ ಎಂಬುದು ಮ್ಯಾಕ್‌ಮಾಸ್ಟರನಿಗೆ ತಿಳಿಯಿತು. ಶಸ್ತ್ರ ಚಿಕಿತ್ಸೆಯ ಮೂಲಕ ಆ ಮೊಳೆಯನ್ನು ತೆಗೆಯದಿದ್ದರೆ ಕೆಲವೇ ಮಿನಿಟುಗಳಲ್ಲಿ ರಕ್ತಸ್ರಾವವಾಗಿ ಸ್ಪಾಲ್‌ಡಿಂಗನು ಸಾಯುವ ಸಂಭವ ಹೆಚ್ಚಾಗಿದೆ ಎಂಬ ಸಂಗತಿ ಅವನಿಗೆ ತಿಳಿಯಿತು.

"ನಾವು ಆಸ್ಪತ್ರೆಗೆ ಹೋಗಿ ಬರುತ್ತೇವೆ" ಎಂದು ಅತ್ಯಂತ ಶಾಂತವಾಗಿರುವಂತೆ ಪ್ರಯತ್ನಿಸಿ ತನ್ನ ಮೇಲಧಿಕಾರಿಗೆ ತಿಳಿಸಿದ ಮ್ಯಾಕ್‌ಮಾಸ್ಟರನು ವೇಗದಿಂದ ಹೋಗುತ್ತಿದ್ದ ಒಂದು ಟ್ರಕನ್ನು ನಿಲ್ಲಿಸಿ ಸ್ಪಾಲ್‌ಡಿಂಗನನ್ನು ಅದರ ಕಡೆಗೆ ಕರೆದುಕೊಂಡು ಹೋದನು.

ಬದುಕಿಗಾಗಿ ಹೋರಾಡುತ್ತ ಸ್ಪಾಲ್‌ಡಿಂಗನು ಟ್ರಕ್ಕಿನ ಮುಂಭಾಗದ ಹಲಗೆಯನ್ನು ಗಟ್ಟಿಯಾಗಿ ಹಿಡಿದುಕೊಂಡನು. ಆತನ ಕಣ್ಣುಗಳನ್ನು ಕತ್ತಲು ಕವಿಯತೊಡಗಿತ್ತು ಮತ್ತು ಆಘಾತದ ಪ್ರಮಾಣವನ್ನು ತಗ್ಗಿಸಲು ಆತನು ತಲೆಯನ್ನು ತಗ್ಗಿಸಿದನು. ಹಿಂದೆ ಜಾರುಮರ ಹಾಕಿ ಫ್ರೀಸ್ಟೈಲಿನಲ್ಲಿ ಜಾರುವುದರಲ್ಲಿ ನಿಪುಣನೆನ್ನಿಸಿದ್ದ ಸ್ಪಾಲ್‌ಡಿಂಗನಿಗೆ ತನ್ನ ಎದೆಗೆ ಏನು ನಾಟಿದೆ ಎಂಬ ವಿಧಿಯ ಅಣಕ ಅರ್ಥವಾಗಿತ್ತು. "ನಾನು ತಮಾಷೆಗೆಂದು ಎಂತೆಂತಹ ಗಂಡಾಂತರಕಾರೀ ಕಾರ್ಯಗಳನ್ನು ಲೀಲಾಜಾಲವಾಗಿ ನಿರ್ವಹಿಸಿದ್ದೇನೆ. ಅಂಥ ನಾನು ಇಂದು ಒಂದು ಸಣ್ಣ ಕೆಲಸದಲ್ಲಿ ನಡೆದ ಅಚಾತುರ್ಯದಿಂದ ಸಾಯುತ್ತಿದ್ದೇನೆಯೇ" ಎಂದು ಅನ್ನಿಸಿ ಸ್ಪಾಲ್‌ಡಿಂಗ್ ನಿರುತ್ಸಾಹಗೊಂಡನು.

ಸ್ಪಾಲ್‌ಡಿಂಗ್ ತನ್ನ ೧೫ ವರ್ಷಗಳ ವಯಸ್ಸಿನಲ್ಲಿಯೇ ಹಲವಾರು ಕರಾಮತ್ತುಗಳನ್ನು ಮಾಡಿ ತೋರಿಸಿದ್ದನು. ಜಾರುಮರ ಹಾಕಿ ಹಿಮದ ನೀರ್ಗಲ್ಲಿನ ಮೇಲೆ ಸಲೀಸಾಗಿ ಜಾರಿಕೊಂಡ ಅನಂತರ ಹಿಮ್ಮುಖವಾಗಿ ಎರಡೆರಡು ಡೊಂಬರ ಲಾಗಗಳನ್ನು ಹಾಕುತ್ತಿದ್ದನು. ಒಂದು ಚಲನಚಿತ್ರಕ್ಕಾಗಿ ಒಮ್ಮೆ ೫೦ ಡಿಗ್ರಿ ಇಳಿಜಾರನ್ನು ಜಾರುವ ಸ್ಪರ್ಧೆಯಲ್ಲಿ ಸಲೀಸಾಗಿ ಭಾಗ ವಹಿಸಿ ಒಂಬತ್ತು ಮೀಟರು ಎತ್ತರದ ಕಡಿದಾದ ಬಂಡೆಯನ್ನು ಹತ್ತುವುದರಲ್ಲಿ ಚತುರನೆನ್ನಿಸಿದ್ದನು. ಚಲಿಸುತ್ತಿರುವ ರೈಲಿನ ಮೇಲಿನಿಂದ ಕರಾರುವಾಕ್ಕಾಗಿ ಹಿಂದಕ್ಕೆ ಎರಡೆರಡು ಪಲ್ಟಿ ಹೊಡೆದು ರೈಲ್ವೆ ಹಳಿಗಳ ಆಚೆಯ ಪಕ್ಕದಲ್ಲಿ ಸುರಕ್ಷಿತವಾಗಿ ಹೋಗಿ ನಿಂತು ಶಹಭಾಷ್ ಎನ್ನಿಸಿಕೊಂಡಿದ್ದನು. ಜಾರು ಬಂಡೆಯ ಮೇಲೆ ಜಾರುವ ಅದ್ಭುತ ಪ್ರದರ್ಶನದಲ್ಲಿ ನಿಷ್ಣಾತರಾಗಿದ್ದ ಮೂವರು ಈ ಕರಾಮತ್ತಿಗಾಗಿ ಪ್ರಯತ್ನಿಸುತ್ತಿದ್ದಾಗ ಅವನ ಕಣ್ಣ ಮುಂದೆಯೇ ಸತ್ತು ಬಿದಿದ್ದರು.

ಹೀಗೆ ಈವರೆಗೆ ತಾನು ನಡೆಸಿದ ಹಲವಾರು ಅಪಾಯಕಾರೀ ಕರಾಮತ್ತುಗಳು, ತಾನು ಲೀಲಾಜಾಲವಾಗಿ ಅವುಗಳನ್ನು ನಿರ್ವಹಿಸಿದ್ದ ರೀತಿ–ಇವುಗಳೆಲ್ಲ ಸ್ಪಾಲ್‌ಡಿಂಗ್‌ನ ನೆನಪಿಗೆ ಬಂದುವು. ತಲೆ ಸುತ್ತತೊಡಗಿತು, ಕಣ್ಣು ಮಂಜಾಗತೊಡಗಿತು. ಆದರೆ ಈ ಒಂದು ಅಪಾಯವನ್ನು ಎದುರಿಸಲಾರದೆ ನಾನು ಕುಣಿಯಬೇಕಾಗುತ್ತದೋ ಏನೋ ಎಂದು ಅವನು ಮಮ್ಮಲ ಮರುಗಿದನು.

ಬೀದಿಯಲ್ಲಿ ಟ್ರಕ್ ಸರಿದುಹೋಗುತ್ತಿತ್ತು. ಟ್ರಕ್ಕಿನ ಹೊಳಪು-ದೀಪಗಳು ಮಿಣುಗುಟ್ಟುತ್ತಿದ್ದುವು. ವ್ಯಾತ್ ಮಾಸ್ಟರ್ ಒಂದು ಕೈ ಹಾರ್ನಿನ ಮೇಲೆ ಇತ್ತು. ಟ್ರಕ್ ಕೆಳಮುಖವಾಗಿ ಪರ್ವತ ಮಾರ್ಗಗಳಿಂದ ವೇಗವಾಗಿ ಇಳಿಯತೊಡಗಿತು. "ನೀನು ಬೇಗ ಸರಿಹೋಗುತ್ತಿ" ಧೈರ್ಯವಾಗಿರು ಎಂದು ಮಿತ್ರ ಸ್ಪಾಲ್‌ಡಿಂಗನಿಗೆ ಧೈರ್ಯ ತುಂಬತೊಡಗಿದ. "ಸ್ವಲ್ಪ ಅಲ್ಲಿ ಒರಗಿ ನಿಂತುಕೋ ಎಂದು ಮಿತ್ರನನ್ನು ಸಮಜಾಯಿಸಿದನು.

ಸ್ಪಾಲ್‌ಡಿಂಗನ ಕಣ್ಣುಗಳು ಎಳೆಯತೊಡಗಿದುವು ಮತ್ತು ಅವನು ಕ್ರಮೇಣ ಪ್ರಜ್ಞಾಶೂನ್ಯನಾಗತೊಡಗಿದನು. "ವ್ಯೈತ್ ನಿನ್ನನ್ನ ನನ್ನ ತೊಡೆಯ ಮೇಲೆ ಸಾಯಲು ಬಿಡುವುದಿಲ್ಲ" ಎಂದ ವ್ಯಾತ್ ಮಾಸ್ಟರ್

ಸ್ವಲ್ಪ ಬಾಗಿ ಕೈಹಿಡಿದುಕೋ, ಇನ್ನೇನು ನಾವು ಆಸ್ಪತ್ರೆಗೆ ಬಂದೇಬಿಟ್ಟೆವು ಎಂದು ಮ್ಯಾಕ್ ಮಾಸ್ಟರ್ ದುಃಖದಿಂದ ಮಿತ್ರನಿಗೆ ಧೈರ್ಯ ತುಂಬಿದನು.

ಸ್ಪಾಲ್‌ಡಿಂಗನು ಪ್ರಜ್ಞಾಶೂನ್ಯನಾಗದಿರಲು ಹೆಣಗಾಡುತ್ತಿದ್ದಾಗ ೨೮ ವರ್ಷದ ತನ್ನ ಸ್ನೇಹಿತೆ ಜೂಡಿ ಸ್ಕಾರ್‌ಳ ನೆನಪಾಗತೊಡಗಿತು. ಅವನು ಕಳೆದ ವರ್ಷವಷ್ಟೇ ಕೆಂಚು ಕೂದಲಿನ ಸಣ್ಣ ಆಕಾರದ ಸುಂದರ ಜೋಡಿಯನ್ನು ಆಕಸ್ಮಿಕವಾಗಿ ಸಂಧಿಸಿದ್ದನು ಮತ್ತು ಪ್ರಥಮ ನೋಟದಲ್ಲಿಯೆ ಆಕೆಯಲ್ಲಿ ಅನುರಕ್ತನಾಗಿದ್ದನು. ಕೆಲವೇ ತಿಂಗಳ ಅನಂತರ ತನ್ನನ್ನ ಮದುವೆಯಾಗುವಂತೆ ಆತನು ಜೂಡಿಯನ್ನು ಕೇಳಿದ್ದನು. ಆದರೆ, ಆಕೆ ಆಗುವುದಿಲ್ಲವೆಂದು ಖಂಡಿತವಾಗಿ ಹೇಳಿದ್ದಳು. ಆಕೆ ಆತನನ್ನು ಪ್ರೀತಿಸುವುದಿಲ್ಲವೆಂದೇನಲ್ಲ-ಆದರೆ ಮದುವೆ ತನಗೆ ಹೇಳಿಸಿದ್ದಲ್ಲ ಎಂದು ಆಕೆ ಆಗಲೇ ನಿರ್ಧರಿಸಿದ್ದಳು. ಎಷ್ಟೋ ಮದುವೆಗಳು ದುಖಾಂತವಾಗಿ ಮುರಿದು ಬೀಳುತಿದ್ದುದನ್ನು ಆಕೆ ಕಂಡಿದ್ದಳು ಹೀಗಾಗಿ ಮದುವೆ ಎಂದರೆ ಆಕೆಗೆ ಭಯಉಂಟಾಗಿತ್ತು.

"ನನ್ನನ್ನ ತುರ್ತು ಚಿಕಿತ್ಸಾ ವಿಭಾಗಕ್ಕೆ ಸೇರಿಸಿದ ಬಳಿಕ ದಯವಿಟ್ಟು ಜೂಡಿಗೆ ನನಗೆ ಉಂಟಾದ ಈ ಅಘಘಾತದ ಬಗ್ಗೆ ತಿಳಿಸು ಆಸ್ಪತ್ರೆಗೆ ಬಂದು ನನ್ನನ್ನು ನೋಡಬೇಕೆಂದು ಹೇಳು, ಏಕೆಂದರೆ, ನಾನು ಇನ್ನು ಮುಂದೆ ಆಕೆಯನ್ನು ನೋಡಲಾರೆನೇನೋ ಎಂದು ನನಗೆ ಅನ್ನಿಸುತ್ತದೆ" ಎಂದು ಸ್ಪಾಲ್‌ಡಿಂಗ್ ಮೇಲುಸಿರು ಬಿಡುತ್ತಾ ಮ್ಯಾಕ್ ಮಾಸ್ಟರನಲ್ಲಿ ಅಂಗಲಾಚಿದನು.

ಬೆಳಿಗ್ಗೆ ೧೧ ಘಂಟೆಯಾದಕೂಡಲೇ ಟೀಹಾಯ್ ಅರಣ್ಯದ ಆಸ್ಪತ್ರೆಯಲ್ಲಿನ ತುರ್ತು ಚಿಕಿತ್ಸಾ ವಿಭಾಗದ ದಾದಿಯಾಗಿದ್ದ ಜೂಡಿ ಎರ್‌ಹಾರ್ಟ್‌ಳಿಗೆ ಆ್ಯಂಬುಲೆನ್ಸ್‌ಗಾಗಿಯೆ ಮೀಸಲಾಗಿದ್ದ ಆಸ್ಪತ್ರೆಯ ಮುಂಭಾಗದಲ್ಲಿ ಒಂದು ಟ್ರಕ್ ವೇಗವಾಗಿ ಬಂದು ನಿಂತ ಸದ್ದಾಯಿತು. ಕೂಡಲೆ ಎರ್‌ಹಾರ್ಟ್ ಉಳಿದ ಸಿಬ್ಬಂದಿಯವರೊಡನೆ ಹೊರಗೆ ಓಡಿ ಬಂದಳು.

"ನನ್ನ ಸ್ನೇಹಿತ ಇಲ್ಲಿ ಸಾಯುತ್ತಿದ್ದಾನೆ, ಆತನಿಗೆ ತುರ್ತುಚಿಕಿತ್ಸೆ ಆಗಬೇಕಾಗಿದೆ" ಎಂದು ಮ್ಯಾಕ್ ಮಾಸ್ಟರ್ ಟ್ರಕ್ಕಿನ ಪ್ಯಾಸೆಂಜರ್ ಸೀಟಿನ ಮೇಲೆ ಕುಸಿದುಬಿದ್ದ ಮಿತ್ರನತ್ತ ಕೈತೋರಿಸಿದನು. ಸ್ಪಾಲ್‌ಡಿಂಗನ ಮುಖದಿಂದ ಬೆವರು ಸುರಿಯುತ್ತಿತ್ತು, ಬಟ್ಟೆತೊಯ್ದಿತ್ತು, ಆಮ್ಲಜನಕದ ಅಭಾವದಿಂದ ತುಟಿಗಳು ನೀಲಿಬಣ್ಣಕ್ಕೆ ತಿರುಗಿದ್ದುವು.

ಕೂಡಲೇ ಆಸ್ಪತ್ರೆಯ ಸಿಬ್ಬಂದಿಯವರು ಸ್ಪಾಲ್‌ಡಿಂಗನನ್ನು ತುರ್ತು ಚಿಕಿತ್ಸಾ ವಿಭಾಗಕ್ಕೆ ಕರೆದೊಯ್ದರು. ತುರ್ತು ಚಿಕಿತ್ಸಾ ವಿಭಾಗದ ವೈದ್ಯರಾಗಿದ್ದ ಎಡ್ವರ್ಡ್ ಹೆನೆವೆಲ್ಡ್ ಅವರಿಗೆ ಸ್ಪಾಲ್‌ಡಿಂಗಗೆ ಎದೆಯೊಳಗೆ ಮೊಳೆಯೊಂದು ಗಟ್ಟಿಯಾಗಿ ನಾಟಿಕೊಂಡಿದೆ ಎಂದು ಅರಿವಾಯಿತು, ದುಃಖದಿಂದ ಮುಖ ತಿರುಗಿಸಿದನು ಕತ್ತಿನಬಳಿಯ ಅಪಧಮನಿಯನ್ನು ಒತ್ತಿಹಿಡಿದು ಪರೀಕ್ಷಿಸಿದಾಗ ಕ್ಷೀಣವಾದ ನಾಡಿಮಿಡಿತ ಅನುಭವಕ್ಕೆ ಬಂತು ರೋಗಿಯ ಬಿಳಿಚಿಕೊಂಡ ಮತ್ತು ಬೆವತ ಮುಖ ಮತ್ತು ಕ್ಷೀಣಗೊಳ್ಳುತ್ತಿರುವ ನಾಡಿಮಿಡಿತ, ಮುಖಲಕ್ಷಣಗಳು,

ಭಯಂಕರ ಅಪಘಾತದ ತೀಕ್ಷ್ಣತೆಯನ್ನು ಸಾರುತ್ತಿದ್ದುವು.

ಗಾಯಾಳುಗಳ ಶುಶ್ರೂಷಾ ತಂಡದವರು ಸ್ಪಾಲ್‌ಡಿಂಗನ ಬಟ್ಟೆಗಳನ್ನು ಕತ್ತರಿಸಿದರು. ಅವನ ತೋಳುಗಳೊಳಗೆ ಇಂಟ್ರಾ-ವೀನಸ್ ಟ್ಯೂಬುಗಳನ್ನು ಸೇರಿಸಿದರು ಮತ್ತು ಅವನ ಮೂಗು ಮತ್ತು ಬಾಯಿಯ ಮೇಲೆ ಆಮ್ಲಜನಕದ ಮೊಗಕಾಪನ್ನು ಹಾಕಿದರು. ಸೋನೋಗ್ರಾಮು ಮತ್ತು ಕ್ಷ-ಕಿರಣ ಪರೀಕ್ಷೆಗಳನ್ನು ನಡೆಸಿದಾಗ ಡಾ|| ಹೆನೆವೆಲ್ಡ್ ಅವರು ಏನೆಂದು ಹೆದರಿದ್ದರೋ ಅದನ್ನೇ ಸ್ಥಿರೀಕರಿಸಿದುವು. ಅಂದರೆ ಮೊಳೆಯು ನೇರವಾಗಿ ಸ್ಪಾಲ್‌ಡಿಂಗ್ ಅವರ ಎದೆಯನ್ನೇ ಹೊಕ್ಕಿತ್ತು, ಅದರಿಂದಾಗಿ ಮೊಳೆಯು ನಾಟಿಕೊಂಡ ಭಾಗ ಮತ್ತು ಅದರ ಸುತ್ತಲಿನ ಪೆರಿಕಾರ್ಡಿಯಂ ಪಟಲದ ನಡುವಿನ ಖಾಲಿ ಭಾಗದಲ್ಲಿ ರಕ್ತವು ತೊಟ್ಟಿಕ್ಕುತ್ತಿತ್ತು. ಪ್ರತಿಯೊಂದು ಎದೆ ಬಡಿತದ ಕಾಲದಲ್ಲಿ ಹೆಚ್ಚು ಹೆಚ್ಚು ರಕ್ತವು ನಡುವಿನ ಈ ತೆರಪಿನಿಂದ ಒಸರುತ್ತಿತ್ತು. ವಾಸ್ತವವಾಗಿ ಪೆರಿಕಾರ್ಡಿಯಮ್‌ನಲ್ಲಿನ ಹೆಚ್ಚುತ್ತಿದ್ದ ರಕ್ತದ ಒತ್ತಡವು ಸ್ಪಾಲ್‌ಡಿಂಗನ ಹೃದಯವನ್ನೇ ಅಮುಕಿಬಿಡುತ್ತಿತ್ತು.

ಟೀಹಾಯ್ ಅರಣ್ಯದಲ್ಲಿ ೭೨ ಹಾಸಿಗೆಗಳನ್ನೊಳಗೊಂಡ ಆ ಆಸ್ಪತ್ರೆಯಲ್ಲಿ ಅದರ ಗಾತ್ರಕ್ಕಿಂತ ಮಿಗಿಲಾದ ತುರ್ತುಚಿಕಿತ್ಸಾ ವಿಭಾಗವಿತ್ತು. ಆದರೂ ಅದರಲ್ಲಿ ಹೃದಯ ಚಿಕಿತ್ಸೆಗೆ ಬೇಕಾದ ಸಾಧನೋಪಕರಣಗಳು ಇರಲಿಲ್ಲ. ಸ್ಪಾಲ್‌ಡಿಂಗನು ಹೊಂದಿದಂತಹ ರೀತಿಯಲ್ಲಿ ಅಪಘಾತಕ್ಕೊಳಗಾದ ಗಾಯಾಳುಗಳನ್ನು ಅಲ್ಲಿಂದ ೫೫ ಕಿಲೋಮೀಟರುಗಳಷ್ಟು ದೂರದಲ್ಲಿರುವ ಗಾಯಾಳು ಚಿಕಿತ್ಸಾ ಕೇಂದ್ರಕ್ಕೆ ಕೊಂಡೊಯ್ಯಲಾಗುತ್ತಿತ್ತು. ಸ್ಪಾಲ್‌ಡಿಂಗನ ಹೃದಯಕ್ಕೆ ಮೊಳೆ ನಾಟಿಕೊಂಡಿದ್ದ ರೀತಿಯನ್ನು ಪರೀಕ್ಷಿಸಿದ ಡಾ|| ಹೆನೆವೆಲ್ಡ್ ಅವರಿಗೆ ಈ ಆಸಾಮಿ ಬಚಾವಾಗಲಾರ ಎಂದು ಅನ್ನಿಸಿತು.

ಆದರೂ ತಮ್ಮ ಪ್ರಯತ್ನವನ್ನು ಮುಂದುವರಿಸಲು ಹೆನೆವೆಲ್ಡ್ ಅವರು, "ಬೇಗ ಬೂನೆಯವರನ್ನು ಕರೆಯಿಡಿ, ತುರ್ತು ಚಿಕಿತ್ಸೆ ನಡೆಯಬೇಕಾಗಿದೆ" ಎಂದು ಹೇಳಿದರು. "ನಾವು ಆದಷ್ಟು ಬೇಗನೆ ಈ ರೋಗಿಯ ಹೃದಯ ತೆರೆದು ಚುಚ್ಚಿದ ಮೊಳೆಯನ್ನು ತೆಗೆದುಹಾಕದಿದ್ದರೆ ಈ ಆಸಾಮಿಯು ಜೀವವನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ ಎಂದು ಡಾ|| ಹೆನೆವೆಲ್ಡ್ ಹೇಳಿದರು.

ಹರ್ನಿಯ ಚಿಕಿತ್ಸೆಯೊಂದರಲ್ಲಿ ನಡೆಯಬೇಕಾಗಿದ್ದ ಶಸ್ತ್ರಚಿಕಿತ್ಸೆಯಲ್ಲಿ ಸಹಾಯ ಮಾಡಿದ ಡಾ|| ಬೂನೆಯವರು ವೈದ್ಯರ ವಿರಾಮಕೊಠಡಿಯಲ್ಲಿನ ಮೊಗಸಾಲೆಯ ಆಚೆಕಡೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಗಡಧಾರಿಯಾದ ೧೯೫ ಸೆಂಟಿಮೀಟರ್ ಉತ್ತರದ ಆ ಶಸ್ತ್ರ ಚಿಕಿತ್ಸಕರು ಅಂದು ನೀಲಿ ಬಣ್ಣದ ಜೀನ್ಸ್ ಮತ್ತು ಕೌಬಾಯ್ ಬೂಟುಗಳನ್ನು ಧರಿಸಿದ್ದರು ಹಾಗೂ ಆ ಆಸ್ಪತ್ರೆ ಮತ್ತು ನಗರದಲ್ಲೆಲ್ಲಾ ಜನಪ್ರಿಯ ವೈದ್ಯರಾಗಿದ್ದರು.

"ಡಾ|| ಬೂನೆ ಇ.ಆರ್. ತಕ್ಷಣ ಬನ್ನಿ. ತುರ್ತು ಚಿಕಿತ್ಸೆಯೊಂದು ನಡೆಯಬೇಕಾಗಿರುವುದರಿಂದ ದಯವಿಟ್ಟು ಕೂಡಲೇ ತುರ್ತು ಚಿಕಿತ್ಸಾವಿಭಾಗಕ್ಕೆ ಬನ್ನಿ", ಎಂದು

ಧ್ವನಿವರ್ಧಕದಲ್ಲಿ ತಿಳಿಸಲಾಯಿತು. ಅದನ್ನು ಕೇಳಿದೊಡನೆಯೇ ಡಾ|| ಬೂನೆ ಅವರು ನೊಗಸಾಲೆಯ ಆಚೆಗೆ ಹಾರುಗಾಲಿನಿಂದ ಓಡಿದರು ಮತ್ತು ತ್ವರಿತವಾಗಿ ಶಸ್ತ್ರ ಚಿಕಿತ್ಸಾ ವಿಭಾಗವನ್ನು ಪ್ರವೇಶಿಸಿದರು. ಸ್ಪಾಲ್‌ಡಿಂಗನ ಸ್ಟ್ರೆಚರಿನ ಸುತ್ತಲೂ ವೈದ್ಯರು ಮತ್ತು ದಾದಿಯರು ನಿಂತಿದ್ದರು.

ಸ್ಪಾಲ್‌ಡಿಂಗನ ಎಕ್ಸ್‌ರೇ-ಚಿತ್ರ ಮತ್ತು ಹೃದಯದ ಸೋನೋಗ್ರಾಮ್ ಅನ್ನು ಗಮನಿಸಿನೋಡಿದ ಡಾ|| ಬೂನೆಯವರಿಗೆ ಈಗಾಯಾಳು ಮರಣಾಂತಿಕ ಸ್ಥಿತಿಗೆ ಸಿಕ್ಕಿ ಹಾಕಿಕೊಂಡಿದ್ದಾನೆ ಎಂಬ ಸಂಗತಿ ತಿಳಿಯಿತು. ಈಗ ಸ್ಪಾಲ್‌ಡಿಂಗನಿಗೆ ತುರ್ತಾಗಿ ತೆರೆದ ಹೃದಯ ಚಿಕಿತ್ಸೆಯನ್ನು ನಡೆಸಬೇಕಾಗಿದೆ ಎಂಬ ಸಂಗತಿ ಬೂನೆ ಅವರಿಗೆ ತಕ್ಷಣ ಹೊಳೆಯಿತು. ಡಾ. ಬೂನೆ ಅವರು ೧೬ ವರ್ಷಗಳ ಹಿಂದೆ ಒಂದು ಬಾರಿ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ರೆಸಿಡೆಂಟರಾಗಿದ್ದ ಸಮಯದಲ್ಲಿ ಅಂತಹದ್ದೇ ಒಂದು ಶಸ್ತ್ರ ಚಿಕಿತ್ಸೆಯನ್ನು ನಡೆಸಿದ್ದರು. ಆದರೆ ಟೇಹಾಯ್ ಅರಣ್ಯದ ಈ ಆಸ್ಪತ್ರೆಯಲ್ಲಿ ಈ ಬಗೆಯ ಶಸ್ತ್ರಚಿಕಿತ್ಸೆಗೆ ಅಗತ್ಯವಾದ ಸಾಧನೋಪಕರಣಗಳು ಇರಲಿಲ್ಲ ಎನ್ನುವುದು ಡಾ|| ಬೂನೆಯವರಿಗೆ ಗೊತ್ತಿತ್ತು. ಅದೂ ಅಲ್ಲದೆ ಹೃದಯ-ಶ್ವಾಸಕೋಶ-ಯಂತ್ರೋಪಕರಣ ಮತ್ತು "ಚೆಸ್ಟ್-ಸಾ" ಎಂಬ ಶಸ್ತ್ರಚಿಕಿತ್ಸಕ ಉಪಕರಣವೂ ಅಲ್ಲಿ ಇರಲಿಲ್ಲ.

"ಸ್ಟರ್ನಲ್-ಸಾ" ಎಂಬ ಗರಗಸದಂತಹ ಶಸ್ತ್ರಚಿಕಿತ್ಸಕ ಉಪಕರಣ ಇಲ್ಲದಿರುವುದರಿಂದ ಅವರು ಒಂದು ಹಳೆಯ ಲೆಬೆಸ್ಕೀ— ಚೂರಿಯನ್ನು ಉಪಯೋಗಿಸಬೇಕಾಗಿತ್ತು. ಅದು ೨೫ ಸೆಂಟಿಮಾಟರ್ ಉದ್ದದ ಸ್ಟೇನ್‌ಲೆಸ್ ಸ್ಟೀಲಿನ ಒಂದು ಲಾಳವಿಂಡಿಗೆಯಾಗಿದ್ದು, ಅದಕ್ಕೆ ಒಂದೆಡೆಯಲ್ಲಿ ಒಂದು ಕೈಹಿಡಿಕೆ ಇತ್ತು ಮತ್ತು ಇನ್ನೊಂದೆಡೆಯಲ್ಲಿ ಚೂಪಾದ ಬೆಣೆಯಾಕಾರದ ಒಂದು ರಚನೆಯಿತ್ತು. ಈ ರಚನೆಯ ಒಂದುಭಾಗ ಚಪ್ಪಟೆಯಾಗಿತ್ತು. ಅದನ್ನು ಬೆಣೆಯನ್ನು ಎಲುಬಿನೊಳಗೆ ತೂರಿಸಲು ಒಂದು ದಾಂಡಿನೊಂದಿಗೆ ಚೆನ್ನಾಗಿ ಹೊಡೆಯಬಹುದಾಗಿತ್ತು. ಅಂಗ ವಿಕಾರಗಳನ್ನು ಸರಿಪಡಿಸಲು ಸಂಬಂಧಿಸಿದ ಶಸ್ತ್ರಚಿಕಿತ್ಸೆಯಲ್ಲಿ ಬಳಸುವ ಗರಗಸದಂತಹ ರಚನೆಯುಳ್ಳ ಸಾಧನಕ್ಕಿಂತ ಹಿಂದೆ ಲೆಬೆಸ್ಕಿ ಚಾಕನ್ನು ಒಂದು ಪ್ರಮಾಣಕ ಸಾಧನವನ್ನಾಗಿ ಹೃದಯ ಮತ್ತು ಶ್ವಾಸಕೋಶಗಳವರೆಗೆ ಹೋಗಿ ಎದೆಯ ಎಲುಬುಗಳನ್ನು ಸೀಳಲು ಎದೆಯ ಶಸ್ತ್ರಚಿಕಿತ್ಸಕರು ಬಳಸುತ್ತಿದ್ದರು.

ಅಂಥ ಒಂದು ಶಸ್ತ್ರೋಪಕರಣ ಆಸ್ಪತ್ರೆಯಲ್ಲಿ ಇಲ್ಲ ಎನ್ನುವುದು ಡಾ|| ಬೂನೆ ಅವರಿಗೆ ಎಂದೋ ಗೊತ್ತಿತ್ತು. ಆದರೂ ಇದ್ದಬದ್ಧ ಶಸ್ತ್ರಸಲಕರಣಗಳಿಂದ ಸ್ಪಾಲ್‌ಡಿಂಗರ ಶಸ್ತ್ರಕ್ರಿಯೆ ನಡೆಸಬೇಕೆಂದು ನಿರ್ಧರಿಸಿದ ಡಾ|| ಬೂನೆ ಅವರು ತೆರೆದ–ಹೃದಯ ಶಸ್ತ್ರಚಿಕಿತ್ಸೆಗೆ ಎಲ್ಲವನ್ನೂ ಸಿದ್ಧಪಡಿಸಿ" ಎಂದು ಬೂನೆ ನಿರ್ದೇಶಿಸಿದರು ಅಲ್ಲಿ ನಮ್ಮಲ್ಲಿ ಸಾಮಾನ್ಯವಾಗಿರುವ ಎಲ್ಲ ಶಸ್ತ್ರಸಲಕರಣೆಗಳನ್ನು ಮತ್ತು ಅದರ ಜೊತೆಗೆ ಲೆಬೆಸ್ಕಿ–ಚಾಕು, ಒಂದು ಚೆಸ್ಟ್-ಜ್ಯಾಕ್ ಮತ್ತು ರಕ್ತದ ಮರು, ಆವರ್ತಕ ಉಪಕರಣ, ಇವುಗಳೆಲ್ಲ ಈಗ ಬೇಕು ಎಂದು ತಿಳಿಸಿದರು.

ಅಷ್ಟರಲ್ಲಿ ಟ್ರೇವಿಸ್ ಮ್ಯಾಕ್‌ಮಾಸ್ಟರ್ ಜೂಡಿಸ್ಕಾರ್‌ಳ ಜೊತೆಯಲ್ಲಿ ತುರ್ತು ಚಿಕಿತ್ಸಾ ವಿಭಾಗದೊಳಗೆ ಧಾವಿಸಿದರು. ಸ್ಪಾಲ್‌ಡಿಂಗನನ್ನು ನೋಡಲು ಅವಕಾಶ

ನೀಡುವಂತೆ ವಿನಂತಿಸಿಕೊಂಡ ಅನಂತರ ಜೂಡಿ ಸ್ಕಾರಳಿಗೆ ಅವನಿಗೆ ಮೊಳೆ ನಾಟಿ ಪರೀಕ್ಷೆ ಮಾಡಿದ ಭಾಗವನ್ನು ತೋರಿಸಲಾಯಿತು, ಆಕೆಯನ್ನು ಗುರುತಿಸಿದ ಗಾಯಾಳು ಸ್ಪಾಲ್ಡಿಂಗ್ ತನ್ನ ಮುಖದ ಮೇಲಿನ ಆಮ್ಲಜನಕದ ಮೊಗಕಾಪನ್ನು ಮೇಲೆತ್ತಿ "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದನು.

ಒಬ್ಬ ದಾದಿಯು ಸ್ಕಾರಳನ್ನ ಅಲ್ಲಿಂದ ಆಚೆಗೆ ಕರೆದೊಯ್ದಳು. "ನೀನು ಇಲ್ಲಿಂದ ಹೊರಡಬೇಕು" ಎಂದೇ ಹೇಳಿದ ಆಕೆ ಮುಂದೆ ನಡೆಯಲಿರುವ ದುರಂತವನ್ನು ಸಹಿಸಿಕೊಳ್ಳಬಲ್ಲ ಧೈರ್ಯವನ್ನು ಆಕೆಯಲ್ಲಿ ತುಂಬುವ ಸಲುವಾಗಿ "ನೀನು ಅವನಿಗೆ ಅಂತಿಮ ವಿದಾಯ ಹೇಳಬೇಕಾಗುತ್ತದೆಯೇನೋ ಅವನು ನಿನಗೆ ವಿದಾಯ ಹೇಳಬೇಕಾಗುತ್ತದೆಯೇನೋ. ಅವನು ನಿನಗೆ ವಿದಾಯ ಹೇಳುವ ಸ್ಥಿತಿಯಲ್ಲಿ ಇಲ್ಲ" ಎಂದು ಸಮಜಾಯಿಸಿದಳು.

ಡಾ. ಬೂನೆ ಮತ್ತು ಈ ಮೊದಲು ಹರ್ನಿಯ ಶಸ್ತ್ರ ಚಿಕಿತ್ಸೆ ನಡೆಸಿದ ಮತ್ತು ಬೂನೆಯು ನೆರವು ಪಡೆದ ಪ್ರಮುಖ ಶಸ್ತ್ರ ವೈದ್ಯರಾಗಿದ್ದ ಡಾ. ಜಸಿಂತೋ "ಬುಚ್" ಓರಾಜಕೋ ಅವರು ಶಸ್ತ್ರ ಚಿಕಿತ್ಸೆ ನಡೆಸಲು ಈಗಾಗಲೇ ಸಿದ್ಧವಾಗಿದ್ದರು ಮತ್ತು ಮೊಳೆನಾಟದ ಭಾಗವನ್ನು ಉಜ್ಜ ತೊಡಗಿದರು. ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ದಾದಿಯರು ಸ್ಪಾಲ್ಡಿಂಗನಿಗೆ ಪ್ರಜ್ಞೆ ಮರುಕಳಿಸುವವರೆಗೂ ಅವನನ್ನು ಉರುಳಾಡಿಸಿದರು. ಅವರು ಸಾಧ್ಯವಾದಷ್ಟು ಬೇಗ ಬೇಗನೆ ತಮ್ಮ ಕೆಲಸ ಮಾಡಿದರು, ತಮ್ಮ ಕಣ್ಮುಂದೆಯೇ ಒಬ್ಬ ರೋಗಿ ಸಾಯುತ್ತಿರುವುದು ಅವರಿಗೆ ಕಾಣಿಸುತ್ತಿತ್ತು.

ಸ್ಪಾಲ್ಡಿಂಗ್‌ನು ಸೂಜನ್ನೇ ಅಜೇಯು ಎಂಬ ದಾದಿಯನ್ನು ನೋಡಿ. "ನಾನು ಸಾಯುತ್ತಿದ್ದೇನೆಯೋ?" ಎಂದು ಕೇಳಿದನು.

"ಇಲ್ಲ ಇಲ್ಲ, ನಾವು ನಿನ್ನನ್ನು ಸಾಯಲು ಬಿಟ್ಟರೆ ತಾನೇ? ಎಂದು ಹೇಳುತ್ತ "ನಾವಂತೂ ನಿನ್ನನ್ನು ಸಾವಿನಿಂದ ಪಾರು ಮಾಡುವ ಗಟ್ಟಿ ನಿರ್ಧಾರವನ್ನು ಕೈಗೊಂಡಿರುವಂಥ ತಂಡದವರು" ಎಂದು ಆತನಿಗೆ ಧೈರ್ಯ ತುಂಬುವಂತಹ ನಸುನಗೆಯನ್ನು ಬೀರಿದಳು.

ಬೂನೆ ಅವರು ಅವನಿಗೆ ಅನಿಸ್ತೇಶಿಯವನ್ನು ಕೊಡುವ ಮುಂಚೆ ಅಂತಿಮ ಕ್ಷಣದ ವರೆಗೆ ತಡಮಾಡಬಯಸಿದ್ದರು. ಅವರು ರೋಗಿಯ ರಕ್ತದ ಒತ್ತಡವು ಅಪಾಯಕಾರಿಯಾಗುವಷ್ಟು ಹೆಚ್ಚಲು ಬಿಡುತ್ತಿರಲಿಲ್ಲ.

ಈಗ ಶಸ್ತ್ರ ವೈದ್ಯದ ಚೂರಿಯನ್ನು ಗೊತ್ತಾದ ಭಂಗಿಯಲ್ಲಿ ಅಳವಡಿಸಲಾಯಿತು. ಅನಿಸ್ತೇಶಿಯ ಕೊಡುವ ವೈದ್ಯರನ್ನು ನೋಡಿ ತಲೆಯಾಡಿಸಿದರು. ಆಗ ಹೆದರಿದ ಸ್ಪಾಲ್ಡಿಂಗನು "ನೀವು ಮೊದಲು ನನ್ನನ್ನು ಹೊರದೂಡಲಿದ್ದೀರಾ?" ಎಂದು ಕೇಳಿದನು.

"ಅವನನ್ನು ಮುಗಿಸಿಬಿಡು" ಎಂದು ಆತನ ಎದೆಯ ಮೇಲೆ ಕತ್ತರಿಸಲಾರಂಭಿಸಿದೊಡನೆ ಅನಿಸ್ತೇಶಿಯ ತಜ್ಞನಿಗೆ ಹೇಳಿದನು. ತನ್ನ ಎದೆಯ ಎಲುಬಿನ ಮಧ್ಯಭಾಗದಲ್ಲಿ ಒಂದು ಚೂಪಾದ ಸಾಧನ ಇರಿಯಿತೆಂಬಂತೆ ಆತನಿಗೆ ಅನ್ನಿಸಿತು. ಅಷ್ಟರಲ್ಲಿ ಗಾಯಾಳಿನ ಮೇಲೆ ಅನಿಸ್ತೇಶಿಯ

ತನ್ನ ಪ್ರಭಾವನ್ನು ಬೀರಿದುದರಿಂದ ಒಂದು ಕಪ್ಪು ತೆರೆಯನ್ನು ಇಳಿ ಬಿಡಲಾಯಿತು. ಆ ವೇಳೆಗೆ ಮೊಳೆಯು ಅವನ ಹೃದಯಕ್ಕೆ ನಾಟಿ ಕೇವಲ ಇಪ್ಪತ್ತು ನಿಮಿಷಗಳು ಮಾತ್ರ ಆಗಿದ್ದುವು.

“ಲೆಬೆಸ್ಕೆ ಚಾಕು” ಎಂದು ಡಾ. ಬೂನ್ ಹೇಳಿದರು. ಅವರ ಹೊರ ಚಾಚಿದ ಕೈಗವುಸು ಧರಿಸಿದ ಕೈಗಳಲ್ಲಿ ಒಬ್ಬ ದಾದಿಯು ಥಳಥಳಿಸುತ್ತಿದ್ದ ಆ ಸಲಕರಣೆಯನ್ನು ಇಟ್ಟಳು. ಬೂನೆ ಅಗಲ್ ಲೆಬೆಸ್ಕೆ ಚಾಕುವಿನ ಚೂಪಾದ ಅಲಗನ್ನು ಸ್ಪಾಲ್ ಡಿಂಗನ ಎಡಯೆಲುಬಿನ ಮೇಲ್ಭಾಗದೊಳಗೆ ತೂರಿಸಿದನು. “ಮುಂದುವರಿಸು” ಎಂದು ಆತ ಆರೋಜ್‌ಕೋವಿಗೆ ಹೇಳಿ “ಢಡಾರನೆ ಅದನ್ನ ತಳ್ಳಿಬಿಡು” ಎಂದನು.

ಆಗ ಓರಾಜಕೋ ಚಾಕುವಿನ ಚೂಪಾದ ಅಲಗನ್ನು ಒಂದು ಚಿಕ್ಕ ಸ್ಟೇನ್‌ಲೆಸ್ ಕೊಡಲಿಯಿಂದ ಬಲವಾಗಿ ಬಡಿದನು. ರೋಗಿಯ ಎದೆಯೆಲುಬಿನಲ್ಲಿ ಚೂಪಾದ ಬೆಣೆಯನ್ನು ಹೋಗಿಸಬೇಕಾದರೆ ಕೆಲವು ಬಲವಾದ ಹೊಡೆತಗಳು ಅಗತ್ಯವೆಂದು ಅವನಿಗೆ ಅನ್ನಿಸಿತ್ತು ಮತ್ತು ಅದನ್ನು ನೀಟಾಗಿ ಎರಡು ಭಾಗವಾಗಿ ಕತ್ತರಿಸಬೇಕೆಂದು ಅವನು ಯೋಚಿಸಿದ್ದನು. ಆದರೆ ಸ್ಪಾಲ್‌ಡಿಂಗನು ಕಲ್ಲಿನಂತೆ ಗಟ್ಟಿಯಾದ ಎಲುಬಿನ ಕ್ರೀಡಾಪಟುವಾಗಿದ್ದ. ಓರಾಜಕೋ ಮತ್ತೆ ಮತ್ತೆ ಅವನ ಮೇಲೆ ಎರಗಿದರೂ ಕೂಡ, ಬೆಣೆಯ ಚೂಪು ಕಿಂಚಿತ್ತಾದರೂ ಅಲುಗಲಿಲ್ಲ. “ಈ ಆಸಾಮಿ ಕಲ್ಲಿನಂತೆ ಬೆಳೆದಿದ್ದಾನೆ” ಎಂದು ಅವನು ಮಣಮಣಿಸಿದನು.

ತೂತಾದ ಮಹಾಪಧಮನಿ : ಇದಕ್ಕೆ ಮುಂದೇನು ಮಾಡಬಹುದೆಂದು ಮುಂಭಾವಿಸಿದ ವೈದ್ಯರು ದೊಡ್ಡದಾದ ಸುತ್ತಿಗೆಯನ್ನೊಳಗೊಂಡಿರುವ ಅಂಗವಿಕಾರಗಳನ್ನ ನೇರ್ಪಡಿಸಬಲ್ಲ ಟ್ರೇಯನ್ನ ಕೊಡುವಂತೆ ದಾದಿಗೆ ತಿಳಿಸಲಾಯಿತು. ಅದನ್ನು ತರಿಸಿಕೊಡಲಾಯಿತು. “ಇದರಿಂದ ಒಮ್ಮೆ ಪ್ರಯತ್ನಿಸಿ ಬುಚ್” ಎಂದು ಹೇಳುತ್ತಾ ೧.೫ ಕಿಲೋ ತೂಕದ ಸುತ್ತಿಗೆಯನ್ನು ವೈದ್ಯರಿಗೆ ನೀಡಿದಳು.

ಈ ಬಾರಿ ಕೇವಲ ಮೂರು ಸಲ ಗುದ್ದಿದೊಡನೆ ಸ್ಪಾಲ್‌ಡಿಂಗನ ಎದೆ–ಎಲುಬು ಸೀಳಿಕೊಂಡು ತೆರೆಯಿತು. ಆಗ ಬೂನೆ ನೆಮ್ಮದಿಯ ಉಸಿರುಬಿಟ್ಟರು. “ಪಕ್ಕೆಲುಬು ಪ್ರತಿಕರ್ಷಕವನ್ನು ಕೊಡಿ” ಎಂದು ಅವರು ಆದೇಶ ನೀಡಿದರು.

ಆಗ ದಾದಿಯು ಒಂದು ಚಿಕ್ಕ ಟಯರ್‌-ಜ್ಯಾಕ್‌ನಂತಹ ಸ್ಟೀಲ್‌ನ ಸಾಧನವನ್ನು ಅವರ ಕೈಗೆ ನೀಡಿದಳು. ಬೂನ್ ಅವರು ನಿಧಾನವಾಗಿ ಆತನ ಎದೆಯನ್ನು ಬಿರುಚಿದನು. ಆಗ ಮೊಳೆಯು ಅದರ ನೆಲೆ ತಪ್ಪಿ ಹೊರ ಬೀಳದಂತೆ ಎಚ್ಚರ ವಹಿಸಿದನು. ಬಳಿಕ ಕೈಗವುಸು ತೊಟ್ಟ ಬೆರಳನ್ನು ಒಳ ತೂರಿಸಿ ಶೋಧಿಸತೊಡಗಿದನು. ಆ ಹೆಮ್ಮೊಳೆಯು ಸ್ಪಾಲ್‌ಡಿಂಗನ ಎದೆಯೆಲುಬಿನ ನಡುಭಾಗವನ್ನು ಛೇದಿಸಿ ಹೊಳಹೊಕ್ಕಿತ್ತು. ಅದು ಬಲ ಭಾಗದ ಶ್ವಾಸಕೋಶಕ್ಕೆ ತೂತು ಮಾಡುವುದಕ್ಕಿಂತ ಮೊದಲು ಎಡಗಡೆಯಲ್ಲಿ ಮೂಳೆ ಬಿಡಿಸಿ ಕೋನರಚನೆಯನ್ನು ಮಾಡಿತ್ತು, ಬಳಿಕ ಅದು ಹೃದಯದ ಬಲಭಾಗದ ಕುಹರದಲ್ಲಿ ನಾಟಿಕೊಂಡಿತ್ತು. ಅಂತಿಮವಾಗಿ ಅದು ಹೃದಯದಿಂದ ದೇಹದ ಇತರ ಭಾಗಗಳಿಗೆ

ಶುದ್ಧ ರಕ್ತವನ್ನು ಕೊಂಡೊಯ್ಯುವ ಮಹಾಪಧಮನಿಯನ್ನು ಹೊಕ್ಕು ತೂತು ಕೊರೆದಿತ್ತು. ಸ್ಪಾಲ್‌ಡಿಂಗನ ಹೃದಯದ ಸುತ್ತಲಿನ ಪೆರಿಕಾರ್ಡಿಯಲ್ ಚೀಲವು ಕಪ್ಪಾದ, ಆಮ್ಲ ಜನಕ-ಕಡಿಮೆಯಾಗಿರುವ ರಕ್ತದೊಂದಿಗೆ ಮೇಲಕ್ಕೇರುತ್ತಿತ್ತು. ಹೃದಯ ಬಡಿತವೂ ಅಷ್ಟೇ ಕ್ಷೀಣವಾಗಿತ್ತು. ಪ್ರತಿಯೊಂದು ಹೃದಯ ಬಡಿತದೊಂದಿಗೆ ಆ ಹೆಮ್ಮೊಳೆಯ ಮರಕಟಗವು ಮರ ವನ್ನು ಕುಕ್ಕುವಂತೆ ಮಹಾಪಧಮನಿ ಯನ್ನು ಛೇದಿಸಿ ಒಳತೂರಿತ್ತು.

ತನ್ನ ರೋಗಿಯು ಇಂತಹ ಗಂಭೀರ ಸ್ಥಿತಿಯಲ್ಲಿಯೂ ಇಷ್ಟು ಹೊತ್ತಿನವರೆಗೂ ಬದುಕಿ ಉಳಿದಿರುವುದನ್ನು ಕಂಡು ಡಾ. ಬಾನೆಟ್‌ರಿಗೆ ಆಶ್ಚರ್ಯವುಂಟಾಯಿತು. ಹೀಗೆ ಗಾಯಗೊಂಡವರು ವಿಲಿಯದಲ್ಲಿ ಒಂದು. ಹೀಗಾದರೂ ಆ ರೋಗಿಗೆ ಅದು ಮಾರಕ ವಾಗಲಿಲ್ಲವಲ್ಲ ಎಂದು ಡಾಕ್ಟರ್ ಬಾನೆಟ್ ದಿಗ್ಭ್ರಮೆಗೊಂಡರು.

ಡಾ. ಬೂನ್ ಅವರು ತಸ್ತ್ರಚಿಕಿತ್ಸೆಯ ಕತ್ತರಿಯನ್ನು ಉಪಯೋಗಿಸಿ ಅತ್ಯಂತ ಜಾಗರೂಕತೆಯಿಂದ ಸ್ಪಾಲ್‌ಲೆಂಡಿಗನ ಹೃದಯದ ಮೇಲೆ ಒತ್ತಡ ಬೀಳದಂತೆ ಮಾಡಲು ಪೆರಿಕಾರ್ಡಿಯಂ ಅನ್ನ ತೆರೆದನು ಮತ್ತು ಮಡುಗಟ್ಟಿದ ಅಲ್ಲಿನ ರಕ್ತವನ್ನು ಹೀರಿ ತೆಗೆದು ಸ್ಪಂಜಿನಿಂದ ಅಲ್ಲಿ ಒತ್ತಿದನು. ಅವರಿಗೆ ಕೆಲವು ನಿಮಿಷಗಳವರೆಗೆ ಹೃದಯದ ಬಡಿತವನ್ನು ನಿಲ್ಲಿಸಲು ಸಾಧ್ಯವಾಗಿದ್ದ ಪಕ್ಷದಲ್ಲಿ ಅದರ ಮೇಲೆ ಕಾರ್ಯ ನಡೆಸು ವುದು ಸುಲಭವಾಗಬಹುದಿತ್ತು. ಆದರೆ ಹಾಗೆ ಮಾಡಬೇಕಾದರೆ, ಅವರು ಹೃದಯ-ಶ್ವಾಸಕೋಶಗಳ ಬೈಪಾಸ್ ಸರ್ಜರಿಗೆ ಯಾಂತ್ರಿಕ ಸೌಲಭ್ಯಬೇಕಾಗಿತ್ತು. ಶಸ್ತ್ರ ಚಿಕಿತ್ಸಕರು ಅವರ ಹೃದಯ ಬಡಿಯುತ್ತಿರು ವಾಗಲೇ ತಮ್ಮ ರಿಪೇರಿ ಕಾರ್ಯಗಳನ್ನು ನಿರ್ವಹಿಸಬೇಕಾಗಿತ್ತು. ಚಲಿಸುತ್ತಿರುವಂಥ ಒಂದು ಜೀವದ ಮೇಲೆ ಕೆಲಸ ನಡೆಸುವಾಗ ಆ ಶಸ್ತ್ರಕ್ರಿಯೆ ಟೇಬಲ್ಲಿನ ಮೇಲೆ ಅವರು ಎಲ್ಲ ಬಗೆಯ ಕೈಚಳಕ ಮತ್ತು ಚಾಚಾಕ್ಷತನ ವನ್ನು ತೋರಿಸಬೇಕಿತ್ತು.

ಅಷ್ಟರಲ್ಲಿ ಬಹುಶಃ ಸ್ಪಾಲ್‌ಡಿಂಗನು ತನ್ನ ಶರೀರದಲ್ಲಿನ ಕಾಲು ಭಾಗದಷ್ಟು ರಕ್ತವನ್ನು ಕಳೆದುಕೊಂಡಿದ್ದನು. ಅವನಿಗೆ ರಕ್ತಪೂರಣ ಮಾಡಲು ಅವರು ಬಯಸ ಲಿಲ್ಲ, ಏಕೆಂದರೆ ಆತನನ್ನು ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಕೊಂಡೊಯ್ಯುವಾಗ ಆತನ ರಕ್ತದ ಗ್ರೂಪು ಯಾವುದೆಂದು ನಿರ್ಧರಿಸು ವಷ್ಟು ಕಾಲಾವಕಾಶವಿರಲಿಲ್ಲ. ಈ ಕೊರತೆ ಯನ್ನು ಪರಿಹರಿಸಲು ಅವರು ಮೂರು ದೊಡ್ಡ ದೊಡ್ಡ ಇಂಟ್ರಾವೀನಸ್ ನಳಿಕೆಗಳ ಮೂಲಕ ಅವನ ರಕ್ತನಾಳಗಳಲ್ಲಿ ನಾಲ್ಕು ಲೀಟರಿನಷ್ಟು ನಿರ್ಮಲ ದ್ರವವನ್ನು ಸುರಿದರು. ಒಂದು ಆಟೋ ಟ್ರಾನ್ಸ್‌ಫರ್ ಸಾಧನವು ಆತನ ಹೃದಯ-ಕುಹರದಲ್ಲಿ ಸುರಿಯುತ್ತಿರುವಂಥ ರಕ್ತವನ್ನು ಮರು ಪ್ರವರ್ತಿಸಿತು ಮತ್ತು ಅದನ್ನು ರಕ್ತನಾಳ ಗಳಿಗೆ ಹಿಂತಿರುಗಿಸಿತು.

ಬಳಿಕ ಡಾ. ಬೂನೆಯವರು ಸ್ವಲ್ಪಸ್ವಲ್ಪ ವಾಗಿ ಸ್ಪಾಲ್‌ಡಿಂಗನ ಎದೆಯಲ್ಲಿ ನಾಟಿದ ಮೊಳೆಯನ್ನು ಎಳೆಯತೊಡಗಿದರು. ಡಾ. ಆರೋಜಕೋ ಅವರು ಅದರಿಂದ ಉಂಟಾದ ತೂತಿನ ಮೇಲ್ಗಡೆ ತಮ್ಮ ಬೆರಳುಗಳಿಂದ ಒತ್ತಿಹಿಡಿದರು. ಕಟ್ಟಕಡೆಗೆ ಬೂನ್ ಅವರು ಸ್ಪಾಲ್‌ಡಿಂಗನ ಎದೆಯಲ್ಲಿ

ಸಾಟಿದ ಮೊಳೆಯನ್ನು ಕಿತ್ತು ತೆಗೆದರು. ತನ್ನ ಈ "ಟ್ರೋಫಿ"ಯನ್ನು ದಾದಿಗೆ ಹಸ್ತಾಂತರಿಸಿದ ಡಾ. ಬೂನೆ, "ನಾನು ಇದನ್ನು ಸುರಕ್ಷಿತವಾಗಿ ಇಡಬಯಸುತ್ತೇನೆ" ಎಂದು ವಿವರಿಸಿದನು.

ಮುಂದಿನ ಎರಡು ಗಂಟೆಗಳವರೆಗೆ ಡಾ. ಬೂನ್ ಆ ಮೊಳೆ ಚುಚ್ಚಿ ಆದಂತಹ ಪ್ರತಿಯೊಂದು ತೂತನ್ನು ಹೊಲಿದು ತುಂಬಿಸಿದನು. ಮೊದಲು ಅವನು ಸ್ಪಾಲ್ ಡಿಂಗನ ಗಾಯಗೊಂಡ ಶ್ವಾಸಕೋಶವನ್ನು ಸರಿಪಡಿಸಿದನು. ಅನಂತರ ಸಣ್ಣ ಪುಟ್ಟ ಹೊಲಿಗೆಗಳಿಂದ ಅವನ ಹೃದಯದ ಮೇಲು ಭಾಗದ ಬಲಗಡೆಯಲ್ಲಿರುವ ಹೃದಯ ಭಾಗವನ್ನು ಪೂರ್ತಿಯಾಗಿ ಮುಚ್ಚಿದನು. ಒಂದು ಟೆಫ್ಲಾನ್ ಪಟ್ಟಿಯನ್ನು ಅಂಟಿಸಿದನು ಮತ್ತು ಹಾಗೆ ಅಂಟಿಸಿದ ಆ ಮೆತ್ತೆ ಪಟ್ಟಿಯ ಪರ್ಯಾಯ ಕ್ರಮದಿಂದ ಹಿಗ್ಗುವುದನ್ನು ಮತ್ತು ಕುಗ್ಗುವುದನ್ನು ಕಾಣಲು ಆತನು ಕಾದನು. "ಈ ಅಸಾಮಿ ಗೂಳಿಯಂತೆ ಬಲಿಷ್ಠನಿದ್ದಾನೆ" ಎಂದು ಶಸ್ತ್ರ ಚಿಕಿತ್ಸೆ ನಡೆಸುತ್ತಿದ್ದ ಡಾ. ಬೂನೆ ಹೇಳಿದನು.

ಅಂತಿಮವಾಗಿ ಮಹಾಪಥಮನಿಯ ರಿಪೇರಿ ಎಂಬ ಶಸ್ತ್ರ ಚಿಕಿತ್ಸಾಕಾರ್ಯದಲ್ಲಿ ಅತ್ಯಂತ ಉಪಾಯದಿಂದ, ಕುಶಲತೆ ಹಾಗೂ ಕೈಚಳಕಗಳಿಂದ ನಿರ್ವಹಿಸಬೇಕಾಗಿದ್ದ ಶಸ್ತ್ರ ಚಿಕಿತ್ಸಾಕಾರ್ಯವನ್ನು ಅತ್ಯಂತ ಕೌಶಲದಿಂದ ಪೂರ್ಣಗೊಳಿಸಿದನು. ಬೂನೆ ಅವರು ಚುಚ್ಚುಗಾಯವನ್ನು ಆವರಿಸಿಕೊಂಡಿದ್ದ ಜಿಡ್ಡುಗಟ್ಟಿದ ಪೊರೆಯನ್ನು ಸುಲಿದು ಹಾಕಿದ್ದನ್ನು ಕಂಡು ಇತರ ಶಸ್ತ್ರಚಿಕಿತ್ಸಕರು ಸ್ತಬ್ಧರಾದರು. ರಕ್ತದ ಧಾರೆಯು ಕೋಣೆಯಲ್ಲೆಲ್ಲ ರಿಖಲ್ಲೆಂದು ಚಿಮ್ಮಿತು. "ಅಯ್ಯೋ! ದೇವರೆ, ಇವನನ್ನು ನಾವು ಕಳೆದುಕೊಳ್ಳಬೇಕಾಗುತ್ತದೆಯಲ್ಲ" ಎಂದು ಬೂನೆ ಭಾವಿಸಿದರು. ಆರೋಜಿಕೋ ಅವರು ಆ ಕೂಡಲೆ ರಕ್ತಚಿಮ್ಮುತ್ತಿದ್ದ ಗಾಯದ ಮೇಲೆ ಬೆರಳನ್ನು ಒತ್ತಿಹಿಡಿದರು.

ಡಾ. ಬೂನೆ ವಿಶೇಷ ಲಕ್ಷ್ಯವಿಲ್ಲದವನಂತೆ ಕೆಲಸ ಮಾಡುತ್ತಿದ್ದನು. ಇಬ್ಬರು ಶಸ್ತ್ರ ಚಿಕಿತ್ಸಕರ ಗವುಸುಧಾರೀ ಕೈಗಳು ಸ್ಪಾಲ್ ಡಿಂಗನ ಎದೆಯೊಳಗೆ ಆಳದವರೆಗೆ ಕೆಲಸ ಮಾಡುತ್ತಿದ್ದುವು. ಆರೋಜಿಕೋ ಅವರು ರಕ್ತ ಚಿಮ್ಮುತ್ತಿದ್ದ ಗಾಯದ ಮೇಲೆ ಬೆರಳನ್ನು ಒತ್ತಿ ಹಿಡಿದಾಗ, ಬೂನೆಯು ಗಾಯಗೊಂಡ ಭಾಗಕ್ಕೆ ಹೊಲಿಗೆ ಹಾಕಲು ಸೂಜಿಗಳನ್ನು ಸಿದ್ಧಪಡಿಸಿದನು. ಅವನು ಅದನ್ನು ನಿಧಾನವಾಗಿ ತೆಗೆದುಹಾಕಿದನು. ಆಗ ಒಂದೇ ಒಂದು ತೊಟ್ಟಾದರೂ ರಕ್ತ ಚಿಮ್ಮಲಿಲ್ಲ. ಆಗ ಅವರ ಬಾಯಿಯಿಂದ ನಿಟ್ಟುಸಿರೊಂದು ಹೊರಹೊಮ್ಮಿ ಎಲ್ಲರಿಗೂ ಕೇಳಿಸಿತು.

ಟೊಪ್ಪಿ ಮತ್ತು ಮೊಗಕಾಪಿನ ನಡುವೆ ಬೂನೆಯವರ ಕಣ್ಣುಗಳು ಒರಾಜಕೋ ಅವರ ದೃಷ್ಟಿಯನ್ನು ಸಂಧಿಸಿದಾಗ, ಕಷ್ಟ ಪರಿಹಾರಗೊಂಡ ನೆಮ್ಮದಿ ಅವುಗಳಲ್ಲಿ ಕಾಣಿಸಿತು. "ಅವನ ಕಾರ್ಯವನ್ನು ಮುಗಿಸೋಣ. ಬೂನೆ ಎಂದರು." ಇದು ಅವರು ಸಾಯುವ ಕಾಲವಲ್ಲ."

ಮೈಕ್ ಸ್ಪಾಲ್‌ಡಿಂಗ್ ಅದ್ಭುತಗತಿಯಲ್ಲಿ ಗುಣಮುಖರಾಗ ತೊಡಗಿದರು. ಶಸ್ತ್ರಚಿಕಿತ್ಸೆ ನಡೆದು ಕೇವಲ ಮೂರು ದಿನಗಳಾಗಿತ್ತಷ್ಟೇ. ಆಗಲೇ ಆತನು ತಾನು ಮನೆಗೆ ಹೋಗಬೇಕು, ತನ್ನನ್ನು ಕಳುಹಿಸಿ

ಕೊಡಿ ಎಂದು ಒತ್ತಾಯ ಪೂರ್ವಕವಾಗಿ ಯಾಚಿಸುತ್ತಿದ್ದನು. ಅಂತಿಮವಾಗಿ ಬೂನೆ ಅವರು ಒಂದು ಎಚ್ಚರಿಕೆಯೊಂದಿಗೆ ಅವನಿಗೆ ಮನೆಗೆ ಹಿಂತಿರುಗಲು ಅನುಮತಿ ನೀಡಿದರು.

"ಮುಂದಿನ ಎರಡು ತಿಂಗಳವರೆಗೆ ನೀವು ಹೆಚ್ಚಿನ ಶ್ರಮಪೂರ್ಣ ಕೆಲಸ ಮಾಡಲೆತ್ನಿಸಿದರೆ ನಾವು ಹಾಕಿದ ಹೊಲಿಗೆಯ ಒಂದೊಂದು. ರಂಧ್ರವನ್ನು ಕೊರೆಯುವಷ್ಟು ನಿಮ್ಮ ರಕ್ತದ ಒತ್ತಡ ಏರುವುದು. ಹಾಗೇನಾದರೂ ಆದ ಪಕ್ಷದಲ್ಲಿ ನೀನು ಖಂಡಿತವಾಗಿ ಬಹು ಸುಲಭವಾಗಿ ಸಾಯುತ್ತೀ" ಎಂದು ಎಚ್ಚರಿಸಿದ್ದರು.

ಜೂಡಿ ಸ್ಕಾರ್ ಮತ್ತು ಟ್ರೆವಿಸ್ ಮ್ಯಾಕ್‌ಮಾಸ್ಟರ್ ಅವರು ಸ್ಪಾಲ್ ಡಿಂಗನನ್ನು ಮನೆಗೆ ಕರೆದೊಯ್ದರು ಮತ್ತು ಅವನು ಹಾಯಾಗಿದ್ದಾನೆಯೇ ಸೌಖ್ಯವಾಗಿದ್ದಾನೆಯೆ ಎಂಬುದನ್ನು ಖಚಿತಪಡಿಸಿಕೊಂಡರು. ತನ್ನ ನೆಚ್ಚಿನ ವ್ಯಕ್ತಿಯನ್ನು ಇನ್ನೇನು ಕಳೆದುಕೊಳ್ಳಲಿದ್ದೇನೆ ಎಂಬ ಭೀತಿಯನ್ನು ಎದುರಿಸಿ ಕಂಗಲಾಗಿ ಈಗ ತಾನೇ ನೆಮ್ಮದಿ ಹೊಂದಿದ ಜೂಡಿಗೆ ಮದುವೆಯ ವಿಷಯದಲ್ಲಿ ತನ್ನ ವಿಚಾರಗಳು ಈಗ ಬದಲಾಗಿವೆ ಎಂದು ಮನವರಿಕೆಯಾಯಿತು. ೧೯೯೩ರ ಮಾರ್ಚ್ ತಿಂಗಳ ನಡುಭಾಗದಲ್ಲಿ ಸ್ಪಾಲ್‌ಡಿಂಗ್ ಮತ್ತೆ ಕೆಲಸದ ಮೇಲೆ ಹಿಂತಿರುಗಿದನು. ಅವನು ತನ್ನ ಆಣಿ-ತುಪಾಕಿಯನ್ನು ಹಾರಿಸಲು ಸಮರ್ಥನಾಗುವವರೆಗೆ ಅದರ ಟ್ರಿಗರ್‌ನ ಮೇಲೆ ಬೆರಳನ್ನಿಡುವಾಗಲೂ ಬಹಳ ಎಚ್ಚರ ವಹಿಸಿದನು.

'ಸ್ಪಾಲ್‌ಡಿಂಗ್' ಇತರ ರೀತಿಗಳಲ್ಲಿ ಬದಲಾವಣೆಗೊಂಡನು. ಮೊದಲು ತೀವ್ರ ವೇಗದಿಂದ, ಸ್ಪರ್ಧಾತ್ಮಕ ಓಟದಲ್ಲಿ ಮತ್ತು ಕೆಲವೊಮ್ಮೆ ಅತ್ಯಂತ ವೇಗವಾಗಿ ವಾಹನ ಓಡಿಸುತ್ತಿದ್ದಂಥ ಆತನು ಬಹುನಿಧಾನವಾಗಿ ವಾಹನ ಓಡಿಸತೊಡಗಿದನು. "ನಾನು ಭಾವಿಸಿದ್ದಷ್ಟು ನಾನು ಅಜೇಯನಲ್ಲ ಎಂಬುದು ಈಗ ನನ್ನ ಅರಿವಿಗೆ ಬಂತು" ಎಂದು ಹೇಳಿದ ಸ್ಪಾಲ್‌ಡಿಂಗನು " ಮತ್ತು ಸದಾ ನಾನೊಬ್ಬನೇ ಎಲ್ಲವನ್ನೂ ಮಾಡಲಾರೆ" ಎಂಬ ಸತ್ಯವನ್ನು ಕಂಡುಕೊಂಡನು.

ಅಷ್ಟಾದರೂ ಕೂಡ ಅವನಲ್ಲಿದ್ದ ಉತ್ಸಾಹ ಕಡಿಮೆಯಾಗಲಿಲ್ಲ. "ಇನ್ನು ನಿನ್ನ ಆರೋಗ್ಯದ ಬಗ್ಗೆ ಭಯವಿಲ್ಲ" ಎಂಬ ಪ್ರಮಾಣ ಪತ್ರವನ್ನು ಬೂನೆಯಿಂದ ಪಡೆದ ಅನಂತರ ಅವನು ತಾನು ಮತ್ತೊಮ್ಮೆ ಸರಕು ರವಾನೆಯ ಚಲಿಸುತ್ತಿರುವ ರೈಲಿನ ಮೇಲಿನಿಂದ ಉತ್ತರದಿಂದ ನೆಗೆಯಬಹುದೇ" ಎಂದು ಕೇಳಿದನು.

ಅವನ ಈ ಮಾತನ್ನು ಕೇಳಿ ಬೂನೆ ನಕ್ಕು ಬಿಟ್ಟನು. ಖಂಡಿತವಾಗಿ ಎಂದು ಹೇಳಿ "ಯಾವಾಗ ನಿನ್ನ ನೆಗೆತ ಎಂದು ಮಾತ್ರ ನನಗೆ ಹೇಳಿಬಿಡು. ಆ ಗಳಿಗೆಯನ್ನು ನಾನು ಕಳೆದುಕೊಳ್ಳಲಾರೆ" ಎಂದನು.

ಸ್ಪಾಲ್‌ಡಿಂಗನ ಜೀವನವನ್ನೇ ಬಲಿ ತೆಗೆದುಕೊಳ್ಳಲಿದ್ದ ಆ ಹೆಮ್ಮೊಳೆಯನ್ನು ಬೂನೆಯ ಅಫೀಸಿನಲ್ಲಿ ಆತನ ಡೆಸ್ಕಿನ ಮೇಲೆ ಇರಿಸಿದ ಪೆಟ್ಟಿಗೆಯೊಂದರಲ್ಲಿ ಭದ್ರವಾಗಿ ಇರಿಸಲಾಯಿತು. ಡಾ. ಬೂನ್ ಆಗಿಂದಾಗ್ಗೆ ಅಥವಾ ಯಾವಾಗವಾದರೂ

ಒಮ್ಮೆ ಶಸ್ತ್ರಚಿಕಿತ್ಸೆಯಿಂದ ಹೊರ ಸೆಳೆದ. ಆ ಹೆಮ್ಮೊಳೆಯನ್ನು ಬೆರಳುಗಳಿಂದ ತಿರುಗಿಸುತ್ತ, ಆ ಎಂಟು ಸೆಂಟಿಮೀಟರ್ ಎತ್ತರದ ಸತುವಿನ ಲೇಪನದ ಸ್ಟೀಲಿನ ಮಿಂಚುತ್ತಿರುವ ಆ ಮೊಳೆಯನ್ನು ತಿರುಗಿಸುತ್ತ ಅಚ್ಚರಿಯಿಂದ ನೋಡುತ್ತಿದ್ದನು.

"ಮೈಕ್‌ನ ತೋಳುಗಳಲ್ಲಿ ಆ ದಿನ ದಿವ್ಯ ಶಕ್ತಿ ಇತ್ತು" ಎಂದು ಅವರು ಖಂಡಿತವಾಗಿ ಹೇಳುತ್ತಿದ್ದರು.



ಕರ್ತವ್ಯ ಪಾಲಿಸುವದರಲ್ಲಿ ವ್ಯಕ್ತಿನಿಷ್ಠೆ ಇರಬಾರದು. ಕರ್ತವ್ಯವೆಂದರೆ ಕೇವಲ ಜಪತಪಗಳಷ್ಟೇ ಅಲ್ಲ—ಕರ್ಮವೆಂದರೆ ಕೇವಲ ಯಜ್ಞಯಾಗಾದಿಗಳಲ್ಲ-ಜಪತಪಗಳಲ್ಲ, ನಾನಾ ಜನತೆಯ ಸೇವೆ ಮಾಡಬೇಕಾದುದೇ ಭಗವಂತನ ಪೂಜೆ ಮತ್ತು ನಮ್ಮ ಕರ್ತವ್ಯವೂ ಆಗಿದೆ.

—ಗೀತಾ

ಪ್ರಪಂಚದಿಂದ ವಿಮುಖರಾಗಿ, ನಮ್ಮಷ್ಟಕ್ಕೆ ನಾವು ಎಂಬ ದೃಷ್ಟಿ ಬಿಟ್ಟು ತಮ್ಮ ಸ್ವಾರ್ಥಸಾಧನೆಗೋಸ್ಕರ ಇತರರಿಗೆ ತೊಂದರೆ ಕೊಡುತ್ತಾ ಬಾಳಬಾರದು, ಪ್ರಪಂಚದಲ್ಲಿ ಅತಿ ಅಪರಾಸಕ್ತಿ ಗಳಿಸಿರಿ.

—ರಸೆಲ್

ವಯಸ್ಕರ ಶಿಕ್ಷಣ ಮತ್ತು ಗ್ರಾಹಕ ಜಾಗೃತಿ

ವೈ. ಜಿ. ಮುರಳೀಧರ

ನಮ್ಮ ದೇಶದ ಯಾವುದೇ ಸಮಸ್ಯೆಯನ್ನು ವಿಶ್ಲೇಷಿಸಿದರೂ ಅದರ ಮೂಲ ಕಾರಣ ಅನಕ್ಷರತೆ ಮತ್ತು ಬಡತನ ಎಂಬುದು ಸ್ಪಷ್ಟವಾಗುತ್ತದೆ. ವಾಸ್ತವವಾಗಿ ಬಡತನಕ್ಕೂ ಅನಕ್ಷರತೆಯೇ ಕಾರಣ. ಬಡತನವಲ್ಲದೆ, ನಿರುದ್ಯೋಗ, ಮೂಢನಂಬಿಕೆ, ಅನಾರೋಗ್ಯ ಮುಂತಾದ ಸಾಮಾಜಿಕ ಸಮಸ್ಯೆಗಳು ಉದ್ಭವಿಸಿರುವುದು ಅನಕ್ಷರತೆಯಿಂದ. ಈ ಸಮಸ್ಯಗಳಿಗೆ ಇನ್ನೊಂದು ಸೇರ್ಪಡೆ ಬಳಕೆದಾರರ ಶೋಷಣೆ. ಅಕ್ಷರಸ್ಥರನ್ನೇ ಬಿಡದ ಈ ವಂಚನೆ ಅನಕ್ಷರಸ್ಥರನ್ನು ಇನ್ನಷ್ಟು ತೀವ್ರವಾಗಿ ಕಾಡುತ್ತಿದೆ.

ಸಮೀಕ್ಷೆಯೊಂದರ ಪ್ರಕಾರ ಬಳಕೆದಾರರು ಒಂದು ವರ್ಷಕ್ಕೆ ಸುಮಾರು ೧೨೦೦ ಕೋಟಿ ರೂಪಾಯಿಗಳ ಮೊತ್ತದಷ್ಟು ವಂಚನೆಗೆ ಒಳಗಾಗುತ್ತಿದ್ದಾರೆ. ಇದರಲ್ಲಿ ಅನಕ್ಷರಸ್ಥರಂತೆ ಅಕ್ಷರಸ್ಥರೂ ಸೇರಿದ್ದಾರೆ. ಒಂದೇ ಒಂದು ವ್ಯತ್ಯಾಸವೆಂದರೆ ಅಕ್ಷರಸ್ಥರಲ್ಲಿ ತಾವು ವಂಚನೆಗೆ ಒಳಗಾಗುತ್ತಿದ್ದೇವೆ ಎಂಬ ಅರಿವು ಇದ್ದೂ, ಏನೂ ಮಾಡದೆ ಅಲಕ್ಷದಿಂದ ಇದ್ದರೆ, ಅನಕ್ಷರಸ್ಥರು ತಾವು ಮೋಸ ಹೋಗುತ್ತಿದ್ದೇವೆ ಎಂಬ ಅರಿವು ಇಲ್ಲದೆ ತಮ್ಮ ಹಣ, ಆರೋಗ್ಯ ಮುಂತಾದವುಗಳನ್ನು ಕಳೆದುಕೊಳ್ಳುತ್ತಿದ್ದಾರೆ.

ಬಳಕೆದಾರರ ಶೋಷಣೆಗೆ ಮುಖ್ಯ ಕಾರಣ ಜನರ ಅಜ್ಞಾನ. ಶೇ. ೭೫ ರಷ್ಟು ಅನಕ್ಷರಸ್ಥರಿರುವ ಭಾರತದಲ್ಲಿ ತಮ್ಮ ಹಕ್ಕು ಜವಾಬ್ದಾರಿಗಳು ಯಾವುವು. ಅವುಗಳನ್ನು ಹೇಗೆ ಚಲಾಯಿಸಬೇಕು ಎಂಬುದರ ಬಗ್ಗೆ ತಿಳುವಳಿಕೆ ಇಲ್ಲದೆ ಜನ ಹಲವಾರು ವಿಧದಲ್ಲಿ ಮೋಸಕ್ಕೆ, ವಂಚನೆಗೆ ಒಳಗಾಗುತ್ತಿದ್ದಾರೆ. ಉದಾಹರಣೆಗೆ, ಕಡಿಮೆ ತೂಕ ಮತ್ತು ಅಳತೆಯ ಮೂಲಕ ಜನರಿಗೆ, ವಿಶೇಷವಾಗಿ ಗ್ರಾಮಸ್ಥರಿಗೆ ಅನ್ಯಾಯ ಆಗುತ್ತಿದೆ. ಅಧಿಕೃತವಲ್ಲದ ತಕ್ಕಡಿ, ನಿಗದಿಪಡಿಸದ ಬೊಟ್ಟುಗಳು, ತೂಕ ಮಾಡಲು ಕಲ್ಲು, ಇಟ್ಟಿಗೆ, ಕಬ್ಬಿಣದ ಬಿಲ್ಲೆಗಳು ಮುಂತಾದ ಸಾಧನಗಳನ್ನು ಬಳಸಲಾಗುತ್ತಿದೆ. ತೂಕ ಮಾಡಲು ಈ ರೀತಿ ಸಾಮಗ್ರಿಗಳನ್ನು ಬಳಸುವುದು ಅಪರಾಧ. ಇದಕ್ಕಾಗಿಯೇ ತೂಕ ಮತ್ತು ಅಳತೆ ಕಾನೂನು ಜಾರಿಗೆ ಬಂದಿದೆ. ಆದರೆ ಅದರ ಮುಖ್ಯ ಅಂಶಗಳು ಎಷ್ಟು ಗ್ರಾಮಸ್ಥರಿಗೆ ತಿಳಿದಿದೆ....?

ಕಲಬೆರಕೆಯಿಂದ ಕೂಡಿದ ಆಹಾರ ಪದಾರ್ಥಗಳನ್ನು ಮಾರುವುದು ಅನೈತಿಕ

ವಲ್ಲದೆ, ಕಾನೂನು ರೀತ್ಯಾ ಅಪರಾಧ. ಸರ್ಕಾರ ಕಲಬೆರಕೆ (ಪ್ರತಿ ಬಂಧಕ) ಕಾಯ್ದೆಯನ್ನು ಜಾರಿಗೊಳಿಸಿದೆ. ಆದರೆ, ಇದರ ಯಾವ ಸೂಚನೆಯೂ ಇಲ್ಲದೆ, ಕಲಬೆರಕೆಯಿಂದ ಕೂಡಿದ ಆಹಾರ ಪದಾರ್ಥಗಳು ಮತ್ತು ಔಷಧಿಗಳು ಮಾರಾಟವಾಗುತ್ತಿದೆ. ಖಾಸಗಿ ಮಾರಾಟ ಗಾರರಲ್ಲದೆ ಸರ್ಕಾರಿ ಅಂಗಡಿಗಳಲ್ಲೂ ಕಲ ಬೆರಕೆ ನಡೆಯುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ರಸಾಯನಿಕ ಗೊಬ್ಬರ, ಕೀಟನಾಶಕಗಳು ಮತ್ತು ಬಿತ್ತನೆ ಬೀಜಗಳು ಕಲಬೆರಕೆಯಿಂದ ಕೂಡಿದ್ದವು ಎಂದು ಕೆಲವು ವರದಿಗಳು ತಿಳಿಸಿದೆ.

ಬಳಕೆದಾರರನ್ನು ವಂಚಿಸುತ್ತಿರುವ ಇನ್ನೊಂದು ಮಾರ್ಗ ಜಾಹಿರಾತು. ಮುಗ್ಧ ಜನರನ್ನು ವಿಶೇಷವಾಗಿ ಅನಕ್ಷರಸ್ಥ ರನ್ನು ಜಾಹಿರಾತಿನ ಮೂಲಕ ಸುಲಭವಾಗಿ ಆಕರ್ಷಿಸಿ, ಯಾವುದಕ್ಕೂ ಉಪಯೋಗಕ್ಕೆ ಬಾರದ ಪದಾರ್ಥಗಳನ್ನು ಮಾರಲಾಗು ತ್ತಿದೆ. ಅಲ್ಲದೆ ಯಾವ ಕಾರಣವೂ ಇಲ್ಲದೆ ವಸ್ತುಗಳ ಬೆಲೆಯನ್ನು ಹೆಚ್ಚಿಸಿ. ಅದರಿಂದ ತಯಾರಕರು ಅಧಿಕ ಲಾಭ ಪಡೆಯುತ್ತಿ ದ್ದಾರೆ. ಪ್ರತಿಯೊಂದು ಪದಾರ್ಥವನ್ನು ಪೊಟ್ಟಣಗಳಲ್ಲಿ ಮಾರಾಟ ಮಾಡುತ್ತಿರುವ ಇಂದಿನ ದಿನಗಳಲ್ಲಿ, ಅಧಿಕ ಬೆಲೆಯನ್ನು ಮುದ್ರಿಸಿ, ಮಾರಾಟ ಮಾಡುವ ಪ್ರಸಂಗ ಗಳೂ ಹೆಚ್ಚುತ್ತಿವೆ. ಪೊಟ್ಟಣಗಳ ಮೇಲೆ ಮುದ್ರಿಸಿರುವ ಬೆಲೆಗಿಂತ ಹೆಚ್ಚಾಗಿ ಮಾರಾಟ ಮಾಡಬಾರದೆಂದು, ಪೊಟ್ಟಣ ಸಾಮಗ್ರಿಗಳ ಮಾರಾಟ ಕಾಯ್ದೆ ತಿಳಿಸು ತ್ತದೆ. ಬೆಲೆಯನ್ನು ಸೂಚಿಸುವ ಸ್ಟಿಕರ್ ಗಳನ್ನು ಅಂಟಿಸುವುದು ಅಪರಾಧ. ಆದರೆ ಈ ಕಾನೂನು ಎಷ್ಟು ಗ್ರಾಮಸ್ಥರಿಗೆ ತಿಳಿದಿದೆ.

ಇಂದಿನ ದಿನಗಳಲ್ಲಿ ಪ್ರತಿಯೊಂದು ಹಳ್ಳಿ ಯಲ್ಲೂ ಬ್ಯಾಂಕುಗಳು ಕಾರ್ಯ ನಿರ್ವಹಿಸು ತ್ತಿವೆ. ಆದರೆ ಈ ಬ್ಯಾಂಕುಗಳು ಎಷ್ಟರ ಮಟ್ಟಿಗೆ ಗ್ರಾಮಸ್ಥರ ಹಕ್ಕುಗಳನ್ನು ಸಂರಕ್ಷಿಸುತ್ತಿವೆ....? ರೈತರು ಹಣ ಕಟ್ಟಲು ಅಥವ ಹಿಂತೆಗೆಯಲು ಕಲಿತಿರಬಹುದು. ಆದರೆ, ತಮ್ಮ ಠೇವಣಿಗೆ ಬ್ಯಾಂಕ್ ನೀಡುವ ಬಡ್ಡಿ ಸರಿಯಾಗಿ ಜಮಾ ಆಗಿದೆಯೇ ಎಂಬುದನ್ನು ಎಷ್ಟು ಜನ ರೈತರು ಪರೀಕ್ಷಿ ಸುತ್ತಾರೆ? ಕಾಲ ಕಾಲಕ್ಕೆ ಸರಿಯಾಗಿ ಬಡ್ಡಿ ಪಡೆಯುವುದು ಪ್ರತಿಯೊಬ್ಬ ಠೇವಣಿದಾರನ ಹಕ್ಕು. ಆದರೆ ಇದನ್ನು ಹೇಗೆ ತಿಳಿಸು ವುದು....?

ಬಳಕೆದಾರರು ವಂಚನೆಗೆ ಒಳಗಾಗು ತ್ತಿರುವ ಕೆಲವೇ ಮಾದರಿ ಈ ಮೇಲಿನವು. ಇದಕ್ಕೆ ಮುಖ್ಯ ಕಾರಣ ಜನರ ಅಜ್ಞಾನ ಗ್ರಾಹಕರಾಗಿ ಅವರ ಹಕ್ಕುಗಳೇನು? ಕರ್ತವ್ಯಗಳೇನು? ಅವರ ಹಿತವನ್ನು ಸಂರಕ್ಷಿಸಲು ಯಾವ ಯಾವ ಕಾನೂನು ಗಳು ಇವೆ, ಅವುಗಳನ್ನು ಹೇಗೆ ಉಪಯೋಗಿ ಸಬೇಕು ಇತ್ಯಾದಿ ವಿಷಯಗಳನ್ನು ಜನರಿಗೆ ತಿಳಿಸಬೇಕಾಗಿದೆ. ಇದಕ್ಕಾಗಿ ಗ್ರಾಹಕ ಶಿಕ್ಷಣ ಅತ್ಯಗತ್ಯ.

ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರ ವಯಸ್ಕರ ಶಿಕ್ಷಣವನ್ನು ಆರಂಭಿಸಿದೆ. ಈ ಕಾರ್ಯಕ್ರಮದಲ್ಲಿ ಜನರಿಗೆ ಓದುವುದು, ಬರೆಯುವುದನ್ನು ಕಲಿಸಿ ತಮ್ಮ ವ್ಯವಹಾರ ಗಳನ್ನು ತಾವೇ ನಡೆಸಿಕೊಳ್ಳುವಂತೆ ತಯಾರು ಮಾಡಲಾಗುತ್ತಿದೆ. ಸಮಾಜದ

ಮುಖ್ಯ ವಾಹಿನಿಯಲ್ಲಿ ಬೆರೆತು ತಾವೂ ಈ ಸಮಾಜದ ಜವಾಬ್ದಾರಿಯುತ ವ್ಯಕ್ತಿಗಳೆಂದು ಭಾವಿಸಿ, ದೇಶದ ಏಳಿಗೆಯಲ್ಲಿ ಭಾಗವಹಿಸಲು ವಯಸ್ಕರ ಶಿಕ್ಷಣ ಒಂದು ದಾರಿದೀಪವಾಗಿದೆ. ಆದರೆ, ಈ ಕೆಲಸ ಸಂಪೂರ್ಣವಾಗಿ ಯಶಸ್ವಿಯಾಗಬೇಕಾದರೆ, ಅನಕ್ಷರಸ್ಥರಿಗೆ ಅವರ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ. ಅಲ್ಲದೆ ಒಬ್ಬ ಪ್ರಜೆಯಾಗಿ ಅವರ ಹಕ್ಕುಗಳೇನು ಎಂಬುದನ್ನೂ ತಿಳಿಸಬೇಕಾಗುತ್ತದೆ.

ಗ್ರಾಹಕ ಜಾಗೃತಿ ಉಂಟುಮಾಡಲು ವಯಸ್ಕರ ಶಿಕ್ಷಣ ಒಂದು ಉತ್ತಮ ಸಾಧನ. ಕೇವಲ ಪಠ್ಯಪುಸ್ತಕದ ವಿಷಯಗಳನ್ನು ಹೇಳಿಕೊಡುವ ಬದಲು, ಅದರ ಜೊತೆಗೆ ಗ್ರಾಹಕ ವಿಷಯಗಳನ್ನು ವಿವರಿಸುವುದು ಹೆಚ್ಚು ಉಪಯುಕ್ತವಲ್ಲದೆ, ಜನರಿಗೆ, ವಿಶೇಷವಾಗಿ ಅನಕ್ಷರಸ್ಥರಿಗೆ ಹೆಚ್ಚು ಪ್ರಯೋಜನಕಾರಿಯೂ ಹೌದು. ತಮ್ಮ ಸುತ್ತಮುತ್ತ ನಡೆಯುವ ವಂಚನೆ ಮತ್ತು ಮೋಸಗಳ ವಿರುದ್ಧ ತಮ್ಮ ಹಕ್ಕು ಚಲಾಯಿಸುವ ಮನೋಭಾವ ಬೆಳಸಲು ಈ ಶಿಕ್ಷಣ ಉತ್ತಮ ಮಾರ್ಗ.

ಈಗಾಗಲೇ ಶಿಕ್ಷಣದ ಮೂಲಕ ಗ್ರಾಹಕ ಜಾಗೃತಿ ಉಂಟುಮಾಡಬೇಕೆಂದು ಕೆಲವು ಪ್ರಯತ್ನಗಳು ನಡೆದಿದೆ. ಆದರೆ ಅವು ನಗರ ಪ್ರದೇಶಗಳಿಗೆ ಸೀಮಿತವಾಗಿದ್ದು ಕೇವಲ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ದಕ್ಕುವಂಥಾದ್ದಾಗಿದೆ. ಗ್ರಾಹಕ ಜಾಗೃತಿ ನಿಜವಾದ ಅರ್ಥದಲ್ಲಿ ಬೆಳೆಯಬೇಕಾದರೆ ಅದು ಅನಕ್ಷರಸ್ಥರನ್ನು ತಟ್ಟಬೇಕು. ಇದಕ್ಕೆ ವಯಸ್ಕರ ಶಿಕ್ಷಣ ಒಂದೇ ಮಾರ್ಗ.

ಕರ್ನಾಟಕದಲ್ಲಿ ನಗರಗಳಿಗಿಂತ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಗ್ರಾಹಕರ ಸಂಘ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಕೆಲವು ಕಾರ್ಯಕರ್ತರು, ಗ್ರಾಹಕರಲ್ಲಿ ಜಾಗೃತಿ ಮೂಡಿಸಲು ಹಲವಾರು ವಿಧವಾಗಿ ಶ್ರಮಿಸುತ್ತಿದ್ದಾರೆ. ವಯಸ್ಕರ ಶಿಕ್ಷಣ ಸಮಿತಿ ಈ ಕಾರ್ಯಕರ್ತರ ಸಹಾಯ ಪಡೆಯಬಹುದು. ವಾರದಲ್ಲಿ ಒಂದು ಅಥವಾ ಎರಡು ದಿನ ವಯಸ್ಕರಿಗೆ, ಗ್ರಾಹಕ ವಿಷಯಗಳಲ್ಲಿ ಮಾಹಿತಿ, ಮಾರ್ಗದರ್ಶನ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಬಹುದು.

ವಯಸ್ಕರ ಶಿಕ್ಷಣದಲ್ಲಿ ಬಹುಪಾಲು ಅನಕ್ಷರಸ್ಥರು ಇರುವುದರಿಂದ, ಅವರಿಗೆ ಗ್ರಾಹಕಪರ ಕಾಯ್ದೆ, ಕಾನೂನು ಮತ್ತು ಅಧಿನಿಯಮಗಳನ್ನು ಹೇಳಿಕೊಡುವುದು ಸರಿಯಲ್ಲ. ಅದರ ಅವಶ್ಯಕತೆಯೂ ಇಲ್ಲ. ಬದಲಾಗಿ ತಮ್ಮ ದಿನನಿತ್ಯದ ವ್ಯವಹಾರದಲ್ಲಿ ಹೇಗೆ ವಸ್ತುಗಳನ್ನು ಕೊಳ್ಳಬೇಕು, ಕೊಳ್ಳುವಾಗ ಯಾವ ಯಾವ ಮಾಹಿತಿಯನ್ನು ಕೇಳಿ ತಿಳಿದುಕೊಳ್ಳಬೇಕು, ಹೇಗೆ ಬೆಲೆಯನ್ನು ಪರಿಷ್ಕರಿಸಬೇಕು ಮುಂತಾದ ವಿಷಯಗಳನ್ನು ಅವರಿಗೆ ತಿಳಿಸಬೇಕು. ಒಂದು ಪದಾರ್ಥದ ಅಥವಾ ವಸ್ತುವಿನ ಎಷ್ಟು ಮಾದರಿಗಳು ಮಾರುಕಟ್ಟೆಯಲ್ಲಿ ಲಭ್ಯ, ಅವುಗಳಲ್ಲಿರುವ ವ್ಯತ್ಯಾಸಗಳೇನು, ಪ್ರಯೋಜನಗಳೇನು ? ಮುಂತಾದ ಮೂಲಭೂತ ವಿಷಯಗಳನ್ನು ತಿಳಿಸುವುದರಿಂದ ಗ್ರಾಹಕ ಜಾಗೃತಿ ಮೂಡಲು ಸಾಧ್ಯ.

ಕೇಂದ್ರ ಸರ್ಕಾರ ೧೯೮೬ ರಲ್ಲಿ ಗ್ರಾಹಕ

ಸಂರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸಿದೆ. ಅತೀ ಸುಲಭವಾದ ಈ ಕಾಯ್ದೆಯಿಂದ ಸಾಮಾನ್ಯ ಜನರೂ ತಮ್ಮ ಕುಂದು ಕೊರತೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ. ಪ್ರತೀ ಜಿಲ್ಲೆಯಲ್ಲಿ ಗ್ರಾಹಕ ವೇದಿಕೆ ಆರಂಭವಾಗಿದ್ದು, ಜನರ ಕುಂದು ಕೊರತೆಗಳನ್ನು ಪರಿಹರಿಸಲು ಕಾರ್ಯ ನಿರ್ವಹಿಸುತ್ತಿದೆ. ಯಾವುದೇ ವಕೀಲರ ಸಹಾಯವಿಲ್ಲದೆ ದೂರು ಸಲ್ಲಿಸಲು ಅವಕಾಶ ಇದೆ. ಅನಕ್ಷರಸ್ಥರೂ ಸ್ವಲ್ಪ ಶ್ರಮ ವಹಿಸಿದರೆ, ಈ ವೇದಿಕೆಗಳಿಂದ ಪರಿಹಾರ ಪಡೆಯಬಹುದಾಗಿದೆ.

ವಯಸ್ಕರ ಶಿಕ್ಷಣ ಸಮಿತಿ ಕೇವಲ ಪಾಠ ಹೇಳುವುದಲ್ಲದೆ, ಕೆಲವು ಮಾರ್ಗ ದರ್ಶಕ ಕೈಪಿಡಿಗಳನ್ನು ಪ್ರಕಟಿಸಬಹುದು. ಉದಾಹರಣೆಗೆ, ಗ್ರಾಹಕರ ಹಕ್ಕುಗಳು ಯಾವುವು ಎಂಬುದರ ಬಗ್ಗೆ ಚಿತ್ರವಿರುವ ಕೈಪಿಡಿ ಪ್ರಕಟಿಸಬಹುದು. ಅವನ್ನೇ ಪಾಠಗಳಲ್ಲಿ ವಿವರಿಸಿ ಅನಕ್ಷರಸ್ಥರಲ್ಲೂ ಜಾಗೃತಿ ಮೂಡಿಸಬಹುದು. ಐದಾರು ಅಭ್ಯರ್ಥಿಗಳನ್ನು ಜಿಲ್ಲಾ ವೇದಿಕೆಗಳಿಗೆ ಕರೆದೊಯ್ದು ಅಲ್ಲಿ ನಡೆಯುವ ಚರ್ಚೆಗಳಲ್ಲಿ ಭಾಗವಹಿಸುವಂತೆ ಸಹಕರಿಸಬಹುದು.

ದೇಶದ ಪ್ರತಿಷ್ಠಿತ ಗ್ರಾಹಕ ಸಂಸ್ಥೆಗಳು ಕೆಲವು ಚಲನ ಚಿತ್ರಗಳನ್ನು ಮತ್ತು ವಿಡಿಯೋಗಳನ್ನು ತಯಾರಿಸಿ ಅವುಗಳನ್ನು ಕನ್ನಡಕ್ಕೆ ಭಾಷಾಂತರಿಸಿ, ಪ್ರದರ್ಶಿಸಬಹುದು. ಕಲಬೆರಕೆ, ತೂಕ ಮತ್ತು ಅಳತೆ, ಜಾಹಿರಾತು ಇತ್ಯಾದಿಗಳನ್ನು ಕುರಿತು ವಸ್ತುಪ್ರದರ್ಶನ ಏರ್ಪಡಿಸಬಹುದು. ಯಾವುದನ್ನು ನಡೆಸಿದರೂ. ಅನಕ್ಷರಸ್ಥರನ್ನು ದೃಷ್ಟಿಯಲ್ಲಿಟ್ಟುಕೊಂಡು, ಕಾರ್ಯ ನಿರ್ವಹಿಸಿದರೆ, ಗ್ರಾಹಕ ಜಾಗೃತಿ ಉಂಟಾಗುವುದರಲ್ಲಿ ಸಂಶಯವಿಲ್ಲ.

ಆರಂಭದಿಂದ ಕೇವಲ ಅಕ್ಷರ ಅಭ್ಯಾಸಕ್ಕೆ ಮೀಸಲಾಗಿರುವ ವಯಸ್ಕರ ಶಿಕ್ಷಣ ಸಮಿತಿ, ಜನರಲ್ಲಿ, ವಿಶೇಷವಾಗಿ, ಗ್ರಾಮಸ್ಥರಲ್ಲಿ ಗ್ರಾಹಕ ಜಾಗೃತಿ ಬೆಳಸಲು ಶ್ರಮಿಸಬೇಕು. ಅನಕ್ಷರಸ್ಥರನ್ನು, ಅಕ್ಷರಸ್ಥರನ್ನಾಗಿ ಮಾಡುವುದಲ್ಲದೆ, ಅವರನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿ ಮಾಡುವುದು, ಈ ಸಮಿತಿಯ ಗುರಿ ಆಗಬೇಕು. ಈ ನಿಟ್ಟಿನಲ್ಲಿ ಗ್ರಾಹಕ ಜಾಗೃತಿ ಮೂಡಿಸುವುದು ಪ್ರಥಮ ಹೆಜ್ಜೆ.

ಪ್ರಜಾಪ್ರಭುತ್ವ ಎಂದರೆ ಹಿಂಸೆಯಲ್ಲ. ಹಿಂಸಾಚಾರಕ್ಕೆ ಅದರಲ್ಲಿ ಸ್ಥಾನವಿಲ್ಲ. ಯಾವ ನಾಯಕರೂ ಅದನ್ನು ಪ್ರತಿಪಾದಿಸುವದಿಲ್ಲ. ಅದು ಜನ ಜೀವನಕ್ಕೆ ಕಂಟಕವನ್ನೊಡ್ಡುವ ಮತ್ತು ಪ್ರಜಾಪ್ರಭುತ್ವವನ್ನು ನಾಶಗೊಳಿಸುವ ರಾಕ್ಷಸೀತನ.

—ಡಾ. ರಾಧಾಕೃಷ್ಣನ್

ವೈದ್ಯಕೀಯದಲ್ಲಿ ವೈದ್ಯರಲ್ಲದ ಸಾಮಾನ್ಯರ ಸಾಧನೆ

ಎಸ್. ರಾಮರಾವ್

೧೯೯೪ ನೆ ಮಾರ್ಚ್ ತಿಂಗಳ 'ಪುಸ್ತಕ ಪ್ರಪಂಚ' ದಲ್ಲಿ ಟಿಮ್ ಎಂಬ ಯುವಕನ ಪ್ರಸಂಗವನ್ನು ಹೇಳಿದೆ. ಈತನಿಗೆ ಕಾರು ಅಪಘಾತದಿಂದ ತಲೆಗೆ ತೀವ್ರ ಗಾಯವಾಗಿ ಪ್ರಜ್ಞೆ ತಪ್ಪಿಹೋಗಿತ್ತು. ಆಸ್ಪತ್ರೆಯಲ್ಲಿ ಯುಕ್ತ ಚಿಕಿತ್ಸೆ ನೀಡಿದರೂ ಅವನು ೩ ತಿಂಗಳುಗಳು ಪ್ರಜ್ಞಾಹೀನನಾಗೇ ಇದ್ದ. ಅನಂತರ ಪ್ರಜ್ಞೆ ಉಂಟಾದರೂ ಮರವು ಪಕ್ಷವಾತಗಳಿಂದ ತೀರ ಅಸಹಾಯಕನಾದ. ತಜ್ಞ ವೈದ್ಯರು ಅವನ ಸ್ಥಿತಿ ಉತ್ತಮವಾಗುವುದಿಲ್ಲವೆಂದೂ ಸಾಯುವತನಕ ಅವನು ಹಾಗೆಯೇ ಇರುವನೆಂದೂ ಹೇಳಿದರು. ಪದೇ ಪದೇ ಅವರು ಆ ಅಭಿಪ್ರಾಯ ಕೊಟ್ಟರೂ ಅವನ ತಂದೆ ತಾಯಿಯರು ನಿರಾಶರಾಗದೆ ಪಟ್ಟು ಹಿಡಿದು ತಮಗೆ ಸರಿ ಎಂದು ತೋರಿದ ಶುಶ್ರೂಷೆ, ಚಿಕಿತ್ಸೆಗಳನ್ನು ಮುಂದುವರಿಸಿ ಅನೇಕ ವರ್ಷಗಳ ನಂತರ ತಮ್ಮ ಮಗ ಸಂಪೂರ್ಣಗುಣ ಹೊಂದಿ ಸಹಜ ವ್ಯಕ್ತಿ ಆಗುವಂತೆ ಸಫಲರಾದುದನ್ನು ಓದಿದಿರಿ.

ಅಂತೇ ೧೯೯೪ ನೆ ಜೂನ್ ತಿಂಗಳ "ಪುಸ್ತಕ ಪ್ರಪಂಚ"ದಲ್ಲಿ ಆರ್ಥರ್ ವೋಲ್ಡ್ ಎಂಬ ೫ ವರ್ಷ ಹುಡುಗನ ದುರ್ಬಲ ಮನೋಸ್ಥಿತಿಯನ್ನು ತಪಾಸಣೆ ಮಾಡಿದ ವೈದ್ಯತಜ್ಞ ಬಹುಶಃ ಜೀವಮಾನಪರ್ಯಂತ ಅವನ ಮಾನಸಿಕ ಅಸಹಾಯಕತೆ ಗುಣವಾಗದೆಂದು ಅಭಿಪ್ರಾಯಪಟ್ಟದ್ದನ್ನು ಹೇಳಿದೆ. ತಜ್ಞ ವೈದ್ಯಾಭಿಪ್ರಾಯ ಹೀಗೇ ಇದ್ದರೂ ಹುಡುಗನ ಸ್ಥಿತಿ ಚಿಕಿತ್ಸಾತೀತವಾಗಿರಲಾರದು ಎಂದು ತಂದೆತಾಯಿಗಳು ಆಶಿಸಿ ದೇವರ ಮೇಲೆ ಭಾರ ಹಾಕಿ ತಮಗೆ ಸರಿ ಎಂದು ತೋರಿದ ಚಿಕಿತ್ಸಾ ಕ್ರಮಗಳನ್ನು ಹಲವಾರು ವರ್ಷಗಳ ಪರ್ಯಂತ ಪಟ್ಟು ಹಿಡಿದು ಅನುಸರಿಸಿ ಗುಣಮುಖನಾದ ಮಗನೊಡನೆ ತೃಪ್ತ ಸಹಬಾಳ್ವೆಯನ್ನು ಸಾಧಿಸಿಕೊಂಡದ್ದನ್ನು ಓದಿದಿರಿ.

ಇಗೋ ಈಗ ಲೊರೆಂಜೋ ಎಂಬ ಬಾಲಕನ ವಿಷಯ ಹೇಳಿದೆ. ಇವನ ತಂದೆ ತಾಯಿಯರೂ ತಜ್ಞ ವೈದ್ಯರ ಅಭಿಪ್ರಾಯವನ್ನು ಅಲಕ್ಷಿಸಿ ವೈದ್ಯಕೀಯದಲ್ಲಿ ಪವಾಡವೆನ್ನಬಹುದಾದ ಚಿಕಿತ್ಸಾ ಕ್ರಮವನ್ನು ಸಾಧಿಸಿದ್ದಾರೆ.

ಇವು ಮೂರು ಸಂದರ್ಭಗಳಲ್ಲೂ ಅನೇಕ ವೈದ್ಯತಜ್ಞರು ವ್ಯಕ್ತಿಯ ಸ್ಥಿತಿ ಚಿಕಿತ್ಸಾ

[೧೯೯೩ ನೇ ಜೂನ್ ತಿಂಗಳ ರೀಡರ್ಸ್ ಡೈಜೆಸ್ಟಿನಲ್ಲಿರುವ ಪೀಟರ್ ಮೈಕೆಲ್ ಮೋರ್‌ರವರ ಲೇಖನದ ಸ್ಥೂಲಾನುವಾದ.]

ತೀರ; ಏನು ಅನುಕೂಲ ಮಾಡಲೂ ಸಾಧ್ಯವಿಲ್ಲ. ಆಮರಣಾಂತ ಅನುಭವಿಸಿ ಕೊಂಡಿರಬೇಕಾದ ಸ್ಥಿತಿ ಎಂದು ಸ್ಪಷ್ಟಪಡಿಸಿದ್ದರೂ, ಅನಂತರದ ಒಂದೆರಡು ಸಂದರ್ಭಗಳಲ್ಲಿ ಈ ಮಾತುಗಳನ್ನೆ ಸ್ಥಿರೀಕರಿಸಿದ್ದರೂ ವ್ಯಕ್ತಿಯ ತಂದೆ ತಾಯಿಗಳು ವೈದ್ಯರ ಅಭಿಪ್ರಾಯವನ್ನು ಒಪ್ಪಿಕೊಳ್ಳದೆ ತಮ್ಮ ಮಕ್ಕಳು ಗುಣಹೊಂದಲೇ ಬೇಕೆಂದು ನಿರ್ಧರಿಸಿ ವರ್ಷಗಟ್ಟಲೆ ಹಠತೊಟ್ಟು ತಮಗೆ ಸರಿ ಎನ್ನಿಸಿದ ಚಿಕಿತ್ಸಾ ಮಾರ್ಗಗಳನ್ನು ಕೈಗೊಂಡರು. ಆದರೆ ಈ ಮೂರು ಘಟನೆಗಳೂ ಅಸಾಮಾನ್ಯ, ತೀರ ಅಸಾಮಾನ್ಯ ತಜ್ಞವೈದ್ಯರ ಅಭಿಪ್ರಾಯವನ್ನು ಅದು ತಪ್ಪಾಗಿರಬಹುದು ಎನ್ನುವ ಆಸೆಯಿಂದಲೋ, ಮಕ್ಕಳನ್ನು ಹೇಗಾದರೂ ಗುಣಪಡಿಸಿ ಉಳಿಸಿಕೊಳ್ಳಬೇಕೆಂಬ ಹಠದಿಂದಲೊ ವೈದ್ಯಾಭಿಪ್ರಾಯವನ್ನು ನಿರ್ಲಕ್ಷಿಸಿರುವುದು ಈ ಮೂರು ಘಟನೆಗಳಲ್ಲೂ ಕಂಡುಬಂದಿದೆ. ಆದರೆ ಸಾಧಾರಣವಾಗಿ ವೈದ್ಯರ ಅಭಿಪ್ರಾಯವನ್ನು ಅದರಲ್ಲು ತಜ್ಞವೈದ್ಯರ ಅಭಿಪ್ರಾಯವನ್ನು ಮನ್ನಿಸುವುದು. ಒಪ್ಪಿಕೊಳ್ಳುವುದು ಸರಿಯಾದದ್ದು. ವೈದ್ಯರ ಅಭಿಪ್ರಾಯವನ್ನು ಶಂಕಿಸಬಾರದು. ವೈದ್ಯರ ಮಾತಿನಲ್ಲಿ ಅಪನಂಬಿಕೆ ಸಲ್ಲದು. ಇದು ನನ್ನ ಅತ್ಯಂತ ಕಳಕಳಿಯ ಮನವಿ. ಮುಂದೆ ಲೊರೆಂಜೊ ಘಟನೆಯನ್ನು ಪ್ರಸ್ತಾಪಿಸಿದೆ.

ವೈದ್ಯರು ತಮ್ಮ ಮಗನ ಸ್ಥಿತಿ ಆಶಾಹೀನ ಎಂದು ಮನದಟ್ಟುವಂತೆ ಹೇಳಿದಾಗ ಮೈಕೇಲ ಮತ್ತು ಆಗಸ್ಟೊ ಓಡೋನ್ ಎಂಬವರು ವೈದ್ಯಕೀಯದಲ್ಲಿ ಪವಾಡ ಒಂದನ್ನ ಬಹುದಾದ ಮಾರ್ಗವನ್ನು ಕಂಡುಕೊಳ್ಳಲು ಉಪಕ್ರಮಿಸಿದರು.

ಆಗಸ್ಟೊ ಹಾಗೂ ಮೈಕೇಲ ಓಡೋನರು ಅನಂತರದ ದಿನಗಳಲ್ಲಿ ತಮ್ಮ ಸ್ಥಿತಿಯನ್ನು ನರಕಕ್ಕೆ ಇಳಿತ ಎಂದು ವಿವರಿಸಿದ ಪ್ರಸಂಗದ ಎಚ್ಚರಿಕೆಯ ಮುನ್ಸೂಚನೆ ಮೊದಲು ಗೊತ್ತಾಗುವಂತೆಯೇ ಇರಲಿಲ್ಲ. ಆಫ್ರಿಕಾಖಂಡದ ಬಲತೀರದ ಹತ್ತಿರ ಇರುವ ಕೊಮೊರೊ ದ್ವೀಪಗಳಲ್ಲಿ ಮೂರು ವರ್ಷ ಕೆಲಸ ಮಾಡಿ ೧೯೮೩ರ ಮಾಗಿ ಕಾಲದಲ್ಲಿ ಇವರು ತಮ್ಮ ೫ ವರ್ಷ ವಯಸ್ಸಿನ ಕಟ್ಟುಮಸ್ತಾದ ಮಗ ಲೊರೆಂಜೊವಿನೊಡನೆ ಆಗತಾನೇ ವಾಷಿಂಗ್‌ಟನ್ನಿನಲ್ಲಿ ವಾಸಮಾಡಲು ಬಂದಿದ್ದರು. ವಿಶ್ವಬ್ಯಾಂಕಿನ ಆರ್ಥಿಕ ವಿಷಯ ತಜ್ಞ ಆಗಿ ಈ ನೂತನ ರಿಪಬ್ಲಿಕ್‌ನ ಅಭಿವೃದ್ಧಿ ಯೋಜನೆಯನ್ನು ತಯಾರಿಸಲು ಆಗಸ್ಟೊ ಸಂಸಾರ ಸಮೇತ ಅಲ್ಲಿಗೆ ಹೋಗಿದ್ದ.

ಮೈಕೇಲ ಮತ್ತು ಆಗಸ್ಟೊ ೧೯೭೭ರಲ್ಲಿ ವಿವಾಹವಾಗಿದ್ದರು. ಮುಂದಿನ ವರ್ಷ ಅವರ ಒಬ್ಬನೇ ಮಗ ಲೊರೆಂಜೊ ಹುಟ್ಟಿದ. ಆಗ ಮೈಕೇಲಳಿಗೆ ೩೯ ವರ್ಷ; ಆಗಸ್ಟೊಗೆ ೪೫. ನಗುಮುಖದ ತಂಟೆಕೋರ ಲೊರೆಂಜೊ. ಆ ಉಷ್ಣವಲಯದ ಹವದಲ್ಲಿ ಸ್ಥಳೀಯ ಹುಡುಗರಂತೆಯೇ ಗಿಡಮರಗಳನ್ನು ಏರಲೂ ಸಮುದ್ರದಲ್ಲಿ ಈಜಲೂ ಕಲಿತಿದ್ದು ದೃಢಕಾಯನಾಗಿ ಬೆಳೆದಿದ್ದ. ಓಡೋನರ ಮನೆಯ ಆಡು ಭಾಷೆಗಳಾದ ಇಂಗ್ಲಿಷ್, ಫ್ರೆಂಚ್ ಇಟಾಲಿಯನ್ ಇವು ಮೂರನ್ನೂ ಕಲಿಯುತ್ತಿದ್ದ. ಸಂಗೀತವೆಂದರೆ ಇವನಿಗೆ ಬಹು ಆಸೆ. "ನಮ್ಮ ಮಗ ನಮ್ಮ ಜೀವಮಾನದಲ್ಲಿ

ತಡವಾಗಿ ಹುಟ್ಟಿದರೂ ಅವನು ದೈವದತ್ತನೆಂದೇ ನಿಜವಾಗಿ ತಿಳಿದು ಆದರಿಸುತ್ತೇವೆ" ಎಂದು ಮೈಕೇಲ ಹೇಳುತ್ತಿದ್ದಳು.

ವಾಷಿಂಗ್‌ಟನ್ನಿಗೆ ಬಂದ ಮೇಲೆ ಲೊರೆಂಜೊ ವಿಷಯದಲ್ಲಿ ಅವರಿಗೆ ಬಹು ಭೀತಿ ವಿನಾಕಾರಣ ಬೆನ್ನು ಹತ್ತಿತು. ಮೊದ ಮೊದಲು ಅವನ ತಂದೆ ತಾಯಿಗಳಿಗೆ ಮಾತ್ರ ಪತ್ತೆ ಆಗುವಂತೆ ಅವನು ಮಾತುಗಳನ್ನು ತೇಲಿಸಿ ಆಡುವುದು ಗೊತ್ತಾಯಿತು. ಹುಡುಗ ಹಟಮಾರಿ ಆದ. ಒಂದು ರೀತಿ ಮರವು ಕಂಡು ಬಂದು ಶಾಲೆಯಲ್ಲಿ ಶೌಚಾಲಯಕ್ಕೆ ಹೋಗುವಾಗಲೂ ದಾರಿ ತಪ್ಪುತ್ತಿದ್ದ.

ಚಿಂತಾಕ್ರಾಂತಳಾಗಿ ಮೈಕೇಲ ಅವರನ್ನು ವೈದ್ಯ ತಪಾಸಣೆಗಾಗಿ ಒಯ್ದಳು. ಅವನನ್ನು ಪರೀಕ್ಷಿಸಿದ ನರರೋಗ ವೈದ್ಯ ಇವನಿಗೆ ನರರೋಗ ಏನೂ ಇಲ್ಲ ಬಹುಶಃ ಬಾಕಿಯವರಿಗಿಂತ ಭಿನ್ನ ಪ್ರತಿಕ್ರಿಯೆ ತೋರಿಸುತ್ತಾನೆ, ಅಷ್ಟೆ" ಎಂದು ಹೇಳಿದ.

೧೯೮೩ನೆ ವರ್ಷದ ಕೊನೆ ದಿನಗಳಲ್ಲಿ ಲೊರೆಂಜೊ ತನ್ನ ಅಜ್ಜಿಯ ಜೊತೆ ಫೋನಿನಲ್ಲಿ ಮಾತಾಡಿ "ಅಜ್ಜಿ ಹೇಳಿದ್ದು ಏನೂ ಕೇಳಲೇ ಇಲ್ಲ" ಎಂದು ಬೇಜಾರಿನಿಂದ ಫೋನನ್ನು ಮೈಕೇಲಳಿಗೆ ಕೊಟ್ಟು ಇದು ಏಕೆ ಎಂದು ಅವಳು ಅವನ ಶ್ರವಣ ಸಾಮರ್ಥವನ್ನು ವೈದ್ಯರು ಮಾಪಿಸುವಂತೆ ಮಾಡಿ ಅದು ಸುಮಾರು ಅರ್ಧದಷ್ಟು ಕ್ಷೀಣಿಸಿದ್ದನ್ನು ಕಂಡುಕೊಂಡಳು.

ನಿರಾಶಾದಾಯಕ ಭವಿಷ್ಯ:

ಬೇರೆ ವೈದ್ಯಾಭಿಪ್ರಾಯಕ್ಕಾಗಿ ಓಡೋನರು ಮಗನನ್ನು ವಾಷಿಂಗ್‌ಟನ್ನಿನ ನ್ಯಾಷನಲ್ ಮೆಡಿಕಲ್ ಸೆಂಟರಿನ ಮಕ್ಕಳ ನರರೋಗ ವೈದ್ಯ ಡಾ. ರೋನಾಲ್ಡ್ ಫಿಷ್‌ಮನ್‌ಗೆ ತೋರಿಸಿದಾಗ ಅವನು "ರಕ್ತ ಪರೀಕ್ಷೆ ಹಾಗೂ ಸಿ.ಟಿ. ಸ್ಕ್ಯಾನಿಂಗ್‌ಗಳನ್ನು ಮಾಡಿಸಬೇಕು. ಆಮೇಲೆ ನನ್ನ ಆಫೀಸಿಗೆ ಬನ್ನಿ" ಎಂದು ತಿಳಿಸಿದ. ಆಗಸ್ಟ್ ೧೯೮೪ರ ಏಪ್ರಿಲ್ ದಿನವನ್ನು ಓಡೋನರು ಮರೆಯುವಂತೇ ಇಲ್ಲ. ಡಾಕ್ಟರನ್ನು ಕಂಡಾಗ ಆತ ಅವರಿಗೆ ಹೇಳಿದ: "ನಿಮಗೆ ಬಹು ಕೆಟ್ಟ ಸಮಾಚಾರವಿದೆ. ತೀರ ಅಪರೂಪವಾದ ಅಡ್ರೀನೋ ಲೂಕೊಡಿಸ್ಟ್ರೊಫಿ(ACD) ಎಂಬ ವ್ಯಾಧಿಗೆ ಅವನು ಈಡಾಗಿದ್ದಾನೆ. ಇದು ಮಿದುಳಿನಲ್ಲಿ ಬಿಳಿಭಾಗವನ್ನು ಕ್ರಮೇಣ ನಾಶಮಾಡುತ್ತ ಹೋಗುತ್ತದೆ. ಅದನ್ನು ತಡೆಗಟ್ಟಲು ಮದ್ದೇ ಇಲ್ಲ. ನಿಮ್ಮ ಮಗ ಮಾತು, ದೃಷ್ಟಿ ಹಾಗೂ ಚಲನೆಗಳನ್ನು ಕ್ರಮೇಣ ಕಳೆದುಕೊಂಡು ನಿಸ್ಸಹಾಯಕನಾಗಿ ಕೊನೆಗೆ ಮೃತನಾಗುತ್ತಾನೆ" ಎಂದು ಈ ಭೀಕರ ವಿಷಯವನ್ನು ತಂದೆ ತಾಯಿಗಳು ನಂಬಲೇ ಆಗದಾದರು. "ಇನ್ನೆಷ್ಟು ದಿನ" ಎಂದು ಕೊನೆಗೆ ಆಗಸ್ಟೊ ಕೇಳಿದ. "ಸರಾಸರಿ ಎರಡು ವರ್ಷ ಅಷ್ಟೆ" ಎಂದು ವೈದ್ಯ ಹೇಳಿದ.

ತಲ್ಲಣಿಸುವ ಈ ಸಮಾಚಾರದಿಂದ ದಿಗ್ಭ್ರಾಂತರಾದ ಓಡೋನರು ವಾಪಸಾದಾಗ ಅವರಿಬ್ಬರಿಗೂ ಡಾ. ಫಿಷ್‌ಮನ್ನನ ಅಭಿಪ್ರಾಯ ತಪ್ಪಿರಬಹುದು ಎನ್ನಿಸಿತು. ಮೈಕೆಲ ವೈದ್ಯರೂ ತಪ್ಪು ಮಾಡುತ್ತಾರೆ" ಎಂದಳು.

ರೋಗ ಅದೇ ಎಂದು ಸ್ಥಿರ ಆಗುವ ಮುನ್ನವೇ ಧೃಡ ಮನಸ್ಕರಾದ ಓಡೋನರುಗಳಿಬ್ಬರೂ ಈ ರೋಗದ ವಿಷಯವಾಗಿ ತಮ್ಮ ಕೈಲಾದಷ್ಟು ಮಟ್ಟಿಗೂ ಪೂರ

ತಿಳಿದು ಕೊಳ್ಳಲು ನಿರ್ಧರಿಸಿದರು. ರೋಗದ ವಿಷಯ ತಿಳಿಯಲು ಎಲ್ಲಿ ಏನನ್ನು ಅವಲೋಕಿಸಬೇಕು ಎಂದು ಒಬ್ಬ ತರುಣ ವೈದ್ಯನನ್ನು ಕೇಳಿದರು. ತೊಂದರೆ ತೆಗೆದು ಕೊಳ್ಳಬೇಕಾಗಿಲ್ಲ; ಅದರ ವಿಷಯ ಹೆಚ್ಚಿಗೆ ಬರೆದಿಲ್ಲ ; ಬರೆದಿರುವುದೂ ನಿಮಗೆ ಅರ್ಥವಾಗುವುದಿಲ್ಲ. ಎಂದು ಅವನು ಮೊಟಕಾಗಿ ಹೇಳಿದ. ಈ ಒರಟು ಜವಾಬು ಅವರ ನಿರ್ಧಾರವನ್ನು ಇನ್ನೂ ಬಲಪಡಿಸಿತು.

ಮಾರನೆ ದಿನ ಆಗಸ್ಟೊ ನ್ಯಾಷನಲ್ ಇನ್ ಸ್ಟಿಟ್ಯೂಟ್ ಆಫ್ ಹೆಲ್ತ್‌ನ ಪುಸ್ತಕಾಲಯಕ್ಕೆ ಹೋದ. ಅವನ ಆಸಕ್ತಿ ಕಾನೂನು ಹಾಗೂ ಆರ್ಥಿಕ ವಿಷಯಗಳಲ್ಲಿ. ಆದರೆ ಅವನ ಮಗನನ್ನು ಈ A. L. D ಭೂತ ಕೊಲ್ಲುತ್ತಿತ್ತು. ಆ ಶತ್ರುವಿನ ವಿಷಯ ಪೂರ್ಣವಾಗಿ ತಿಳಿದುಕೊಳ್ಳಲು ಅವನು ನಿರ್ಧರಿಸಿದನು.

ಅಲ್ಲಿ ಆಗಸ್ಟೊ ತಿಳಿದುಕೊಂಡಿದ್ದು ಇದು : A. L. D ರೋಗಿಯ ವಿಶೇಷ ಲಕ್ಷಣ ಅವನ ದೇಹದಲ್ಲಿ ಅತಿ ಲಂಬ ಸರಪಣಿಯ ಮೇದೋಆಮ್ಲಗಳು (Very long chain fatty acids—V. L. C. F. A) ಉತ್ಪತ್ತಿ ಆಗಿ ಶೇಖರವಾಗುವುದು. ನರತಂತುಗಳನ್ನು ಹೊದ್ದು ಅವುಗಳ ಕ್ರಿಯೆ ಸುಗಮವಾಗಿರುವಂತೆ ಮಾಡುವ ಮೈಯಲಿನ್ ಎಂಬ ವಸ್ತುವನ್ನು ಈ V. L. C. F. A ಗಳು ನಾಶಮಾಡಿ ನರಗಳ ಕ್ರಿಯೆಗೆ ಧಕ್ಕೆ ಮಾಡುತ್ತವೆ; ತತ್ಫಲವಾಗಿ ಸರ್ವ ವಿಧವಾದ ಚಲನಗಳೂ ಹೆಚ್ಚು ಹೆಚ್ಚ ಕಷ್ಟವಾಗಿ ಕೊನೆಗೆ ತಿನ್ನುವುದು, ಉಸಿರಾಡುವುದು ಇವೂ ಸಾಧ್ಯವಾಗದೆ ಸ್ಥಿತಿ ಮಾರಕವಾಗುತ್ತದೆ. A. L. D ಅಜನ್ಮ ರೋಗ. ಗಂಡಸರಲ್ಲಿ ಮಾತ್ರ ವ್ಯಕ್ತವಾಗುವ ಹಾಗೂ ಹೆಂಗಸರಲ್ಲಿ ಸುಪ್ತವಾಗಿರುವಂಥದು. ಸ್ತ್ರೀಯರಲ್ಲಿ ರೋಗ ಸುಪ್ತವಾಗಿದ್ದರೂ ಅವರ ಮಕ್ಕಳಲ್ಲಿ ಅರ್ಧ ಮಕ್ಕಳಿಗೆ ಈ ರೋಗ ಅಜನ್ಮವಾಗಿ ದತ್ತವಾಗುತ್ತದೆ. ಗಂಡು ಮಕ್ಕಳಲ್ಲಿ ರೋಗ ವ್ಯಕ್ತಪಡುತ್ತದೆ; ಹೆಣ್ಣು ಮಕ್ಕಳಲ್ಲಿ ತಾಯಿಯಂತೆಯೇ ಸುಪ್ತವಾಗಿರುತ್ತದೆ. ಈ ವಿಚಿತ್ರ ಅನುವಂಶಿಕತೆ ಅಲ್ಪಗಾಯದಿಂದ ಅಧಿಕ, ಬಹುಷಃ ಪ್ರಾಣಾಂತಿಕ ರಕ್ತಸ್ರಾವ ಆಗುವ ಹೀಮೋಫೀಲಿಯ ಎಂಬ ರೋಗದಲ್ಲಿಯಂತೆಯೇ. ರೋಗದ ವಿಷಯ ಇಷ್ಟು ತಿಳಿಯಿತು. ಮೇ ತಿಂಗಳಲ್ಲಿ ಡಾ॥ ಫಿಷ್‌ಮನ್ನನ ಅಭಿಪ್ರಾಯ ತಪ್ಪಾಗಿರಬಹುದು ಎಂಬ ಅವರ ಆಸೆ ಕೊನೆಗೊಂಡಿತು. ಬಾಲ್ಟಿಮೋರಿನ ಜಾನ್. ಎಫ್ ಕೆನ್ನಡಿ ನಾಮಾಂಕಿತ ಅಂಗವಿಕಲ ಮಕ್ಕಳ ಆಸ್ಪತ್ರೆಯ ನರವೈದ್ಯ ಹ್ಯೂಗೋಮೋಸರ್ ಹಾಗೂ ಅವನ ಹೆಂಡತಿ ಜೀವರಸಾಯನ ಶಾಸ್ತ್ರಜ್ಞೆ ಆನ್ ಎಂಬುವರು ಲೊರೆಂಜೊವಿಗೆ ಇದ್ದ ರೋಗವನ್ನು ರಕ್ತದಲ್ಲಿ ಅದರ ವಿಶಿಷ್ಟ ಲಕ್ಷಣಗಳಿಂದ ಸ್ಥಿರೀಕರಿಸಿದರು. ಇವರಿಬ್ಬರೂ A. L. D ವಿಷಯದಲ್ಲಿ ವಿಶೇಷತಜ್ಞರು ಎನ್ನಿಸಿಕೊಂಡವರು.

ಇಷ್ಟಾದರೂ ಓಡೋನರು ಮಗನನ್ನು ಬದುಕಿಸಿಕೊಳ್ಳಬಹುದೆಂಬ ಆಸೆಯನ್ನು ಕೈ ಬಿಡಲಿಲ್ಲ. "ಸಂಪ್ರದಾಯದ ವಿವೇಕವನ್ನು ಯಾರೂ ಒಪ್ಪಿಕೊಳ್ಳದ ಕುಟುಂಬಕ್ಕೆ ಸೇರಿದವನು ನಾನು ; ಕೇವಲ ನಮ್ಮ ಕುತೂಹಲಕ್ಕಾಗಲಿ, ವೈದ್ಯರುಗಳಿಗೆ ಒಂದು ಕೈ ತೋರಿಸಬೇಕೆಂದಾಗಲಿ ನಮ್ಮ ಪ್ರಯತ್ನ

ಅಲ್ಲವೇ ಅಲ್ಲ; ಈ ಮಗುವನ್ನು ನಾವು ಪ್ರೀತಿಸುತ್ತೇವೆ; ಅವನನ್ನು ಕಳೆದುಕೊಳ್ಳಲಾರೆವು ; ಶತ್ರು ಯಾರು? ಕೆಟ್ಟ ಗುಣದ V. L. C. F. A ಗಳಲ್ಲವೆ? ಅವನ್ನು ನಿರ್ಮೂಲ ಮಾಡುವ ದಾರಿಯನ್ನು ಹುಡುಕೋಣ" ಎಂದು ಆಗಸ್ಟೊ ಹೇಳಿ ಪ್ರಯತ್ನವನ್ನು ಮುಂದುವರಿಸಿದ.

ಆಹಾರದಲ್ಲಿ ಲಂಬ ಸರಪಣಿಯ ಮೇದೋ ಆಮ್ಲಗಳು ಇಲ್ಲವೇ ಇಲ್ಲವೇನೋ ಎನ್ನುವಂಥದನ್ನು ಲೊರೆಂಜೋವಿಗೆ ಕೊಡಲು ಪ್ರಾರಂಭಿಸಿದರು. ಆದರೂ ಅವನ ರಕ್ತದಲ್ಲಿ V. L. C. F. A ಮಟ್ಟ ಇಳಿಯಲಿಲ್ಲ ಹುಡುಗ ಕುರ್ಚಿ ಮೇಜುಗಳನ್ನು ಎಡವಲು ಪ್ರಾರಂಭಿಸಿದ. ಅವನು ತತ್ತರಿಸುತ್ತ ಗೋಡೆಗೆ ಡಿಕ್ಕಿ ಹೊಡೆದು ಗಾಯ ಮಾಡಿಕೊಳ್ಳದಂತೆ ಮೈಕೇಲ ಗೋಡೆಗಳಿಗೆ ಒರಗುಗಳನ್ನು ಕೊಟ್ಟಳು ಕೆಲ ಕಾಲಾನಂತರ ಅವನ ದೃಷ್ಟಿ ಮಂದವಾಯಿತು. ಕಿವುಡು ಹೆಚ್ಚಾಯಿತು. ಮೈಕೇಲ ಮಾತುಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ತುಟಿಗಳನ್ನು ನಾಲಿಗೆಯನ್ನು ಚಲಿಸುತ್ತ ಅವನಿಗೆ ತಿಳಿಯ ಹೇಳಬೇಕಾಯಿತು. ಅವಳು ಮಗನಿಗೆ "ಮನಸ್ಸಿಗೆ ಹಚ್ಚಿಕೊಳ್ಳಬೇಡ ಕಂದ, ನಾವು ನಿನ್ನನ್ನು ಪೀಡಿಸುತ್ತಿರುವ ರೋಗವನ್ನು ಖಂಡಿತ ಹೊಡೆದೋಡಿಸುತ್ತೇವೆ" ಎಂದು ಹೇಳುತ್ತಿದ್ದಳು.

ಆಶಾಕಿರಣ

ಓಡೋನರು A. L. D ವಿಷಯವಾಗಿ ಒಂದು ವಿಶ್ವಸಮ್ಮೇಳನಕ್ಕೆ ಕೆನಡಿ ಆಸ್ಪತ್ರೆ ಕರೆ ಕೊಡುವುದಾದರೆ ತಾವು ಹೇಗಾದರೂ ಮಾಡಿ ಅದು ಕಾರ್ಯಗತವಾಗುವಂತೆ ಶ್ರಮಿಸುವುದಾಗಿಯೂ ಅದರ ಖರ್ಚನ್ನು ವಹಿಸಿಕೊಳ್ಳುವುದಾಗಿಯೂ ಡಾ|| ಮೋಸರ್‌ಗೆ ಹೇಳಿದರು. ಕೆನಡಿ ಸಂಸ್ಥೆ ಒಪ್ಪಿಕೊಂಡಾಗ ಬಾಲ್ಟಿಮೋರಿನಲ್ಲಿ ಜರಗುವ ೨ ದಿನಗಳ ಸಮ್ಮೇಳನ ಖರ್ಚು ೩೬,೦೦೦ ಡಾಲರ್‌ಗಳನ್ನು ಹೇಗೋ ಒದಗಿಸಿದರು.

ಸಮ್ಮೇಳನಕ್ಕೆ ಯೂರೋಪ್, ಜಪಾನ್ ಹಾಗೂ ಸಂಯುಕ್ತ ಸಂಸ್ಥಾನದ ಮಿಕ್ಕ ಕಡೆಗಳಿಂದ ಹಲ ಜನ ತಜ್ಞರು ಸೇರಿದರು. ಅವರಲ್ಲಿ ಒಂದು ಮುಖ್ಯ ವಿಷಯ ಬೆಳಕಿಗೆ ಬಂತು. ವರ್ಜೀನಿಯ ಮೆಡಿಕಲ್ ಕಾಲೇಜಿನಲ್ಲಿ ಮಕ್ಕಳ ರೋಗ ಹಾಗೂ ಅನುವಂಶಿಕ ಶಾಸ್ತ್ರದ ಸಹ ಪ್ರಾಧ್ಯಾಪಕನಾದ ಡಾ|| ವಿಲಿಯಮ್ ರಿಸ್ಸೊ ತನ್ನ ಸಂಶೋಧನ ವ್ಯಾಸಂಗದಲ್ಲಿ ಆಲಿವ್ ಎಣ್ಣೆಯ ಮುಖ್ಯ ಘಟಕವಾದ ಓಲಿಯಿಕ್ ಆಮ್ಲವನ್ನು ಬಳಸಿ V. L. C. F. A ಗಳ ಮಟ್ಟವನ್ನು ತಗ್ಗಿಸಲು ಸಮರ್ಥನಾಗಿದ್ದೆನೆಂದು ಹೇಳಿದ. ಆದರೆ ಅದು ಪ್ರಾಣಿಗಳ ಮೇಲಲ್ಲದೆ ಪ್ರಯೋಗಾಲಯ ನಳಿಕೆಗಳಲ್ಲಿ ನಡೆಸಿದ ವ್ಯಾಸಂಗ ಆಗಿತ್ತು. ಅಲ್ಲದೆ ಅವನು ಬಳಸಿದಂಥ ಶುದ್ಧ ಓಲಿಯಿಕ್ ಆಮ್ಲ ಸುಲಭವಾಗಿ ದೊರೆಯುವಂತಿರಲಿಲ್ಲ. ಜೊತೆಗೆ ಅದು ಜೀವಿಗಳಲ್ಲಿ ಪಾಷಾಣವಾಗಿ ವರ್ತಿಸಬಹುದು ಎಂದು ಅನೇಕರು ಅಭಿಪ್ರಾಯಪಟ್ಟರು.

ಇಷ್ಟು ಹೊತ್ತಿಗೆ ರೋಗ ಲೊರೆಂಜೊವಿಗೆ ಅಧಿಕ ಹಾನಿಮಾಡಿತ್ತು. ಅವನ ಕಿವಿ ಪೂರ ಕಿವುಡಾಯಿತು. ; ದೃಷ್ಟಿ ಶೀಘ್ರರೀತಿಯಲ್ಲಿ ಕ್ಷೀಣಿಸುತ್ತ ಬಂತು. ನವೆಂಬರ್ ಕೊನೆಯ ಹೊತ್ತಿಗೆ ಅವನು ನಡೆಯಲೂ ಆಗದಾದ.

ಡಿಸೆಂಬರ್ ಪ್ರಾರಂಭದಲ್ಲಿ ಆಹಾರ ನುಂಗಲು ಆಗದೇ ಆಗದೇನೋ ಎನ್ನಿಸುತ್ತಿತ್ತು. ಆದರದಿಂದ ಅಗಸ್ಟೊ ತಯಾರಿಸುತ್ತಿದ್ದ ಹಾಗೂ ಲೊರೆಂಜೋವಿಗೆ ಇಷ್ಟವಾದ ಆದರೆ ಜಿಡ್ಡುರಹಿತವಾದ ಆಹಾರವನ್ನು ಲೊರೆಂಜೋವನ್ನು ಎತ್ತಿಕೊಂಡೇ ಮೈಕೇಲ ಚಮಚದಲ್ಲಿ ತಿನ್ನಿಸುತ್ತಿದ್ದಳು. ಕೊನೆಗೆ ಅತಿ ಸಣ್ಣ ತುತ್ತನ್ನೂ ಅವನು ನುಂಗಲಾರದಾದ ಗಂಟಲಿನ ಮೂಲಕ ನಳಿಕೆ ಹಾಕಿ ಅವನಿಗೆ ಊಡಿಸ ಬೇಕಾಯಿತು. ಇದನ್ನು ತಿಳಿದು ಡಾ. ಫಿಷ್ ಮನ್ ಲೊರೆಂಜೊ ಕೆಲವೇ ವಾರಗಳಲ್ಲಿ ಮೃತನಾಗಬಹುದು ಎಂದು ಹೇಳಿದ.

ತಜ್ಞ ವೈದ್ಯನ ಈ ಅಭಿಪ್ರಾಯದಿಂದ ಮೈಕೇಲ ಹತಾಶಳಾದಳು. ತನಗೆ ತಿಳಿದು ಬಂದ ರಾಸಾಯನಿಕ ತಯಾರಿಕ ಕಂಪೆನಿ ಗಳಿಗೆಲ್ಲ ತಿನ್ನಲು ಯೋಗ್ಯವಾದ ಓಲಿಯಿಕ ಆಮ್ಲ ಸಿಕ್ಕುತ್ತದೆಯೆ ಎಂದು ಫೋನ್ ಮಾಡಹತ್ತಿದಳು. ನಲವತ್ತಕ್ಕೂ ಮೀರಿ ವಿಚಾರಿಸಿದ ಮೇಲೆ ಓಹಿಯೋನಲ್ಲಿ ಒಂದು ಕಂಪೆನಿ ಇಂಥ ಓಲಿಯಿಕ ಆಮ್ಲವನ್ನು ಸರಬರಾಜು ಮಾಡಲು ತಯಾರಿಸುವುದು ತಿಳಿಯಿತು. "ಆತುರ ಮಾಡಿ" ಎಂದು ಮೈಕೇಲ ಅವರನ್ನು ಬೇಡಿದಳು.

ಆಮ್ಲದ ಮೊದಲ ಬಾಟಲ್ ಕೈಸೇರಿ ದಾಗ ಅದನ್ನು ತಾನೇ ಮೊದಲು ಸೇವಿಸಿ ನೋಡುತ್ತೇನೆ ಎಂದು ಮೈಕೇಲಳ ಸಹೋ ದರಿ ಡೀರ್‌ಡ್ರೆ ಮುಂದಾದಳು. ವೈದ್ಯ ಕೀಯ ತನಿಖೆಗಳಿಂದ ಅವಳೂ, ಮೈಕೇಲ, ಅವರ ತಾಯಿ ಹಾಗೂ ಇನ್ನೊಬ್ಬ ಸಹೋ ದರಿ ಎಲ್ಲರೂ ಎಎಲ್‌ಡಿ ವಾಹಕರಾಗಿದ್ದುದು ಗೊತ್ತಾಗಿತ್ತು. ಇವರಂತಿದ್ದ ಬಹುಪಾಲು ಸ್ತ್ರೀವ್ಯಕ್ತಿಗಳಂತೆ ಇವರುಗಳಿಗೂ ಆ ಸ್ಥಿತಿ ಯಿಂದ ಸ್ವತಃ ಏನೂ ತೊಂದರೆ ಇರಲಿಲ್ಲ.

ಡೀರ್‌ಡ್ರಗ್ ಓಲಿಯಿಕ್ ಆಮ್ಲ ತೆಗೆದು ಕೊಂಡಿದ್ದರಿಂದ ಯಾವ ಅಹಿತವೂ ಆಗ ಲಿಲ್ಲ. ಅಲ್ಲದೆ ಅವಳ ರಕ್ತಪರೀಕ್ಷೆ ಮಾಡಿ ದಾಗ ವಿಎಲ್‌ಸಿಎಫ್‌ಎ ಮಟ್ಟ ಇಳಿ ದಿದ್ದುದು ತಿಳಿಯಿತು. ಓಡೋನರು ಅಡಿ ಗೆಗೆ ಈ ಆಮ್ಲವನ್ನು ಬಳಸುತ್ತ ಲೊರೆಂಜೊ ವಿಗೆ ಕೊಡಹತ್ತಿದರು. ಮೈಕೇಲ ನಳಿಕೆಯ ಮೂಲಕ ಊಡಿಸಲು ಅನುಕೂಲವಾಗು ವಂತೆ ಅಗಸ್ಟೊ ಉಣಿಸುಗಳನ್ನು ತಕ್ಕರೀತಿ ಸಿದ್ಧಗೊಳಿಸುತ್ತಿದ್ದ.

ಆರುವಾರಗಳಾಗುವಲ್ಲಿ ಲೊರೆಂಜೋವಿನ ವಿಎಲ್‌ಸಿಎಫ್‌ಎ ಮಟ್ಟ ಅರ್ಧಕ್ಕೆ ಇಳಿ ಯಿತು. ಆದರೂ ಇದು ಆರೋಗ್ಯ ವ್ಯಕ್ತಿ ಗಳ ಎರಡರಷ್ಟಿತ್ತು. ಲೊರೆಂಜೋವಿನ ದೇಹ ಸ್ಥಿತಿ ಕಿಂಚಿತ್‌ಮಾತ್ರ ಉತ್ತಮವೇನೋ ಎನ್ನಿಸಿತು. ವೈದ್ಯರು ಅವನು ಗುಣವಾಗ ಲಾರ ಎಂದು ಆಗಲೂ ಅಭಿಪ್ರಾಯಪಟ್ಟರೂ ಓಡೋನರು ಅದನ್ನು ಒಪ್ಪದೇಹೋದರು. ಅಲ್ಲದೆ ತಮ್ಮ ಮಗನ ಜೀವ ಉಳಿಸಲು ತಮಗೆ ಸಾಧ್ಯವಾದದ್ದನ್ನೆಲ್ಲ ಮಾಡಲು ಹಠ ತೊಟ್ಟರು.

ಅಮೂಲ್ಯ ಮುದ್ದು : ತಿನಿಸುಗಳ ಬದಲಾವಣೆಯಿಂದ ಪ್ರಾಯೋಗಿಕ ಪ್ರಾಣಿ ಗಳ ದೇಹದಲ್ಲಿ ಉದ್ಭವಿಸುವ ಮೇದಸ್ಸುಗಳ ವೈವಿಧ್ಯತೆಗಳನ್ನು ತೋರಿಸುವ ಸಂಕೀರ್ಣ ಪಟ್ಟಿಯನ್ನು ಒಂದು ರಾತ್ರಿ ಅಗಸ್ಟೊ ಪರಿಶೀಲಿಸುತ್ತ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದ. ಆ ಸಮಯದಲ್ಲಿ ಅವ ನಿಗೆ ಒಂದು ಸಂಗತಿ ಹೊಳೆಯಿತು. ಓಲಿ ಯಿಕ್ ಆಮ್ಲವೇನೋ ಬಹುವಿಧವಾದ

ವಿಎಲ್‌ಸಿಎಫ್‌ಎಗಳ ಮಟ್ಟವನ್ನು ಕಡಿಮೆ ಮಾಡುವುದು ಉಂಟು. ಬಹುಶಃ ಓಲಿಯಿಕ್ ಆಮ್ಲದಂಥ ಇನ್ನೊಂದು ಆಮ್ಲ ವಿ:ಕ್ಕ ವಿಎಲ್‌ಸಿಎಫ್‌ಎಗಳ ಮಟ್ಟವನ್ನು ತಗ್ಗಿಸಬಹುದಲ್ಲ; ಸಾಸಿವೆಗಿಡದ ಜಾತಿಗೆ ಸೇರಿದ ರೇಪ್‌ಸೀಡ್ ಗಿಡದ ಕಾಳುಗಳ ಎಣ್ಣೆಯಲ್ಲಿರುವ ಎರೂಸಿಕ್ ಆಮ್ಲ ಈ ಕ್ರಿಯೆಯನ್ನು ಮಾಡುತ್ತೆಂದು ತೋರುತ್ತೆ ಎಂದುಕೊಂಡ. ಆದರೆ ಈ ಆಮ್ಲವನ್ನು ಬಳಸಿನೋಡುವುದು ಬಹು ಕೇಡುಕಾರಕವಾಗಬಹುದು ಎಂದು ಡಾ. ಮೋಸ್ಕರ್ ಅಭಿಪ್ರಾಯಪಟ್ಟ; ಏಕೆಂದರೆ ಪ್ರಯೋಗಾಲಯದಲ್ಲಿ ಈ ಆಮ್ಲವನ್ನು ಇಲಿಗಳಿಗೆ ಹೆಚ್ಚಾಗಿ ಉಣಿಸಿದಾಗ ಅವುಗಳ ಹೃದಯಕ್ಕೆ ಧಕ್ಕೆ ಆಗುವುದು ತಿಳಿದಿತ್ತು.

ಆದರೆ ಪುನಃ ಓಡೋನರು ಈ ತಜ್ಞ ವೈದ್ಯಕೀಯ ಅಭಿಪ್ರಾಯವನ್ನು ಅಲಕ್ಷಿಸಲು ನಿರ್ಧರಿಸಿದರು. ಎರೂಸಿಕ್ ಆಮ್ಲವನ್ನು ಬಳಸಿ ಸಂಶೋಧನೆ ಮಾಡುತ್ತಿದ್ದ ಪ್ರತಿ ಸಂಶೋಧಕನನ್ನೂ ಸಂಪರ್ಕಿಸಿ ವಿಷಯ ಸರಿಯಾಗಿ ತಿಳಿದುಕೊಳ್ಳಲು ಪ್ರಾರಂಭಿಸಿದರು. ಭಾರತ, ನಾರ್ವೆ ಹಾಗೂ ಫ್ರಾನ್ಸ್‌ಗಳಲ್ಲಿ ಆಗತಾನೇ ಜರುಗುತ್ತಿದ್ದ ವ್ಯಾಸಂಗಗಳಿಂದ ಎರೂಸಿಕ್ ಆಮ್ಲ ಬಳಕೆಯಿಂದ ಮನುಷ್ಯರ ಹೃದಯಕ್ಕೆ ಏನೂ ತೊಂದರೆ ಆಗುವುದಿಲ್ಲ ಎಂದು ವ್ಯಕ್ತಪಟ್ಟಿರುವುದು ಅವರ ಗಮನಕ್ಕೆ ಬಂತು. ಆದರೆ ಮಾನವರ ಬಳಕೆಗೆ ಲಾಯಕ್ಕಾದ ಎರೂಸಿಕ್ ಆಮ್ಲ ದ್ರಾವಣ ಸಿಕ್ಕಬೇಕಲ್ಲ. ಪುನಃ ವಿಚಾರಿಸುವುದಕ್ಕೆ ಪ್ರಾರಂಭ.

ಕೊನೆಗೆ ೧೯೮೬ರ ಮಾರ್ಚ್‌ನಲ್ಲಿ ಕ್ರೋಡಯೂನಿವರ್ಸಲ್ ಲಿಮಿಟೆಡ್ ಎಂಬ ಒಂದು ಬ್ರಿಟಿಷ್ ಕಂಪೆನಿ ಅಗತ್ಯ ದ್ರಾವಣವನ್ನು ತಯಾರಿಸಿಕೊಡಲು ಒಪ್ಪಿತು. ಅಲ್ಲಿಯ ಡೊನಾಲ್ಡ್ ಸಡ್ಡಬಿ ಎಂಬ ಹಿರಿಯ ಜೈವ ರಸಾಯನಶಾಸ್ತ್ರಜ್ಞ ದಿನಕ್ಕೆ ೧೨ ಗಂಟೆ ಕಾಲ, ವಾರಕ್ಕೆ ೭ ದಿನ ದ್ರಾವಣ ತಯಾರಿಕಾಕ್ರಮ ಕುರಿತು ಪ್ರಯೋಗ ಹಾಗೂ ತಯಾರಿಕೆಯನ್ನು ಮಾಡುತ್ತ ನವೆಂಬರ್ ತಿಂಗಳ ಹೊತ್ತಿಗೆ ಸುಮಾರು ಒಂದು ಕಿಲೊ ಈ ಅಮೂಲ್ಯ ತಿಳಿಹಳದಿ ದ್ರಾವಣವನ್ನು ತಯಾರಿಸಿ ಶೇಖರಿಸಿದ ಕೂಡಲೆ ಅದನ್ನು ಅಮೆರಿಕಕ್ಕೆ ವಿಮಾನದಲ್ಲಿ ಸಾಗಿಸಲಾಯಿತು. ಅದು ಏನಾತಿ ಸಮಯಕ್ಕೇ ಬಂದು ತಲುಪಿತು.

ಲೊರೆಂಜೊವನ್ನು ಕಡಿಮೆ ಮೇದಸ್ಸು ಇರುವ ಆಹಾರ ಮತ್ತು ಓಲಿಯಿಕ್ ಆಮ್ಲಗಳನ್ನು ಕೊಟ್ಟು ಸಲಹಿಕೊಂಡಿದ್ದರು. ಆದರೂ ಅವನ ಸ್ಥಿತಿಯಲ್ಲಿ ಯಾವ ಮೇಲ್ಮೆಯೂ ಕಂಡು ಬಂದಿರಲಿಲ್ಲ. ಒಂದು ದಿನ ಅವನಿಗೆ ಅದಿರುವಾಯು ಬಂದು ವೈಕೀಲ ಅವನನ್ನು ಜರೂರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಒಯ್ಯಬೇಕಾಯಿತು. ಈ ಸಮಯದಲ್ಲೆ ಕ್ರೋಡ ಕಂಪೆನಿ ಕಳಿಸಿದ್ದ ದ್ರಾವಣ ತಲುಪಿದ್ದು.

ಪುನಃ ಡೀರ್‌ಡ್ರೆ ಈ ಎರೂಸಿಕ್ ಆಮ್ಲ ಬಳಕೆಯ ಪ್ರಥಮ ಮಾನವ ವ್ಯಕ್ತಿ ಆದಳು. ಆಶ್ಚರ್ಯಕರವಾಗುವಂತೆ ಅವಳ ವಿಎಲ್‌ಸಿಎಫ್‌ಎ ಮಟ್ಟ ಇಳಿದು ಆರೋಗ್ಯ ಸ್ತರಲ್ಲಿರುವ ಮಟ್ಟಕ್ಕೆ ಬಂತು. ಲೊರೆಂಜೋವಿಗೆ ಈ ದ್ರಾವಣವನ್ನು ಕೊಟ್ಟಾಗ ಅವನ ರಕ್ತದ ವಿಎಲ್‌ಸಿಎಫ್‌ಎ ಮಟ್ಟ ದಿಢೀರನೆ ಇಳಿಯಿತು. ೨೪ ದಿನಗಳ

ಬಳಕೆಯ ನಂತರ ಇದು ಆರೋಗ್ಯವಾದ ಮಕ್ಕಳಲ್ಲಿನ ಮಟ್ಟಕ್ಕೇ ಬಂತು.

ವೈದ್ಯ ತಜ್ಞರನ್ನು ಕಕ್ಕಾಬಿಕ್ಕಿಮಾಡಿದ್ದ ಒಂದು ವೈದಕೀಯ ಸಮಸ್ಯೆ, ಪ್ರೀತಿ ಹಾಗೂ ಧೃಢನಂಬಿಕೆಯಿಂದ ಪಟ್ಟುಹಿಡಿದು ವ್ಯಾಸಂಗ ಜರುಗಿಸಿ ಸ್ವಂತ ಮಗನಮೇಲೆ ಮಾಡಿದ ಓಡೋನರ ಪ್ರಯೋಗದಿಂದ ಹೀಗೆ ಬಗೆಹರಿಯಿತು.

ಒಳ್ಳೆಯ ಫಲಿತಾಂಶಗಳು :

ಆ ಬೇಸಗೆಯಲ್ಲಿ ಕ್ರೋಡಕಂಪೆನಿ ಓಲಿಯಿಕ್ ಎರೂಸಿಕ್ ಆಮ್ಲಗಳ ಮಿಶ್ರಣವನ್ನು "ಲೊರೆಂಜೊ ತೈಲ" ಎಂಬ ಹೆಸರಿನಲ್ಲಿ ಮಾರುಕಟ್ಟೆಗೆ ಹಂಚಲು ಒಪ್ಪಿಕೊಂಡಿತು. ಡಾ॥ ರಿಸ್ಗೊ ಕೆಲವು ಎಲ್‌ಡಿ ಮಕ್ಕಳಿಗೆ ಅದನ್ನು ಚಿಕಿತ್ಸಕವಾಗಿ ಬಳಸಿ ಪರೀಕ್ಷಿಸುವುದಕ್ಕೆ ಪ್ರಾರಂಭಿಸಿದ. ಕ್ಯಾಲಿಫೋರ್ನಿಯದ ೧೨ ವರ್ಷದ ಬಾಲಕ ರಿಛರ್ಡ್ ಕಾರ್ಲ್‌ಸನ್‌ನಲ್ಲಿ ಈ ರೋಗ ಬೇಗನೇ ಪತ್ತೆ ಆಗಿದ್ದರೂ ಅವನ ಸ್ಥಿತಿ ಅಷ್ಟು ಆಶಾಜನಕವಾಗಿರಲಿಲ್ಲ. ಆದರೆ ಲೊರೆಂಜೊ ತೈಲ ರಿಚರ್ಡನ ಎಎಲ್‌ಡಿಯನ್ನು ಆ ಮಟ್ಟದಲ್ಲೆ ಸ್ಥಗಿಸಿತು. ತಿಂಗಳುಗಳು ಕಳೆದಮೇಲೂ ಅವನಲ್ಲಿ ಮೈಯಲಿನ್ ನಾಶ ಮುಂದುವರಿಯಲಿಲ್ಲ. ರೋಗ ಲಕ್ಷಣಗಳು ಪ್ರಬಲಿಸಲಿಲ್ಲ.

ರಿಛರ್ಡನ ತಮ್ಮ ೭ ವರ್ಷದ ರೈಯಾನ್‌ಗೂ ಈ ರೋಗ ಇತ್ತು. ಈ ಔಷಧ ಕೊಟ್ಟಾಗ ಅವನ ರಕ್ತದಲ್ಲಿ ಮೇದಸ್ಸಿನ ಮಟ್ಟ ಸಾಮಾನ್ಯ ಮಟ್ಟಕ್ಕೆ ಇಳಿಯಿತಲ್ಲದೆ ರೋಗ ಲಕ್ಷಣಗಳೂ ಲುಪ್ತವಾದವು.

ಈ ಔಷಧದ ಬಳಕೆಯಿಂದ ಆಗುವ ಲಾಭ ಏನು, ಎಷ್ಟು ಎಂದು ಖಚಿತವಾಗಿ ಹೇಳುವಂತಿಲ್ಲ. ಇನ್ನೂ ಕೆಲಕಾಲ ಅದನ್ನು ಬಳಸಿ ವ್ಯಾಸಂಗಿಸಬೇಕಾಗಿದೆ. ಆದರೂ ಇಷ್ಟು ಗೊತ್ತಾಗಿದೆ. ರೋಗ ಉಗ್ರವಾಗಿಲ್ಲದ ಹುಡುಗರಲ್ಲಿ ಇದರ ಬಳಿಯಿಂದ ಆಗಲೇ ವ್ಯಕ್ತವಾಗಿದ್ದ ತೊಂದರೆಗಳು ಪರಿಹೋಗದೇ ಇದ್ದರೂ ಎಎಲ್‌ಡಿ ನಿಲ್ಲುತ್ತದೆ. ತೊಂದರೆ ಅಷ್ಟೇನೂ ಕಂಡುಬರದೇ ಇದ್ದವರಲ್ಲಿ ಇದು ರೋಗವನ್ನೆ ಸ್ಥಗಿಸುತ್ತದೆ.

ಅಮೆರಿಕದ ಆಹಾರ ಔಷಧಗಳ ಪ್ರಾಧಿಕಾರ ಲೊರೆಂಜೊ ತೈಲವನ್ನು ಪ್ರಾಯೋಗಿಕವಾಗಿ ದೀರ್ಘಕಾಲಿಕವಾಗಿ ರೋಗ ಚಿಕಿತ್ಸೆಗೆ ಬಳಸಿ ವ್ಯಾಸಂಗಿಸಲು ಡಾ॥ ಮೋಸರ್‌ಗೆ ಅನುಮತಿ ನೀಡಿದ. ಅವನು ೩೦೦ ರೋಗಿಗಳನ್ನು ಹೀಗೆ ಚಿಕಿತ್ಸಿಸಲು ಆಗುವ ಖರ್ಚಿಗಾಗಿ ಅವನಿಗೆ ಸರಕಾರ ಮೊತ್ತವನ್ನು ನೀಡಿದೆ. ಇಷ್ಟಲ್ಲದೆ ರೋಮ್, ಆಮ್‌ಸ್ಟರ್‌ಡಾಂ ಮತ್ತು ಪ್ಯಾರಿಸ್, ಈ ಸ್ಥಳಗಳಲ್ಲಿ ಔಷದ ಬಳಕೆಯ ಫಲಿತಾಂಶಗಳ ವ್ಯಾಸಂಗಗಳನ್ನು ಕೈಗೊಳ್ಳಲಾಗಿದೆ.

ಆದರೆ ಸ್ವತಃ ಲೊರೆಂಜೋವಿಗೆ ಈ ಔಷದ ದೊರಕಿದ್ದು ತುಂಬ ತಡವೇ ಆಯಿತು. ಈಗ ಅವನಿಗೆ ೧೫ ವರ್ಷ. ಇಷ್ಟರಲ್ಲಿ ನಾಶವಾಗಿಹೋಗಿದ್ದ ಮೈಯಲಿನ್ ತಾನಾಗಿಯೇ ಪುನರುದ್ಭವಿಸುವುದಿಲ್ಲ. ಆದ್ದರಿಂದ ಅವನ ಸ್ಥಿತಿ ಇನ್ನು ಉತ್ತಮವಾಗುವುದಿಲ್ಲ. ಆದರೂ ಒಂದು ಪವಾಡವನ್ನು ಸಾಧಿಸಿದ ಓಡೋನರು ಮೈಯಲಿನ್‌ನ ಪುನರುದ್ಭವವೆಂಬ ಇನ್ನೊಂದನ್ನು ಸಾಧಿಸಲು ದೃಢ ಮನಸ್ಸು ಮಾಡಿದ್ದಾರೆ.

ಮೈಯಲಿನ್‌ನ ಪುನರುದ್ಭವವನ್ನು ಹೇಗೆ ಸಾಧಿಸಬೇಕೆಂಬುದು ಸಧ್ಯದಲ್ಲಿ ಯಾರಿಗೂ ತಿಳಿಯದು. ಆದ್ದರಿಂದ

ವಿಶ್ವಾದ್ಯಂತ ಈ ವಿಷಯದ ಪರಿಶೋಧನೆಯನ್ನು ತ್ವರಿತಗೊಳಿಸಲು ಓಡೋನ್ ದಂಪತಿಗಳು "ಮೈಯಲಿನ್ ಪರಿಕಲ್ಪನೆ" (Myelin Project) ಎಂಬ ಯೋಜನೆಯನ್ನು ಪ್ರಾರಂಭಿಸಿದ್ದಾರೆ. ನರಗಳಲ್ಲಿ ಮೈಯಲಿನ್ನನ್ನು ತಯಾರಿಸುವ ಕೋಶಗಳನ್ನು ಆರೋಗ್ಯವಾಗಿರುವ ವ್ಯಕ್ತಿಗಳಿಂದ ತೆಗೆದು ಎಎಲ್‌ಡಿ ರೋಗಿಗಳಿಗೆ ನಾಟಿ ಹಾಕುವುದು ಪ್ರಾರಂಭಿಕ ವ್ಯಾಸಂಗ. ಇಂಥ ನಾಟಿ ಇಲಿಗಳ ಮೇಲಿನ ಪ್ರಯೋಗಗಳಲ್ಲಿ ಕೆಲಮಟ್ಟಿಗೆ ಅನುಕೂಲವಾಗಿದೆ.

ಲೊರೆಂಜೋವಿನ ನಾಶವಾದ ಮೈಯಲಿನ್ನಿನ ಪುನರುತ್ಪತ್ತಿ ಹೇಗೆ ಸಾಧ್ಯವಾದೀತು ಎಂದು ತಿಳಿಯುವುದು ಅಗತ್ಯ. ಈ ಬಗ್ಗೆ ಹೋರಾಟ ಕಷ್ಟದ್ದೇ ಎಂದು ಆಗಸ್ಟೊ ಮನಗಂಡಿದ್ದಾನೆ. ಆದರೆ ಈ ಸಂದರ್ಭದಲ್ಲಿ ವೈದ್ಯತಜ್ಞರು ಅವನ ಮಗ ಬದುಕುವ ವಿಷಯದಲ್ಲಿ ಏನೂ ಭರವಸೆ ಕೊಡದೇ ಹೋದದ್ದನ್ನು ಜ್ಞಾಪಿಸಿಕೊಳ್ಳುತ್ತಾನೆ ಅಗತ್ಯವನ್ನು ಅಂತ ಸಾಮಾನ್ಯಮಾನವ ಶಾಸ್ತ್ರತಜ್ಞರುಗಳು ಸಾಧಿಸಬಲ್ಲ ವಿಷಯಗಳನ್ನು ತಾನೂ ಸಾಧಿಸಬಲ್ಲ ಈ ಸಾಧನೆ ಬರಿಬೌದ್ಧಿಕ ವಿಷಯ ಅಲ್ಲ" ಪಟ್ಟು ಹಿಡಿದು ಸಾಧಿಸುವುದಕ್ಕೆ ಬೇಕಾದ ಕೆಚ್ಚು ಹಾಗೂ ದಿಟ್ಟತನಗಳು" ಎಂದೇ ಆಗಸ್ಟೋವಿನ ಹೇಳಿಕೆ.

ಲೊರೆಂಜೊ ಹಾಸಿಗೆಯಲ್ಲಿ ಅಥವಾ ಗಾಲಿಗಾಡಿಯಲ್ಲಿ ಇನ್ನೂ ಕಾಲ ನೂಕುತ್ತಿದ್ದರೂ ಓಡೋನರು ಅವನು ಸ್ವಲ್ಪ ಮಟ್ಟಿಗೆ ಗುಣವಾಗಿದ್ದಾನೆ ಎಂದು ನಂಬುತ್ತಾರೆ. ಈಚೀಚೆಗೆ ಅವನು ಒಂದು ಕಿರುನಗು, ಒಂದು ಸ್ನೇಹದ ಬಿಗಿ ಕೈಹಿಡಿತ ಇಂಥ ಒಂದೊಂದೇ ಜಯವನ್ನು ಕಾಣಗೊಡುತ್ತಾನೆ. ತನ್ನ ಹೆಸರನ್ನು ತಿಳಿಯಬಲ್ಲವನಾಗಿದ್ದಾನೆ. ಓದಲು ಕಲಿಯುತ್ತಿದ್ದಾನೆ.

ಮೈಕೇಲ ಅವನ ಬೌದ್ಧಿಕತೆ ಹಾಗೂ ಕ್ರಿಯಾಶಕ್ತಿಯನ್ನು ಉಳಿಸಿಕೊಂಡಿರುವಂತೆ ಮಾಡಲು ಬಹುಶಃ ನೂರಾರು ಏಕೆ ಸಾವಿರಾರು ಗಂಟೆಗಳ ಕಾಲ ಶ್ರಮಿಸಿದ್ದಾಳೆ —ಮೊದಮೊದಲ ಪ್ರಯತ್ನಗಳಲ್ಲಿ ಅವರು ಲೊರೆಂಜೋಗೆ ಹೇಳಿದಳು. "ನಾನು ಒಂದು ಆಟದ ಸಾಮಾನನ್ನು ಹಿಡಿದಿದ್ದರೆ ಒಂದು ಸಲ ಕೈಬೆರಳಾಡಿಸು, ಎರಡನ್ನು ಹಿಡಿದಿದ್ದರೆ ಎರಡು ಸಲ ಆಡಿಸು" ಎಂದು ; ಲೊರೆಂಜೊ ತಾಯಿಯ ಕೈಕಡೆ ನೋಡಿ ಎರಡು ಸಲ ಬೆರಳಾಡಿಸಿದ. ಅವಳಿಗೆ ಬಹು ಸಂತೋಷವಾಯಿತು. ಮಗನಿಗೆ ಹೇಳಿದಳು—"ನೋಡು ನೀನು ಮಾಡಿದ್ದನ್ನು ಮಿಕ್ಕ ರೋಗಿಷ್ಟ ಮಕ್ಕಳೂ ಮಾಡಬಲ್ಲವರಾಗುತ್ತಾರೆ. ಸಾವಿರಾರು ಇಂಥ ಮಕ್ಕಳಿಗೆ ನೀನು ಮುಂದಾಳು."

ಅನೇಕರು ಅಯೋಗ್ಯರಿದ್ದರೂ ತಾವು ಯೋಗ್ಯರೆಂದು ತಿಳಿದುಕೊಂಡಿರುವದರಿಂದ ಯೋಗ್ಯರಾಗುತ್ತಾರೆಯೋ ?

—ವರ್ಜಿಲ್

ಪುಸ್ತಕ ಪರಿಚಯ

ಹಾಲತಿ ಸೋಮಶೇಖರ್

ಹೊಲಗೇರಿಯ ರಾಜಕುಮಾರ (ಕಾದಂಬರಿ) ಲೇಖಕ: ಶಿವರುದ್ರ ಕಲ್ಲೋಳಿಕರ. ಪ್ರಕಾಶನ: ಅನಾರ್ಯ ಪ್ರಕಾಶನ, ಟಿ–೫. ಅಧ್ಯಾಪಕರ ವಸತಿಗಳು. ಕರ್ನಾಟಕ ವಿಶ್ವವಿದ್ಯಾನಿಲಯ ಕ್ಯಾಂಪಸ್, ಧಾರವಾಡ–೫೮೦೦೦೩. ಪ್ರಥಮ ಮುದ್ರಣ: ೧೯೯೪; ಪುಟಗಳು: ೧೭೪ + XIV. ಬೆಲೆ: ರೂ. ೩೦.

ಪ್ರೊ|| ಶಿವರುದ್ರ ಕಲ್ಲೋಳಿಕರರ ಮೊದಲ ಕಾದಂಬರಿ "ಹೊಲಗೇರಿಯ ರಾಜ ಕುಮಾರ" ಕಾದಂಬರಿಯ ಆರಂಭಕ್ಕೆ ಮುನ್ನ ಕನಕದಾಸರ ಕೀರ್ತನೆಯ ಎರಡು ಸಾಲುಗಳಿವೆ—

ಕುಲ ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರೂ
ಬಲ್ಲಿರಾ?

ಈ ಸಾಲುಗಳೇ ಹೇಳುವಂತೆ ಕಾದಂಬರಿಯ ವಸ್ತು ಕುಲಸಂಬಂಧಿತವಾದದ್ದು. ಕುಲದ ನೆಲೆಯ ಶೋಧನೆಗಿಳಿಂದ ಮನುಷ್ಯ ಭ್ರಮೆಯ ಮಡುವಿನಲ್ಲಿ ಬಿದ್ದು ಹೇಗೆ ವಿಜೃಂಭಿಸುತ್ತಾನೆ ಎಂಬುದನ್ನು ಕಾದಂಬರಿಯ ಚೌಕಟ್ಟಿನಲ್ಲಿ ಅತ್ಯಂತ ಕಲಾತ್ಮಕವಾಗಿ ಕುತೂಹಲಕರವಾಗಿ ಸಹಜವಾದ ನೇರ ಸರಳ ಮಾತುಗಳ ಲ್ಲಿಯೇ ಕಾದಂಬರಿಕಾರರು ನಿರೂಪಿಸಿ ದ್ದಾರೆ.

ಕಾದಂಬರಿಯ ಎಳೆ ಒಂದು ಸತ್ಯಘಟನೆ ಯನ್ನು ಆಧರಿಸಿದ್ದು. ಆ ಘಟನೆ ಹೀಗಿದೆ: ಬೆಳಗಾವಿಯಲ್ಲಿ ಪೋಸ್ಟ್‌ಮಾಸ್ಟರ್ ಆಗಿದ್ದ ಹೊಲೆಯ ಜಾತಿಯ ಕಲ್ಲಪ್ಪ ಚಂದ್ರಪ್ಪ ಕೋಲ್ಕಾರ್ ಎಂಬಾತನಿಗೆ ತಾನು ಕುರುಂದ ವಾಡ ಸಂಸ್ಥಾನದ ರಾಜಕುಮಾರನಾಗಿದ್ದ ವನು; ಮಗುವಾಗಿದ್ದಾಗ ರಾಜ್ಯದಲ್ಲಿ ಕ್ಷಿಪ್ರಕ್ರಾಂತಿ ನಡೆದು ತನ್ನ ತಂದೆ ತಾಯಿ ಗಳನ್ನು ವೈರಿಗಳು ಕೊಂದರು, ತಬ್ಬಲಿ ಯಾದ ತನ್ನನ್ನು ಅರಮನೆಯಲ್ಲಿ ಕೆಲಸ ಕ್ಕಿದ್ದ ಹೊಲೆಯನೊಬ್ಬ ರಕ್ಷಿಸಿ, ಬೆಳೆಸಿ ವಿದ್ಯಾವಂತನನ್ನಾಗಿ ಮಾಡಿದ ಕಾರಣದಿಂದ ತಾನು ಹೊಲೆಯನಾದೆ; ವಾಸ್ತವವಾಗಿ ತಾನು ಮೇಲ್ಜಾತಿಯ ಕ್ಷತ್ರಿಯ ಕುಮಾರ ಎಂಬ ವಿಚಾರಗಳು ಇತಿಹಾಸದಿಂದ ತಿಳಿದು ಬರುತ್ತವೆ. ಈ ಸತ್ಯಾಂಶ ತಿಳಿಯು ತ್ತಿದ್ದಂತೆಯೇ ಅವನಲ್ಲಿ ಜಾತಿಯ ಮೇಲರಿಮೆ ಉದ್ಭವವಾಗುತ್ತದೆ. ಅಷ್ಟೇ ಅಲ್ಲದೆ ತನ್ನ ಅಜ್ಜ-ಅಪ್ಪರಿಗೆ ಸೇರಿದ್ದ ಎಲ್ಲ ಆಸ್ತಿಗೂ ತಾನೇ ಹಕ್ಕುದಾರ, ಕುರುಂದವಾಡ

ಸಂಸ್ಥಾನದ ಸಮಸ್ತ ಆಸ್ತಿಯನ್ನು ತನಗೆ ನೀಡಬೇಕು ಎಂದು ದಾಖಲೆಗಳೊಂದಿಗೆ ಬೆಳಗಾವಿ ವಿಭಾಗಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದಾನೆ. ಈಗಲೂ ಆ ದಿಸೆಯಲ್ಲಿ ಕೋಲ್ಕಾರನ ಪ್ರಯತ್ನ ಸಾಗಿದೆ.

ಭಾರತದ ಸ್ವಾತಂತ್ರ್ಯಾನಂತರ ನಡೆದಿರುವ ಈ ಸತ್ಯಘಟನೆಯನ್ನು ಮುಖ್ಯ ವಸ್ತುವಾಗಿಸಿಕೊಂಡು ಕಾದಂಬರಿಯನ್ನು ರಚಿಸಲಾಗಿದೆ. ಹಾಗಾಗಿ ಇತಿಹಾಸದ ಒಡಲಲ್ಲಿ ಕಾಣುವ ಸತ್ಯ. ಆ ಸತ್ಯ ಸೃಷ್ಟಿಸುವ ಆಸೆ, ಇವುಗಳೊಂದಿಗೆ ಕೂಡಿಕೊಂಡ ಜಾತಿ ಶ್ರೇಷ್ಠತೆ ಕಾದಂಬರಿಯ ನಾಯಕನನ್ನು ಭ್ರಮೆಗೆ ಒಳಗು ಮಾಡಿ ಕನಸುಗಾರನನ್ನಾಗಿಸುತ್ತವೆ. ಕಾದಂಬರಿಯಲ್ಲಿ ಇತಿಹಾಸ, ಸತ್ಯ, ಕಲ್ಪನೆಗಳೆಲ್ಲ ವಾಸ್ತವದ ಮೂಸೆಯಲ್ಲಿ ಅತ್ಯಂತ ಸಹಜವಾಗಿ ಹಾದು ಬರುವುದರಿಂದ ಕಾದಂಬರಿಗೆ ಅಧಿಕೃತತೆಯೊಂದು ಪ್ರಾಪ್ತವಾಗಿದೆ ಎನ್ನಬಹುದು.

ಹೊಲಗೇರಿಯ ರಾಜಕುಮಾರನಾದ ಮಾದೇವನ ಕನಸಿನೊಂದಿಗೆ ಕಾದಂಬರಿಯು ಆರಂಭವಾಗುತ್ತದೆ. ಕುರುಂದವಾಡದ ಸಂಸ್ಥಾನಾಧೀಶ ಆ ಕನಸುಗಾರ. ಆತ ಆಜ್ಞಾಧಾರಿ, ಶೂರ, ಸ್ವಾಭಿಮಾನಿ–ವಾಸ್ತವದಲ್ಲಿ ಕೂಡ. ಆದರೆ ಮಾದೇವ ತಾನು ದಲಿತನಾಗಿ ವ್ಯಕ್ತಮಾಡುವ ಸ್ವಾಭಿಮಾನಕ್ಕೂ ಸವರ್ಣೀಯನೆಂದು ಗುರುತಿಸಿಕೊಳ್ಳುತ್ತಾ ಜಾತಿ ಶ್ರೇಷ್ಠತೆಯ ಐಡೆಂಟಿಟಿಯಲ್ಲಿ ವ್ಯಕ್ತಮಾಡುವ ಸ್ವಾಭಿಮಾನಕ್ಕೂ ಪರಸ್ಪರ ವೈರುಧ್ಯ–ವ್ಯತ್ಯಾಸಗಳಿವೆ.

ಅಸ್ಪೃಶ್ಯನಾಗಿ ಹುಟ್ಟಿದ ಕಾರಣದಿಂದ ಬಳುವಳಿಯಾಗಿ ಬರುವ ಅಸಮಾನತೆ, ಸಾಮಾಜಿಕ ತಾರತಮ್ಯ, ಶೋಷಣೆ, ಅಸಹಾಯಕತೆ ; ಅದಕ್ಕೆ ಪ್ರತಿಯಾಗಿ ಹುಟ್ಟುವ ಪ್ರತಿಭಟನೆ, ಹೋರಾಟ, ಚಳುವಳಿಗಳು ನಾಯಕನ ಅಂತರಂಗದ 'ಕಾಂಪ್ಲೆಕ್ಸ್' ಆಗಿ ಪರಸ್ಪರ ಥಳಕು ಹಾಕಿಕೊಂಡಂತೆ ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಶಿಕ್ಷಣ, ಮೀಸಲಾತಿ, ಉದ್ಯೋಗ, ಬಡ್ತಿ ಇತ್ಯಾದಿ ಸಾಮಾಜಿಕ ಸವಲತ್ತುಗಳನ್ನು ಪಡೆದ ಮಧ್ಯಮ ವರ್ಗದ ದಲಿತನಿಗೆ ಎದುರಾಗುವ ಪ್ರಶ್ನೆಗಳು ಈ ಬಗೆಯವು—"ಕಾಂಬಳೇ ನಿಮ್ಮ ಹೊಲೇರ ಮಂದಿ ಪುಣ್ಯೇ ಮಾಡಿ ಬಂದೀರಿ ನೋಡು. ನಾವಿಬ್ರೂ ಕೂಡೆ ಕೆಲಸಕ್ಕೆ ಸೇರಿದ್ರೂ ನಿನಗೆ ನನಗಿಂತ ಮೊದಲ ಪ್ರಮೋಷನ್ ಸಿಕ್ಕಿತು. ಇವನೌನ್ನ ದೇವ್ರು ನಮ್ಮನ್ನ ಯಾಕಾರ ಲಿಂಗಾಯತರ ಮಂದ್ಯಾಗ ಹುಟ್ಟಿಸಿದ್ನೋ ಏನೋ ಸೂಳೀ ಮಗಾ....ಖರೇ ಹೇಳಬೇಕಂದ್ರ ಈ ಸರಕಾರ ನಿಮ್ಮನ್ನ ಉದ್ಧಾರ ಮಾಡಬೇಕನ್ನೊ ಹೆಸರಿದಾಗ ಸಮಾಜದೊಳಗ ಅಸಮಾನತೆ ತರಾಕ್ಕತ್ತೈತಿ" – (ಪುಟ-೯) ಕಛೇರಿಯಲ್ಲಿ ಪಾಟೀಲ ಹೇಳುವ ಈ ಮಾತುಗಳು ಸಮಾನ ಯೋಗ್ಯತೆಯುಳ್ಳ ದಲಿತನೊಬ್ಬ ತನಗಿಂತ ಮೇಲೆ ಬಂದು ಅಧಿಕಾರದ ಚುಕ್ಕಾಣಿ ಹಿಡಿದಾಗ ದಲಿತರಲ್ಲಿ ಮಾತ್ರ ಬಡವರಿದ್ದಾರೆ? ಎನ್ನುವ ಸಾಮಾನ್ಯ ಉದ್ಗಾರಗಳು ; ತನಗೆ ಸಿಗಬೇಕಾಗಿದ್ದ ಅವಕಾಶ ದಲಿತನ ಪಾಲಾದಾಗ ಅಥವಾ ದಲಿತನಾದವನು ತನಗಿಂತ ಮುಂಚೆ ಉನ್ನತಸ್ಥಾನ ಅಲಂಕರಿಸಿದಾಗ ಉಂಟಾಗುವ ಅಸಮಾಧಾನ ದೇವರ ಮೇಲೆ ಕಾರಿಕೊಳ್ಳುತ್ತದೆ. ಒಂದು ಕಾಲಕ್ಕೆ ದಲಿತರು

ಕೂಡ ತಮಗಾದ ಅಪಮಾನ, ಅಸಮಾನತೆ, ಕ್ರೌರ್ಯಗಳಿಗೆ ಅಸಹಾಯಕರಾಗಿ ಈ ಬಗೆಯಲ್ಲಿಯೇ ಸಮಾಧಾನ ಪಟ್ಟುಕೊಳ್ಳುತ್ತಿದ್ದರು. ಆದರೆ ಹೊಲಗೇರಿಯ ರಾಜಕುಮಾರನ ಪ್ರತಿಕ್ರಿಯೆ ಆತನ ಸಾಮಾಜಿಕ ಅರಿವನ್ನು ಪ್ರತಿನಿಧಿಸುತ್ತದೆ. "ಪಾಟೀಲರ, ನೀವ ಹೇಳೂದ ಎಲ್ಲಾ ಖರೇನ ಐತಿ, ಆದ್ರ ನಂದೊಂದ ಪ್ರಶ್ನೆ ಐತಿ. ನಿಮ್ಮ ಜಾತಿ ಬಡವರು ನಮ್ಮಂಗ ಸತ್ತದನಾ ನಾಯಿ ಎಳೆತಾರೇನು? ಸಾವಿರಾರ ವರ್ಷಗಟ್ಟಲೆ ಈ ವ್ಯಾಲಿನ ಮಂದಿ ಹೇತ ಹೇಲು ತಲಿಮ್ಯಾಗ ಹೊತ್ತೀವಿ. ನಿಮ್ಮ ಜಾತಿ ಬಡವರು ಹೊರತಾರೇನು? ನಿಮ್ಮ ಜಾತಿ ಬಡವಗ ಹೋಟೆಲದಾಗ ಹೊರಗ ಕೂಡ್ರಿಸಿ ಚಾ ಕೊಡ್ತಾರೇನು? .... ನಿಮಗ ಬೇಸಿಕಲಿ (basically) ಮನಿಶ್ಯಾನ ಮನಿಶ್ಯಾ ಅಂತ ಗುರ್ತು ಸು ಯೋಗ್ಯತಾ ಇಲ್ಲ! ಸಮಾನತೆ ಬಗ್ಗೆ ಮಾತಾಡಕ ಏನ ಹಕ್ಕ ಐತಿ?" (ಪುಟ-೧೦) ಎಂದು ಪ್ರಶ್ನಿಸುತ್ತಾನೆ.

ಅಕ್ಷರ ಮಾಧ್ಯಮದ ಮೂಲಕ ಅರಿವು ಮೂಡಿಸಿಕೊಂಡ ದಲಿತ ತನ್ನ ಜನಾಂಗದ ಹಿತರಕ್ಷಣೆಯ ಮುತುವರ್ಜಿ ವಹಿಸುವ ಕ್ರಮವನ್ನು; ಅದೇ ನಾಯಕ ತಾನು ಮೇಲ್ವರ್ಗದವ-ಶ್ರೇಷ್ಠ ಎಂದು ಅರಿತಾಗಿನ ಮನಃಸ್ಥಿತಿಯನ್ನು ವಾಸ್ತವ-ಕನಸುಗಳ ಮಿಶ್ರಣದೊಂದಿಗೆ ಕಾದಂಬರಿಕಾರರು ಚಿತ್ರಿಸಿರುವ ರೀತಿ ಅನನ್ಯವಾಗಿದೆ. ಕಾಲೇಜಿನಲ್ಲಿ ರ‍್ಯಾಂಕ್ ಬಂದಾಗ, "ಹೆಸರು ನೋಡಿದ್ರಾ ಕಾಂಬಳೆ, ಅಂದರೆ ಮಹಾರ್ ಜಾತಿ, ಅವರ್ಗೆಂಗ್ ರ‍್ಯಾಂಕ್ ಬರಾಕ ಸಾಧ್ಯ" ಎನ್ನುವ ಅವೈಜ್ಞಾನಿಕ ಚಿಂತಕ ಅಧ್ಯಾಪಕರಿಗೆ "ನನ್ನ ಜಾತಿ ತುಗೊಂಡ ಈ ಭೋಸ್ಡಿ ಮಕ್ಕಳಿಗೇನ ಆಗ್ಬೇಕಾಗೇತಿ? ಅದನ್ನ ತೊಳಕೊಂಡ ಕುಡ್ಯಾವ್ರs ಆದಾರೇನ" ಎನ್ನುವ ಮಾದೇವ ತನ್ನ ಜಾತಿಯವರು ಜೋಗತಿಯರಾಗಿ ಸವರ್ಣೀಯರಿಗೆ ಮಾನ ಮಾರಿಕೊಂಡು ಬದುಕುವುದನ್ನು ಕಂಡು "ಬಾಬಾ ಸಾಹೇಬರು ಸ್ವಾಭಿಮಾನದಿಂದ ಬದಕರಿ ಅಂತ ಎದಿಎದಿ ಬಡಕೊಂಡ ಹೇಳಿ ಸತ್ತಹ್ವಾದರೂ ಇವರೌವ್ನ, ಇವರು ಇನ್ನಾ ಬಿಕ್ಕಿ ಬೇಡಿ ತಿರಕೊಂಡು ತಿಂತೀವಿ ಅಂತಾರು" (ಪುಟ-೭೨) ಎಂದು ಸಿಟ್ಟಿನಿಂದ ಜೋಗತಿಯರನ್ನು ಬಯ್ಯುವುದು ಮಾತ್ರವಲ್ಲ ಬ್ಯಾಂಕಿನಲ್ಲಿ ಸಾಲ ಪಡೆದು ಎಮ್ಮಿ ತಗೊಂಡು ಬದುಕು ನಡೆಸುವಂತೆ ಸಲಹೆ ಮಾಡುತ್ತಾನೆ. ದೇವರ ಫೋಟೋ ಸಾಲಿನಲ್ಲಿ ಡಾ|| ಅಂಬೇಡಕರ್, ಫೋಟೋ ತಗುಲಿಸಿ 'ಇವ ನಿಜವಾದ ದೇವ್ರು ನಮಗೆ ದನಿಕೊಟ್ಟವನು' ಎನ್ನುತ್ತಾನೆ. ಮೇಲಿನವರ ಉಪಟಳ ತಡೆಯಲು ತಾನಿದ್ದ ಪಿ ಅಂಡ್ ಟಿ ಡಿಪಾರ್ಟ್‌ಮೆಂಟಿನಲ್ಲಿ ಎಸ್ಸಿ/ಎಸ್ಟಿ ಅಸೋಷಿಯೇಶನ್ ಕಟ್ಟಿ ತನ್ನ ಮತ್ತು ತಮ್ಮ ಜಾತಿಯವರ ರಕ್ಷಕನಾಗುತ್ತಾನೆ. ಹೊಲಗೇರಿಯ ವಿಮಲೆ ಮತ್ತು ಅವಳ ತಾಯಿ ತುಳಸಿ ಹಾದರ ಮಾಡುತ್ತಾ ಖಾಯಂ ಆಗಿ ಮರಾಠರ ಬಾಬ್ಯಾನ ಸೂಳೆಯಾದಾಗ ಅವರನ್ನು ಕರೆದು "ಈ ದಂಧೆ ಚಲೋ ಅಲ್ಲ, ವಡಗಾಂವಿಯ ಹೊಲಗೇರಿಯನ್ನು ಹೊಲಸುಮಾಡಬೇಡಿ" ಎಂದು ಬುದ್ಧಿ ಹೇಳುತ್ತಾನೆ. ಹೀಗೆ ತುಳಸವ್ವನಿಗೆ ಬುದ್ಧಿ ಹೇಳುವ ಕಾರಣವೇ ಮಾದೇವನ ಪೂರ್ವ ವೃತ್ತಾಂತ ಬೆಳಕಿಗೆ ಬರುವ ಸಂದರ್ಭವಾಗುತ್ತದೆ. ಮಾದೇವನ ಬುದ್ಧಿ

ವಾದಕ್ಕೆ ತಿರುಗಿಬಿದ್ದ ತುಳಸವ್ವ ಬೈಗುಳ ಆರಂಭಿಸುತ್ತಾಳೆ. ಆಕೆಯ ಬೈಗುಳವೇ ಮಾದೇವ ಮರಾಠರ ರಾಜಕುಮಾರನೆಂಬುದನ್ನು ಸೂಚಿಸಿಬಿಡುತ್ತದೆ.

"ನನ್ನ ಜಾತಿ ಕಟ್ಟಿಕೊಂಡು ಈ ಭೋಸ್ಡಿ ಮಕ್ಕಳಿಗೆ ಏನಾಗಬೇಕೇತಿ?" ಎಂದು ಗುಡುಗುತಿದ್ದ ಮಾದೇವ ತಾನು ಕುರಂದವಾಡದ ಸಂಸ್ಥಾನಾಧೀಶ ಅಚ್ಯುತರಾವ್ ಗಾಯಕವಾಡರ ಪುತ್ರ ಮಾಧವರಾವ್ ಗಾಯಕವಾಡ ಎಂದು ತಿಳಿಯುತ್ತಿದ್ದಂತೆಯೇ ಪೂರ್ಣ ಬದಲಾಗಿ ಜಾತಿಗಂಟಿಕೊಂಡು ಏಲು ದೊರೆಯಂತೆ ವರ್ತಿಸಲಾರಂಭಿಸುತ್ತಾನೆ. ತಾನು ಅಪಾರವಾಗಿ ಪ್ರೀತಿಸುತಿದ್ದ ಸಹಧರ್ಮಿಣಿ ಸುಮತಿಯನ್ನು "ಸುಮತಿಯಲ್ಲ ಆಕೆ! ನನ್ನ ಸೂರ್ಯವಂಶಿ ರಕ್ತವನ್ನು ಅಪವಿತ್ರಗೊಳಿಸಿದ ಹೊಲತಿ" ಎಂದು ಹೀಗಳೆಯುತ್ತಾನೆ. "ಕೀಳು ಕುಲದ ಹೊಲತಿಗೆ ಹುಟ್ಟಿದ ಮಕ್ಕಳು ರಾಜವಂಶದ ಕುಡಿಗಳೇ?" ಎಂದು ಮಕ್ಕಳನ್ನು, ಹೆಂಡತಿಯನ್ನೂ ತೊರೆಯುತ್ತಾನೆ. ತಾನು ಆಡಿ, ಬೆಳೆದು ಎಲ್ಲರ ಆದರಣೆಗೆ ಪಾತ್ರವಾಗಿದ್ದ ಹೊಲಗೇರಿಯನ್ನೇ ನಿರ್ನಾಮ ಮಾಡಬೇಕು ಎಂಬ ತೀರ್ಮಾನಕ್ಕೆ ಬರುತ್ತಾನೆ. ಮಾನಸಿಕವಾಗಿ ರಾಜವೈಭವವನ್ನು ಅನುಭವಿಸುತ್ತಾನೆ. ಕಾದಂಬರಿಕಾರರು ಆತನ ಮಾನಸಿಕ ಸ್ಥಿತಿಯನ್ನು ಸಮರ್ಪಕ ರೀತಿಯಲ್ಲಿ ಚಿತ್ರಿಸುತ್ತಾರೆ. ಹೊಲಗೇರಿಯ ಜನ, ಅವರ ಮಾತು, ನೀತಿ, ಕೋಣದ ಮಾಂಸ, ಮಜ್ಜನ, ಹೇಲು, ಉಚ್ಚೆ, ನಂಬಿಕೆ ನಡವಳಿಕೆ ಒಮ್ಮೆಲೆ ಅವನಿಗೆ ಭಯಂಕರ ಅಸಹ್ಯವಾಗಿ ಕಂಡು "ಥೂ ಇವರೌನ್ನ, ಇವರು ಹೊಲಸು ಅದಾರಂತ ಇವ್ರಿಗೆ ಹೊಲೇರ ಅಂತ ಕರದಾರು!" ಎಂಬ ಮಾತು ಅವನಿಗೆ ಅರವಿಲ್ಲದೆ ಬರುತ್ತದೆ.

ತನ್ನ ಗಂಡ ಈ ಮುನ್ನ ಹೇಳುತ್ತಿದ್ದ ಮಾತುಗಳಿಗೂ ಈಗ ಆತನ ನಡುವಳಿಕೆಯಲ್ಲಾದ ಬದಲಾವಣೆಗೂ ವಿರೋಧಾಭಾಸ ಕಂಡ ಹೆಂಡತಿ ಸುಮತಿ ಕೇಳುವ ಪ್ರಶ್ನೆಗಳು ಮರ್ಮಭೇದಕವಾಗಿವೆ — "ಬಾಬಾ ಸಾಹೇಬರ ಪುಣ್ಯೇದಿಂದ ನಮಗ ಸ್ಕಾಲರ್‌ಷಿಪ್ ಬರತೈತಿ, ನೌಕರಿಯೊಳಗ ರಿಜರ್ವೇಷನ್ ಐತಿ, ಅಂವ ನಮಗ ಸ್ವಾಭಿಮಾನ ಕಲಿಸಿದ ದೇವ್ರೂs ಅಂತೆಲ್ಲಾ ಹೇಳ್ತಿದ್ದೀರಲ್ಲಾ ಈಗೇನಾತು!" (ಪುಟ–೧೯೯). ಬಹಳ ಜನ ಹುಟ್ಟಿನಿಂದ ದಲಿತರಾಗಿ ಸೌಲಭ್ಯ ದೊರಕಿದ ಕೂಡಲೇ ಹತ್ತಿದ ಏಣಿ ಒದೆಯುತ್ತಿರುವ ಅನೇಕರನ್ನು ಈ ಪ್ರಶ್ನೆಗಳು ಕಾಡಬಹುದು. ಸರಜೂಕಾಟ್ಕರ್ ಮುನ್ನುಡಿ ಬರೆಯುತ್ತಾ ಹೇಳಿರುವ ಮಾತುಗಳು ಗಮನಾರ್ಹವಾಗಿವೆ–"ಕನ್ನಡದಲ್ಲಿ ದಲಿತರು ಬರೆದ ಅನೇಕ ಕತೆ ಕಾದಂಬರಿಗಳು ಬಂದಿವೆ. ಆದರೆ ಹೊಲಗೇರಿಯ ರಾಜಕುಮಾರ ನೀಡುವ ಅನುಭವ ಇವೆಲ್ಲವುಗಳಿಗಿಂತಲೂ ಭಿನ್ನವಾಗಿದೆ. ಇಲ್ಲಿ ದಲಿತ ಮತ್ತು ಬಲಿತ ಸಂಸ್ಕೃತಿಗಳ ಸಂಘರ್ಷ ಪರಸ್ಪರ ಪರಕಾಯ ಪ್ರವೇಶವನ್ನು ಪ್ರೊ॥ ಕಲ್ಲೋಳಿಕರ ಯಶಸ್ವಿಯಾಗಿ ಚಿತ್ರಿಸಿದ್ದಾರೆ. ಇಲ್ಲಿ ಹೊಲೆಯ ಮಾದೇವ ಕ್ಷತ್ರಿಯ ಮಾದೇವನಾಗಲು ಹೋಗಿ ವಿಫಲನಾಗುತ್ತಾನೆ. ಇದು ಒಂದು ರೀತಿಯಿಂದ ದಲಿತರು ನವ ಬ್ರಾಹ್ಮಣರಾಗಲು ಹೊರಟ ದುರಂತವನ್ನು ನೆನಪಿಸುತ್ತದೆ" ಎಂಬ ಮಾತುಗಳು ನಿಜವೆನಿಸಿದರೂ ಕನ್ನಡದ ಸದ್ಯದ ಸಂದರ್ಭ

ದಲ್ಲಿ ಈ ಕಾದಂಬರಿ ದಲಿತರ ಬದುಕಿನ ಇನ್ನೊಂದು ಮಗ್ಗುಲನ್ನು ಚಿತ್ರಿಸುತ್ತಲೇ ಭವಿಷ್ಯದಲ್ಲಿ ಸಂಭವಿಸಬಹುದಾದ ದಲಿತರ ಸಾಂಸ್ಕೃತಿಕ ಅವನತಿಯನ್ನು ಧ್ವನಿಸುತ್ತದೆ. ಕಾದಂಬರಿಯ ನಾಯಕ ಮಾದೇವ ಅತ್ತ ದಲಿತನೂ ಆಗದೆ ಇತ್ತ ಕ್ಷತ್ರಿಯನಾಗಿಯೂ ರೂಪುಗೊಳ್ಳದೆ ಮಾನವೀಯತೆಯ ನೆಲೆಗೆ ಸಾಗುವುದರೊಂದಿಗೆ ಕಾದಂಬರಿಯ ಅಂತ್ಯವಾಗುತ್ತದೆ. ಆ ಮೂಲಕ ಕಾದಂಬರಿಯ ಆಶಯ ಕೂಡ ಸೂಚಿತವಾಗುತ್ತದೆ.



ಪಂಥಾಭಿಮಾನ, ಮತಾಂಧತೆ, ದುರಾಭಿಮಾನಗಳು ನಮ್ಮೀ ಸುಂದರ ನಾಡನ್ನು ಬಹುಕಾಲದಿಂದಲೂ ಪೀಡಿಸುತ್ತ ಬಂದಿವೆ. ಹಿಂಸೆಯಿಂದ ತುಂಬಿಸಿ ನಮ್ಮ ಸಂಸ್ಕೃತಿಯನ್ನು ಗೆದ್ದಲಿನಂತೆ ತಿನ್ನುತ್ತಿರುವ ಈ ಕ್ರೂರ ಭಾವನೆಗಳನ್ನು ಕಿತ್ತೊಗೆಯಿರಿ.

—ವಿವೇಕಾನಂದ

ಇತರರ ಸಂಕಟದಲ್ಲಿ ಯಾರು ಕೇಡು ಬಗೆಯುತ್ತಾರೋ, ಇತರರ ಕೆಡುಗಾಲದಲ್ಲಿ ಯಾರು ನಗುತ್ತಾರೋ, ಅಂಥವರ ಸೇಡು ತೀರಿಸಿಕೊಳ್ಳಲು ಹವಣಿಸುವವರು, ತಾವೇ ಪಾಪಿಗಳಾಗುವರು.

—ಪಂಚತಂತ್ರ

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಡಾ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
'ಕಲಾ ನಿಲಯ' ಕಾಳಿದಾಸ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು–೧೨

೨. ಕೆ. ಸಚ್ಚಿದಾನಂದಯ್ಯ (ಚಿರಂತನ) ೧೩೧೬, ಇಂದ್ರಶ್ರೀ, ಪಡುವಣ ರಸ್ತೆ, ಕುವೆಂಪುನಗರ, ಮೈಸೂರು–೫೭೦ ೦೨೩.

೩. ಚಂದ್ರಿಕಾ ಪುರಾಣಿಕ, ಎಂ.ಎ. ಉಪ ಪ್ರಚಾರ್ಯರು, ಶೇಷಾದ್ರಿಪುರಂ, ಸಂಜೆ ಕಾಲೇಜು, ಬೆಂಗಳೂರು–೩೦.

೪. ಎಸ್. ಚನ್ನಪ್ಪ, ಸಹಾಯಕ ಸಂಪಾದಕರು, ಕನ್ನಡ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭ ೦೦೬.

೫. ಡಾ॥ ಸಿ. ಪಿ. ಸಿದ್ಧಾಶ್ರಮ, ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು–೫೭೦ ೦೦೬

೬. ಡಾ॥ ಪ್ರಧಾನ್ ಗುರುದತ್ತ, ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

೭. ಉಮಾಸರಸ್ವತಿ, ೧೧೩೯, 'ಅನುಪಮ 'ಸಿ' ಮತ್ತು 'ಡಿ' ಬ್ಲಾಕ್, ಲಲಿತಾದ್ರಿ ರಸ್ತೆ, ಕುವೆಂಪುನಗರ, ಮೈಸೂರು–೨೭.

೮. ಮಾಧವರಾವ್ ಮುಧೋಳ್, "ರಾಮಶ್ರೀ" ನಂ. ೧೧೬೭–ಬಿ೧,
ಹೆಚ್.ಐ.ಜಿ. ೨ನೇ ಹಂತ, ಶ್ರೀರಾಮಪುರ, ಮೈಸೂರು

೯. ಎಂ. ಜಯಂತಿಬಾಯಿ, ಸಹಾಯಕ ಅನುವಾದಕಿ, ಆಡಳಿತ ವಿಭಾಗ
'ಕ್ರಾಫರ್ಡ್ ಭವನ', ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು–೫೭೦೦೦೫


೧೦. ವೈ. ಜಿ. ಮುರಳೀಧರ, ೨೩೯, ೫ ನೇ ಸಿ ರಸ್ತೆ, ರೆಂಕೋ ಬಡಾವಣೆ, ವಿಜಯ ನಗರ, ಬೆಂಗಳೂರು–೫೭೦೦೦೪.

೧೧. ಎಸ್. ರಾಮರಾವ್, ೧೧೮೮, ಬಾಲಕೃಷ್ಣರಾವ್ ರೋಡ್, ಚಾಮರಾಜಪುರಂ, ಮೈಸೂರು–೫೭೦೦೪೪.

೧೨. ಹಾಲತಿ ಸೋಮಶೇಖರ್, "ಮೌನ", ಎಲ್. ೧೯, ೨ ನೇ ಹಂತ, ಕುವೆಂಪುನಗರ, ಮೈಸೂರು–೨೩.

Reg. No. KRNN 29 / WPP 6

LICENSE No. 21
LICENSED TO POST WITH PAYMENT



Edited by Chandrashekhararadhya, Printed by H. V. Sreenivasa char, Manager at Karnataka State Adult Education Council Press and Published by Karnataka State Adult Education Council, 5/1, Vinoba Road, Gangothri Campus, Mysore-570 006.